ಸಂಪುಟ: 05 ಸಂಚಿಕೆ: 215 ಪುಟಗಳು: 08 ಭಾನುವಾರ 19 ಅಕ್ಟೋಬರ್ 2025
www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail. com
ಸಂಪಾದಕರು: ಟಿ. ಹೊಂಬೇಗೌಡ RNI No. KARKAN/2021/80833 9448225696 +91 8035841833 ₹5

**ಮುಂಜಾನೆ ಮಾತು**

ನೇರಾನೇರವಾಗಿ ಮಾತನಾಡುವವರ ಗೆಳೆತನ ಅತ್ಯಮೂಲ್ಯವಾದುದು. ಕನ್ನಡಿಯಂತೆ ನಮ್ಮ ತಳುಕು ಹುಳುಕನ್ನು ಅವರು ತೋರಿ ತಿದ್ದುಕೊಳ್ಳಲು ನೆರವಾಗುತ್ತಾರೆ

# ಉದಯ ವಾಹಿನಿ

ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

## ಕೈದಿಗಳಿಗೆ ಪೆರೋಲ್ ಪ್ರಕ್ರಿಯೆ ಡಿಜಿಟಲೀಕರಣಕ್ಕೆ ಹೈ ಆದೇಶ

• ಉದಯವಾಹಿನಿ, ಬೆಂಗಳೂರು

ಕೈದಿಗಳಿಗೆ ಪೆರೋಲ್ ಮಂಜೂರು ಮಾಡುವ ಪ್ರಕ್ರಿಯೆಯನ್ನು ಡಿಜಿಟಲೀಕರಣಗೊಳಿಸಿ ಎಂದು ಹೈಕೋರ್ಟ್, ಸರ್ಕಾರಕ್ಕೆ ನಿರ್ದೇಶಿಸಿದೆ. ಅತ್ಯಾಚಾರ ಪ್ರಕರಣದಲ್ಲಿ ಶಿಕ್ಷೆಗೆ ಒಳಗಾಗಿರುವ ಅಪರಾಧಿಯೊಬ್ಬರ ತಾಯಿ, ನಮ್ಮ ಮನೆ ದುರಸ್ತಿ ಮಾಡಬೇಕಿದ್ದು, ಮಗನ ಸಹಾಯ ಬೇಕಿದೆ. ಅವನಿಗೆ 30 ದಿನಗಳ ಪೆರೋಲ್ ಮಂಜೂರು ಮಾಡಲು ನಿರ್ದೇಶಿಸಬೇಕು ಎಂದು ಕೋರಿದ್ದ ಅರ್ಜಿ ಪುರಸ್ಕರಿಸಿರುವ ನ್ಯಾಯಮೂರ್ತಿ ಸೂರಜ್ ಗೋವಿಂದರಾಜ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ. ಅರ್ಜಿ ಸಲ್ಲಿಸುವ ಹಾಲಿ ಪ್ರಕ್ರಿಯೆಯ ಬದಲಿಗೆ, ಪೆರೋಲ್ ಅರ್ಜಿ ಸಲ್ಲಿಕೆಯಿಂದ ಹಿಡಿದು ಅದನ್ನು ಪರಿಶೀಲಿಸಿ ಮಂಜೂರು ಮಾಡುವವರೆಗಿನ ಒಟ್ಟಾರೆ ಪ್ರಕ್ರಿಯೆಯನ್ನು ಆನ್‌ಲೈನ್ ವ್ಯವಸ್ಥೆಗೆ ಪರಿವರ್ತಿಸುವ ಬಗ್ಗೆ ನಾಲ್ಕು ವಾರಗಳಲ್ಲಿ ವಿಸ್ತ್ರತ ಯೋಜನಾ ವರದಿ ಸಲ್ಲಿಸಿ ಎಂದು ಮಾಹಿತಿ ತಂತ್ರಜ್ಞಾನ ವಿಭಾಗದ ಡಿಜಿಪಿಗೆ ನಿರ್ದೇಶಿಸಿದೆ. 2021ರ ಪೆರೋಲ್ ನಿಯಮಾವಳಿಯಲ್ಲಿ ಕೆಲವು ದೋಷಗಳಿದ್ದು, ಅವುಗಳನ್ನೂ ಸರಿಪಡಿಸಬೇಕಿದೆ ಎಂದು ನ್ಯಾಯಪೀಠ ಸೂಚಿಸಿದೆ. ಇನ್ನು ಮುಂದೆ ಪೆರೋಲ್ ಅರ್ಜಿ ಸಲ್ಲಿಸಲು ಆನ್ ಲೈನ್ ನಲ್ಲಿಯೂ ಅವಕಾಶ ಕಲ್ಪಿಸಬೇಕು ಎಂದು ನ್ಯಾಯಪೀಠ ತಾಕೀತು ಮಾಡಿದೆ.

## ಜೀವಬೆದರಿಕೆ: ಡಿಜಿಪಿಗೆ ದೂರು ಸಚಿವ ಪ್ರಿಯಾಂಕ್ ಖರ್ಗೆ

• ಉದಯವಾಹಿನಿ, ಬೆಂಗಳೂರು

ಚಿತ್ತಾಪುರ ಬಿಜೆಪಿ ಅಭ್ಯರ್ಥಿಯಿಂದ ನನಗೆ ಜೀವ ಬೆದರಿಕೆ ಬಂದಿದೆ. ಕಾನೂನು ಪಾಲಿಸುವಂತೆ ಹೇಳಿದ್ದಕ್ಕೆ ಮನೆಗೆ ನುಗ್ಗಿ ಹೊಡೆಯುವುದಾಗಿ ಬೆದರಿಸಿದ್ದಾರೆ. ಈ ಬಗ್ಗೆ ರಾಜ್ಯ ಪೊಲೀಸ್ ಮಹಾನಿರ್ದೇಶಕರಿಗೆ ದೂರು ನೀಡುತ್ತೇನೆ ಎಂದು ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು. ಸುದ್ದಿಗಾರರ ಜತೆ ಶನಿವಾರ ಮಾತನಾಡಿದ ಅವರು, ಚಿತ್ತಾಪುರದ ಬಿಜೆಪಿ ಅಭ್ಯರ್ಥಿ ನನಗೆ ಕರೆ ಮಾಡಿ ನೇರವಾಗಿ ಬೆದರಿಕೆ ಹಾಕಿದ್ದಾರೆ. ಆರ್‌ಎಸ್‌ಎಸ್‌ನವರು ದೇಶಭಕ್ತರು, ಮನೆಗೆ ನುಗ್ಗಿ ಹೊಡೆಯುತ್ತೇವೆ ಎಂದಿದ್ದಾರೆ. ಇದನ್ನು ನಾವು ಸಹಿಸಬೇಕೇ? ಈ ಬೆದರಿಕೆ ವಿರುದ್ಧ ನಾನು ಡಿಜಿಪಿ, ಪೊಲೀಸ್ ಆಯುಕ್ತರಿಗೆ ದೂರು ನೀಡುತ್ತೇನೆ ಎಂದರು. ನಾನು ಜನರಿಂದ ಆಯ್ಕೆಯಾದ ಪ್ರತಿನಿಧಿ. ಅವರು ಸವಾಲು ಹಾಕುತ್ತಿರುವುದು ನನಗಲ್ಲ, ರಾಜ್ಯದ ಕಾನೂನಿಗೆ. ಹೀಗೆ ಎಲ್ಲರೂ ಕಾನೂನು ಪಾಲಿಸುವುದಿಲ್ಲ ಎಂದರೆ ದೇಶದ ಗತಿ ಏನಾಗಬೇಕು? ಅನುಮತಿ ಇಲ್ಲದ ಕಾರಣವೇ ನಾವು ಎಲ್ಲವನ್ನೂ ತೆರವು ಮಾಡಿದ್ದೇವೆ ಎಂದರು.

## ಒಳ ಮೀಸಲು: ನೇಮಕಕ್ಕೆ ಒಪ್ಪಿಗೆ ಆದೇಶಕ್ಕೆ ತಡೆ

• ಉದಯವಾಹಿನಿ, ಬೆಂಗಳೂರು

ಪರಿಶಿಷ್ಟ ಜಾತಿಗಳಲ್ಲಿ ಒಳ ಮೀಸಲಾತಿ ಕಲ್ಪಿಸಿ ರಾಜ್ಯ ಸರ್ಕಾರ 2025ರ ಆಗಸ್ಟ್ 25ರಂದು ಹೊರಡಿಸಿರುವ ಆದೇಶವನ್ನು ಪ್ರಶ್ನಿಸಲಾದ ಅರ್ಜಿಗೆ ಸಂಬಂಧಿಸಿದ ಪ್ರಕರಣದಲ್ಲಿ ನೇಮಕಾತಿ ಪ್ರಕ್ರಿಯೆ ನಡೆಸಬಹುದು. ಆದರೆ, ನೇಮಕಾತಿ ಆದೇಶ ಹೊರಡಿಸುವಂತಿಲ್ಲ ಎಂದು ಹೈಕೋರ್ಟ್ ಆದೇಶಿಸಿದೆ. ಸರ್ಕಾರದ ಆದೇಶವನ್ನು ಪ್ರಶ್ನಿಸಿ ಕರ್ನಾಟಕ ಅಸ್ಪೃಶ್ಯ ಅಲೆಮಾರಿಗಳ ಮಹಾ ಒಕ್ಕೂಟದ ಅಧ್ಯಕ್ಷ ಶೇಷಪ್ಪ ಮತ್ತಿತರರು ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಸೂರಜ್ ಗೋವಿಂದರಾಜ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ. ಆಯೋಗವು 59 ಅಸ್ಪೃಶ್ಯ ಅಲೆಮಾರಿ, ಅರೆ-ಅಲೆಮಾರಿ, ಅತಿ ಸೂಕ್ಷ್ಮ ಜಾತಿಗಳನ್ನು ಅತ್ಯಂತ ಹಿಂದುಳಿದವರು ಎಂದು ಪರಿಗಣಿಸಿ ಪ್ರತ್ಯೇಕ ಗುಂಪಾಗಿ ಪ್ರವರ್ಗ ಎ ಅಡಿ ಶೇ 1ರಷ್ಟು ಒಳ ಮೀಸಲಾತಿ ಕಲ್ಪಿಸಿತ್ತು.ಆದರೆ, ಸರ್ಕಾರವು ಈ ಜಾತಿಗಳನ್ನು ಭೋವಿ, ಲಂಬಾಣಿ, ಕೊರಮ ಮತ್ತು ಕೊರಚ ಜಾತಿಗಳೊಂದಿಗೆ ಪ್ರವರ್ಗ ಸಿ ಅಡಿ ಸೇರಿಸಿ ಶೇ 5ರಷ್ಟು ಒಳ ಮೀಸಲಾತಿ ಕಲ್ಪಿಸಿದೆ. ಸರ್ಕಾರದ ಈ ನೀತಿಯನ್ನು ಅರ್ಜಿದಾರರು ಪ್ರಶ್ನಿಸಿದ್ದಾರೆ

## ದೊಡ್ಡಬಿದರಕಲ್ಲು ವಾರ್ಡ್ ಅಭಿವೃದ್ಧಿಗೆ ಯೋಜನೆ

• ಉದಯವಾಹಿನಿ, ಬೆಂಗಳೂರು

ದೊಡ್ಡಬಿದರಕಲ್ಲು ವಾರ್ಡ್ ಸಮಗ್ರ ಅಭಿವೃದ್ಧಿಗೆ ಯೋಜನೆ ರೂಪಿಸಲಾಗಿದ್ದು, ಕೋಟ್ಯಂತರ ರೂಪಾಯಿ ವೆಚ್ಚ ವಿವಿಧ ಕಾಮಗಾರಿಗಳು ಪ್ರಗತಿಯಲ್ಲಿವೆ ಎಂದು ಶಾಸಕ ಎಸ್.ಟಿ ಸೋಮಶೇಖರ್ ತಿಳಿಸಿದರು. ಅಂದ್ರಹಳ್ಳಿಯಲ್ಲಿ, ಸುತ್ತಮುತ್ತಲ ಬಡಾವಣೆಗಳಲ್ಲಿ ಬೆಂಗಳೂರು ಜಲಮಂಡಳಿ ವತಿಯಿಂದ ಕೈಗೊಂಡಿರುವ ಯುಜಿಡಿ, ಚರಂಡಿ, ಡಾಂಬರೀಕರಣ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿ ಮಾತನಾಡಿದರು. ರಸ್ತೆ, ಬೀದಿ ದೀಪ ಅಳವಡಿಕೆ, ಕಾವೇರಿ ನೀರು ಪೂರೈಕೆ ಸೇರಿ ವಾರ್ಡ್‌ನಲ್ಲಿ ಮೂಲಸೌಕರ್ಯ ಕಲ್ಪಿಸಲು ಯೋಜನೆ ರೂಪಿಸಲಾಗಿದ್ದು, ರಸ್ತೆ ಅಭಿವೃದ್ಧಿಗೆ ಕಾರ್ಯಾದೇಶವಾಗಿದೆ. ಅಂದ್ರಹಳ್ಳಿ ಹಾಗೂ ಸುತ್ತಮುತ್ತಲಿನ ಬಡಾವಣೆಗಳಲ್ಲಿ ಒಳಚರಂಡಿ ಕಾಮಗಾರಿ ಪೂರ್ಣಗೊಂಡ ನಂತರ ರಸ್ತೆ ನಿರ್ಮಾಣ ಕಾಮಗಾರಿ ಕೈಗೊಳ್ಳಲಾಗುವುದು ಎಂದರು. ಕ್ಷೇತ್ರದ ವಾರ್ಡ್ ಪುನರ್ ವಿಂಗಡಣೆ ವೇಳೆ ನಾಗರಿಕರ ಒತ್ತಾಸೆಯಂತೆ ಅಂದ್ರಹಳ್ಳಿ ವಾರ್ಡ್ ರಚಿಸಲು ಶಿಫಾರಸು ಮಾಡಲಾಗಿದೆ ಎಂದು ತಿಳಿಸಿದರು.

ಪಾಕಿಸ್ತಾನದ ಪ್ರತಿಯೊಂದು ಭೂಪ್ರದೇಶವೂ ಈಗ ನಮ್ಮ ಬ್ರಹ್ಮೋಸ್‌ನ ವ್ಯಾಪ್ತಿಯಲ್ಲಿದೆ. `ಆಪರೇಷನ್ ಸಿಂಧೂರ' ಸಮಯದಲ್ಲಿ ಬ್ರಹ್ಮೋಸ್ ಕ್ಷಿಪಣಿ ವ್ಯವಸ್ಥೆಯ ಮೂಲಕ ಭಾರತ ತನ್ನ ಶತ್ರುಗಳನ್ನು ಬಿಡುವುದಿಲ್ಲ ಎಂಬುದನ್ನು ಸಾಬೀತುಪಡಿಸಿದೆ ಎಂದು ಕೇಂದ್ರ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಹೇಳಿದರು. ಉತ್ತರ ಪ್ರದೇಶದ ಲಕ್ನೋದಲ್ಲಿರುವ ಬ್ರಹ್ಮೋಸ್ ಏರೋಸ್ಪೇಸ್ ಘಟಕದಲ್ಲಿ ತಯಾರಾದ ಬ್ರಹ್ಮೋಸ್ ಕ್ಷಿಪಣಿಗಳ ಮೊದಲ ಬ್ಯಾಚ್‌ಗೆ ಹಸಿರು ನಿಶಾನೆ ನೀಡಿದರು




**ರೆಡಿ ಆಯ್ತು ವೈರಿಗಳ ಎದೆಯಲ್ಲಿ ನಡುಕ ಹುಟ್ಟಿಸುವ ಬ್ರಹ್ಮೋಸ್ ಕ್ಷಿಪಣಿಯ ಮೊದಲ ಬ್ಯಾಚ್**



**ಆಪರೇಷನ್ ಸಿಂಧೂರ ಬರೀ ಟ್ರೇಲರ್, ಹುಷಾರ್ ರಕ್ಷಣಾ ಸಚಿವ ಖಡಕ್ ಎಚ್ಚರಿಕೆ**

# ಭಾರತದ ಬ್ರಹ್ಮಾಸ್ತ್ರ ಬ್ರಹ್ಮೋಸ್

## ಇನ್ಮುಂದೆ ಪಾಕ್ ಪೀಸ್ ಪೀಸ್

• ಉದಯವಾಹಿನಿ ಲಖನೌ

'ಆಪರೇಷನ್ ಸಿಂಧೂರ' ಇದು ಕೇವಲ 'ಟ್ರೇಲರ್' ಮಾತ್ರ ಎಂದು ಪಾಕಿಸ್ತಾನಕ್ಕೆ ಎಚ್ಚರಿಕೆ ನೀಡಿದರು. ಆಪರೇಷನ್ ಸಿಂಧೂರ ಗೆಲುವು ಒಂದು ಸಣ್ಣ ಘಟನೆಯಲ್ಲ. ಗೆಲುವು ನಮಗೆ ಅಭ್ಯಾಸವಾಗಿದೆ, ನಮ್ಮ ವಿರೋಧಿಗಳು ಬ್ರಹ್ಮೋಸ್‌ನಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ, ಬ್ರಹ್ಮೋಸ್ ಕೇವಲ ಕ್ಷಿಪಣಿಯಲ್ಲ, ಬದಲಾಗಿ ಭಾರತದ ಬೆಳೆಯುತ್ತಿರುವ ಸ್ಥಳೀಯ ಸಾಮರ್ಥ್ಯಗಳ ಸಂಕೇತವಾಗಿದೆ. ವೇಗ, ನಿಖರತೆ ಮತ್ತು ಶಕ್ತಿಯ ಈ ಸಂಯೋಜನೆಯು ಬ್ರಹ್ಮೋಸ್ ಅನ್ನು ವಿಶ್ವದ ಅತ್ಯುತ್ತಮ ಕ್ಷಿಪಣಿಗಳಲ್ಲಿ ಒಂದನ್ನಾಗಿ ಮಾಡುತ್ತಿದೆ.

ಬ್ರಹ್ಮೋಸ್ ಭಾರತೀಯ ಸಶಸ್ತ್ರ ಪಡೆಗಳ ಬೆನ್ನೆಲುಬಾಗಿ ಮಾರ್ಪಟ್ಟಿದೆ. ಭಾರತ ತನ್ನ ಭದ್ರತಾ ಅಗತ್ಯಗಳನ್ನು ಪೂರೈಸುವ ಸಾಮರ್ಥ್ಯ ಹೊಂದಿದೆ ಎಂದು ತಿಳಿಸಿದರು.

ನಂತರ ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಮಾತನಾಡಿ, ಭಾರತವು ಈಗ ತನ್ನ ಭದ್ರತಾ ಅಗತ್ಯಗಳನ್ನು ಮಾತ್ರವಲ್ಲದೆ ಪ್ರಪಂಚದಾದ್ಯಂತದ ತನ್ನ ಸ್ನೇಹಪರ ರಾಷ್ಟ್ರಗಳ ಭದ್ರತಾ ಅಗತ್ಯಗಳನ್ನು ಪೂರೈಸುವ ಸಾಮರ್ಥ್ಯವನ್ನು ಹೊಂದಿದೆ.

ಲಕ್ನೋದ ಬ್ರಹ್ಮೋಸ್ ಏರೋಸ್ಪೇಸ್ ಘಟಕದಲ್ಲಿ ತಯಾರಾದ ಬ್ರಹ್ಮೋಸ್ ಕ್ಷಿಪಣಿಗಳ ಮೊದಲ ಬ್ಯಾಚ್‌ಗೆ ಚಾಲನೆ ನೀಡುವ ಮೂಲಕ ಪ್ರಧಾನಿ ನರೇಂದ್ರ ಮೋದಿಯವರ 'ಮೇಕ್ ಇನ್ ಇಂಡಿಯಾ' ಪ್ರತಿಜ್ಞೆಯನ್ನು ಈಡೇರಿಸುವ ಅದೃಷ್ಟಶಾಲಿ ನಾನು. ಇದು ಆತ್ಮನಿರ್ಭರದ ಅಡಿಪಾಯ ಎಂದರು.

**ರಕ್ಷಣಾ ಸಾಮಗ್ರಿಗಳ ತಯಾರಿಕೆಯಲ್ಲಿ ಹೊಸ ದಿಕ್ಕು:** ಬ್ರಹ್ಮಸ್ ಸಶಸ್ತ್ರ ಪಡೆಗಳ ಬೆನ್ನೆಲುಬಾಗಿ ಮಾರ್ಪಟ್ಟಿದೆ. ಪ್ರತಿ ವರ್ಷ ಸುಮಾರು 100 ಕ್ಷಿಪಣಿಗಳನ್ನು ಉಡಾಯಿಸಲಾಗುವುದು. ಸೇನೆ, ನೌಕಾಪಡೆ ಮತ್ತು ವಾಯುಪಡೆಗೆ ಕ್ಷಿಪಣಿಗಳನ್ನು ಪೂರೈಸಲಾಗುವುದು. ಈ ಬ್ರಹ್ಮಸ್ ಸೌಲಭ್ಯ ಸುಮಾರು 200 ಎಕರೆಗಳಲ್ಲಿ ನಿರ್ಮಿಸಲಾಗಿದೆ. ಒಟ್ಟು ವೆಚ್ಚ ಸುಮಾರು 380 ಕೋಟಿ ರೂ.ಗಳಾಗಿದ್ದು, ಇದು ನೂರಾರು ಜನರಿಗೆ ಉದ್ಯೋಗವನ್ನು ಒದಗಿಸುತ್ತಿದೆ. ಆತ್ಮನಿರ್ಭರ ಭಾರತದ ಮೂಲಕ ರಕ್ಷಣಾ ಸಾಮಗ್ರಿಗಳ ತಯಾರಿಕೆಗೆ ಹೊಸ ದಿಸೆ ಸಿಗಲಿದೆ' ಎಂಬ ವಿಶ್ವಾಸವನ್ನು ರಾಜನಾಥ್ ಸಿಂಗ್ ವ್ಯಕ್ತಪಡಿಸಿದೆ. ಹೇಳಿದರು. ಲಕ್ಷದ ಸರೋಜಿನಿ ನಗರದಲ್ಲಿ ಬ್ರಹ್ಮಸ್ ಏರೋಸ್ಪೇಸ್‌ನ ಕ್ಷಿಪಣಿ ತಯಾರಿಕೆ ಮತ್ತು ಪರೀಕ್ಷಾ ಕೇಂದ್ರವಿದೆ. ಈ ಘಟಕವು ಮೇ 11ರಂದು ಉದ್ಘಾಟನೆಯಾಗಿತ್ತು. ಇಲ್ಲಿ ತಯಾರಾಗುವ ಕ್ಷಿಪಣಿಗಳ ಯಶಸ್ವಿ ಪ್ರಯೋಗ ಪರೀಕ್ಷೆಗಳ ನಂತರ, ಭಾರತೀಯ ಸೇನೆಯಲ್ಲಿ ಅದನ್ನು ನಿಯೋಜಿಸಲಾಗುತ್ತದೆ. ಕಾರ್ಯಕ್ರಮದಲ್ಲಿ ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ, ಉಪ ಮುಖ್ಯಮಂತ್ರಿ ಬ್ರಜೇಶ್ ಪಾಠಕ್, ಸಚಿವ ನಂದ ಗೋಪಾಲ ಗುಪ್ತಾ ನಂದಿ ಇದ್ದರು.

**ಬ್ರಹ್ಮಸ್ ಕ್ಷಿಪಣಿಗಳ ಮೊದಲ ಬ್ಯಾಚ್‌ಗೆ ರಾಜನಾಥ್, ಯೋಗಿ ಚಾಲನೆ:** ಇಬ್ಬರು ನಾಯಕರು ಲಕ್ನೋದ ಬ್ರಹ್ಮಸ್ ಏರೋಸ್ಪೇಸ್ ಘಟಕದಲ್ಲಿ ತಯಾರಾದ ಬ್ರಹ್ಮಸ್ ಕ್ಷಿಪಣಿಗಳ ಮೊದಲ ಬ್ಯಾಚ್‌ಗೆ ಚಾಲನೆ ನೀಡಿದರು. ಅಧಿಕೃತ ಹೇಳಿಕೆಯಲ್ಲಿ, ಸರ್ಕಾರವು ಇದು ಉತ್ತರ ಪ್ರದೇಶ ರಕ್ಷಣಾ ಕೈಗಾರಿಕಾ ಕಾರಿಡಾರ್ (ಯುಪಿಡಿಐಸಿ)ಗೆ ಒಂದು ಮೈಲಿಗಲ್ಲು ಮಾತ್ರವಲ್ಲದೆ ರಕ್ಷಣಾ ಉತ್ಪಾದನೆಯಲ್ಲಿ ಸ್ವಾವಲಂಬನೆ ಸಾಧಿಸುವ ಭಾರತದ ಸಂಕಲ್ಪಕ್ಕೆ ಹೊಸ ಶಕ್ತಿಯನ್ನು ನೀಡುತ್ತದೆ.

**3 ಸಾವಿರ ಕೋಟಿ ಆದಾಯ ಸೃಷ್ಟಿ**

**ಮುಂದಿನ ಕೆಲವು ವರ್ಷಗಳಲ್ಲಿ ಇತರ ದೇಶಗಳ ತಜ್ಞರು ಲಕ್ನೋಗೆ ಸೇರುವುದನ್ನು ನಾವು ನೋಡಬಹುದು,ಇದರ ಮೂಲಕ ಲಕ್ನೋವನ್ನು ಜ್ಞಾನ ಕೇಂದ್ರ ಮತ್ತು ರಕ್ಷಣಾ ತಂತ್ರಜ್ಞಾನದಲ್ಲಿ ನಾಯಕನಾಗಿ ಮಾರ್ಪಡಾಗುತ್ತದೆ ಎಂದ ಅವರು, ಬ್ರಹ್ಮೋಸ್‌ನ ಲಕ್ನೋ ಘಟಕದ ವಹಿವಾಟು ಮುಂದಿನ ಹಣಕಾಸು ವರ್ಷದಲ್ಲಿ ಸುಮಾರು ರೂ.3,000 ಕೋಟಿಗಳಷ್ಟಾಗುತ್ತದೆ. ಇದರಿಂದ ಜಿಎಸ್‌ಟಿ ಸಂಗ್ರಹವು ವರ್ಷಕ್ಕೆ ರೂ.5,000 ಕೋಟಿಗಳಷ್ಟಿರುತ್ತದೆ ಹೇಳಿದ್ದಾರೆ.**

1. ಲಕ್ನೋದ ಬ್ರಹ್ಮೋಸ್ ಏರೋಸ್ಪೇಸ್ ನಲ್ಲಿ ತಯಾರದ ಮೊದಲ ಬ್ಯಾಚ್ ನ ಬ್ರಹ್ಮೋಸ್ ಕ್ಷಿಪಣಿ ಉದ್ಘಾಟಿಸಿದ ರಾಜನಾಥ್ ಸಿಂಗ್
2. ಆಪರೇಷನ್ ಸಿಂಧೂರ ಬರೀ ಟ್ರೇಲರ್ ಮಾತ್ರ ಎಂದು ಪಾಕ್ ಗೆ ಎಚ್ಚರಿಕೆ
3. ಬ್ರಹ್ಮೋಸ್ ಘಟಕ ಈಗಾಗಲೇ ಎರಡು ದೇಶಗಳೊಂದಿಗೆ ಒಪ್ಪಂದಕ್ಕೆ ಸಹಿ ಎಂದ ರಾಜನಾಥ್ ಸಿಂಗ್

## ಪಾಕ್ 'ಬ್ರಹ್ಮೋಸ್'ನಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ

**ಆಪರೇಷನ್ ಸಿಂಧೂರ ಬರೀ ಟ್ರೇಲರ್ ಮಾತ್ರ**

**ಇನ್ನೂ ಆಪರೇಷನ್ ಸಿಂಧೂರ್‌ನಲ್ಲಿ ನಡೆದದ್ದು ಕೇವಲ ಟ್ರೇಲರ್ ಮಾತ್ರ. ಆದರೆ ಆ ಟ್ರೇಲರ್ ಭಾರತ ಪಾಕಿಸ್ತಾನಕ್ಕೆ ಜನ್ಮ ನೀಡಬಹುದಾದರೆ ಅದು ಬೇರೆ ಏನೂ ಬೇಕಾದರೂ ಮಾಡಬಹುದು ಎಂಬುದನ್ನು, ನಾವು ಅದರ ಬಗ್ಗೆ ಏನೂ ಹೆಚ್ಚಾಗಿ ಹೇಳಬೇಕಾಗಿಲ್ಲ ಎಂಬುದನ್ನು ಸ್ವತಃ ಪಾಕಿಸ್ತಾನಕ್ಕೆ ಅರಿವಾಗುವಂತೆ ಮಾಡಿದೆ ಎಂದಿದ್ದಾರೆ. ಸೂಪರ್‌ಸಾನಿಕ್ ಕ್ರೂಸ್ ಕ್ಷಿಪಣಿ ವ್ಯವಸ್ಥೆಯ ತಯಾರಕರಾದ ಬ್ರಹ್ಮೋಸ್ ಏರೋಸ್ಪೇಸ್, ಲಕ್ನೋದ ಸರೋಜಿನಿ ನಗರದಲ್ಲಿರುವ ತನ್ನ ಹೊಸ ಏಕೀಕರಣ ಮತ್ತು ಪರೀಕ್ಷಾ ಘಟಕದಿಂದ ಮೊದಲ ಬ್ಯಾಚ್‌ನ ಉತ್ಪಾದನೆಯನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದೆ ಎಂದು ಘೋಷಿಸಿದೆ. ಬ್ರಹ್ಮೋಸ್ ಕ್ಷಿಪಣಿಯ ಕುರಿತು ಮಾತನಾಡಿದ ರಾಜನಾಥ್ ಸಿಂಗ್ ಬ್ರಹ್ಮೋಸ್ ತಂಡವು ಕೇವಲ ಒಂದು ತಿಂಗಳೊಳಗೆ ಎರಡು ದೇಶಗಳೊಂದಿಗೆ ಸುಮಾರು 4,000 ಕೋಟಿ ರೂಪಾಯಿ ಮೌಲ್ಯದ ಒಪ್ಪಂದಗಳಿಗೆ ಸಹಿ ಹಾಕಿದೆ ಎಂದಿದ್ದಾರೆ.**

**ಪಾಕ್‌ಗೆ ಮೋದಿ ಎಚ್ಚರಿಕೆ**

**ಸ್ವಾವಲಂಬಿ ಭಾರತವು ಮೌನವಾಗಿರುವುದಿಲ್ಲ, ಬದಲಿಗೆ ಪಾಕಿಸ್ತಾನದ ವಿರುದ್ಧದ ಆಪರೇಷನ್ ಸಿಂಧೂರ್‌ನಲ್ಲಿ ಕಂಡುಬರುವಂತೆ ಸರ್ಜಿಕಲ್ ಸ್ಟ್ರೈಕ್‌ಗಳ ಮೂಲಕ ಸೂಕ್ತವಾಗಿ ಪ್ರತಿಕ್ರಿಯಿಸುತ್ತದೆ ಎಂದು ಮೋದಿ ಹೇಳಿದರು. ಭಾರತ್ ಮಂಟಪದಲ್ಲಿ ನಡೆದ ಎನ್‌ಡಿಟಿವಿ ವಿಶ್ವ ಶೃಂಗಸಭೆಯಲ್ಲಿ ಮಾತನಾಡಿದ ಪ್ರಧಾನಿ ಮೋದಿ, 2014ರಲ್ಲಿ ನಾವು ಅಧಿಕಾರಕ್ಕೆ ಬರುವ ಮೊದಲು, ಭಯೋತ್ಪಾದನೆ, ಮಹಿಳಾ ಸುರಕ್ಷತೆ ಮತ್ತು ನೀತಿ ಪಾರ್ಶ್ವವಾಯು ಮುಂತಾದ ಹಲವಾರು ಸಮಸ್ಯೆಗಳನ್ನು ಭಾರತ ಹೇಗೆ ನಿವಾರಿಸುತ್ತದೆ ಎಂಬ ಬಗ್ಗೆ ತೀವ್ರ ಅನುಮಾನಗಳಿದ್ದವು, ಆದರೆ ಕಳೆದ 11 ವರ್ಷಗಳಲ್ಲಿ ಭಾರತ ಪ್ರತಿಯೊಂದು ಸವಾಲನ್ನು ಜಯಿಸುವಲ್ಲಿ ಯಶಸ್ವಿಯಾಗಿದೆ ಎಂದು ಅವರು ಹೇಳಿದರು. ಈಗ, ಸ್ವಾವಲಂಬಿ ಭಾರತ ಮೌನವಾಗಿಲ್ಲ, ಅದು ಸರ್ಜಿಕಲ್ ಸ್ಟ್ರೈಕ್, ವೈಮಾನಿಕ ದಾಳಿ ಮತ್ತು ಆಪರೇಷನ್ ಸಿಂಧೂರ್ ಮೂಲಕ ಸೂಕ್ತ ಪ್ರತಿಕ್ರಿಯೆ ನೀಡುತ್ತದೆ' ಎಂದು ಭಯೋತ್ಪಾದನೆಯ ಕುರಿತು ದಿಟ್ಟ ಪ್ರತಿಕ್ರಿಯೆಯ ಬಗ್ಗೆ ಮೋದಿ ಹೇಳಿದರು.**

## 6-7ನೇ ತರಗತಿಗೆ ಬೋಧನೆ: ಪಿಎಸ್‌ಟಿ ಶಿಕ್ಷಕರಿಗೆ ಸರ್ಕಾರ ಅಸ್ತು

• ಉದಯವಾಹಿನಿ, ಬೆಂಗಳೂರು

**ಟಿಇಟಿ ಅರ್ಹತೆಗೆ ಶಿಕ್ಷಕರ ಸಂಘ ಆಕ್ಷೇಪ**

ಪ್ರಾಥಮಿಕ ಶಾಲಾ ಶಿಕ್ಷಕರಿಗೆ (ಪಿಎಸ್) ಆರು ಮತ್ತು ಏಳನೇ ತರಗತಿಗೆ ಪಾಠ ಮಾಡಲು ಅವಕಾಶ ಕಲ್ಪಿಸಿ ಶಾಲಾ ಶಿಕ್ಷಣ ಇಲಾಖೆ ಅಧಿಸೂಚನೆ ಹೊರಡಿಸಿದ್ದು, ಆಕ್ಷೇಪಣೆ ಸಲ್ಲಿಸಲು 15 ದಿನಗಳ ಅವಕಾಶ ನೀಡಿದೆ.

ವೃಂದ ಮತ್ತು ನೇಮಕಾತಿ ನಿಯಮ-2017ಕ್ಕೆ ಸರ್ಕಾರ ತಿದ್ದುಪಡಿ ತಂದಿದೆ. ಇದರಿಂದ ಪದವಿ, ಶಿಕ್ಷಕರ ಅರ್ಹತಾ ಪರೀಕ್ಷೆ (ಟಿಇಟಿ) ಪ್ರಮಾಣ ಪತ್ರ ಹೊಂದಿದ ಪ್ರಾಥಮಿಕ ಶಾಲಾ ಶಿಕ್ಷಕರಿಗೆ, ವೃಂದ ಮತ್ತು ನೇಮಕಾತಿ ನಿಯಮಕ್ಕೆ 2017ರಲ್ಲಿ ತಿದ್ದುಪಡಿ ತರುವುದಕ್ಕೆ ಮೊದಲು ಜಾರಿಯಲ್ಲಿದ್ದಂತೆ ಏಳನೇ ತರಗತಿಯವರೆಗೂ ಬೋಧಿಸಲು ಅವಕಾಶ ಸಿಗಲಿದೆ. ರಾಷ್ಟ್ರೀಯ ಶಿಕ್ಷಣ ನೀತಿಯ ಶಿಫಾರಸುಗಳಿಗೆ ಅನುಗುಣವಾಗಿ ಪ್ರಾಥಮಿಕ ಶಾಲಾ ಶಿಕ್ಷಕರ ಹುದ್ದೆಯ ಪದನಾಮ ಬದಲಾಯಿಸಿ, ಹೊಸ ವೃಂದ ಮತ್ತು ನೇಮಕಾತಿ ನಿಯಮವನ್ನು ರೂಪಿಸಲಾಗಿತ್ತು. ಇದರಿಂದ 1ರಿಂದ 5ನೇ ತರಗತಿಯವರೆಗೆ ಬೋಧಿಸುವ ಶಿಕ್ಷಕರನ್ನು ಪ್ರಾಥಮಿಕ ಶಾಲಾ ಶಿಕ್ಷಕರು ಹಾಗೂ 6 ರಿಂದ 8ನೇ ತರಗತಿ ಬೋಧಿಸುವ ಶಿಕ್ಷಕರನ್ನು ಪದವೀಧರ ಶಿಕ್ಷಕರೆಂದು ಪ್ರತ್ಯೇಕಗೊಳಿಸಲಾಗಿತ್ತು. ಇದರ ಪರಿಣಾಮ 2016ಕ್ಕಿಂತ ಮೊದಲು 1ರಿಂದ 7 ಹಾಗೂ 1ರಿಂದ 8ರ ವೃಂದಕ್ಕೆ ನೇಮಕವಾಗಿದ್ದ ಎಲ್ಲಾ ಪ್ರಾಥಮಿಕ ಶಾಲಾ ಶಿಕ್ಷಕರು 1ರಿಂದ 5ನೇ ತರಗತಿಗೆ ಸೀಮಿತಗೊಂಡಿದ್ದರು. ಪ್ರಾಥಮಿಕ ಶಾಲೆಗಳ ಮುಖ್ಯ ಶಿಕ್ಷಕರ ಹುದ್ದೆ ಹಾಗೂ ಪ್ರೌಢಶಾಲಾ ಸಹಶಿಕ್ಷಕರ ಹುದ್ದೆಗಳ ಬಡ್ತಿಯಲ್ಲೂ ಪದವೀಧರ ಶಿಕ್ಷಕರಿಗೆ ಹೆಚ್ಚಿನ ಆದ್ಯತೆ ನೀಡಲಾಗಿತ್ತು. ಹಲವಾರು ವರ್ಷಗಳಿಂದ ಕರ್ತವ್ಯ ಸಲ್ಲಿಸುತ್ತಿರುವ ಪ್ರಾಥಮಿಕ ಶಾಲಾ ಶಿಕ್ಷಕರು, ಇತ್ತೀಚಿಗೆ ಬಂದ ಪದವೀಧರ ಶಿಕ್ಷಕರ ಕೈಕೆಳಗೆ ಕೆಲಸ ಸಲ್ಲಿಸುವಂತಾಗಿತ್ತು. ಹುದ್ದೆಗಳ ಮರುವಿಂಗಡಣೆಯಲ್ಲೂ ಪದವೀಧರ ಶಿಕ್ಷಕರಿಗೆ ಆದ್ಯತೆ ನೀಡಿದ್ದರಿಂದ ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಹುದ್ದೆಗಳ ಕೊರತೆ ಎದುರಾಗಿತ್ತು. ಅನ್ಯಾಯ ಖಂಡಿಸಿ ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ 2017ರಿಂದಲೂ ಹೋರಾಟ ನಡೆಸುತ್ತಾ ಬಂದಿತ್ತು. ಒಂದು ಬಾರಿ ವೇತನ ಬಡ್ತಿ ಹಾಗೂ ಮುಖ್ಯ ಶಿಕ್ಷಕರ ಹುದ್ದೆಗೆ ಬಡ್ತಿಗೆ ಅವಕಾಶ ಕಲ್ಪಿಸಲು ವೃಂದ ಮತ್ತು ನೇಮಕಾತಿ ನಿಯಮ-2017ಕ್ಕೆ ತಿದ್ದುಪಡಿ ತರಲು ಈಚೆಗೆ ನಡೆದ ಸಂಪುಟ ಸಭೆ ಸಮ್ಮತಿಸಿತ್ತು.

ಪ್ರಾಥಮಿಕ ಶಾಲೆಯ ಎಲ್ಲಾ ಶಿಕ್ಷಕರಿಗೂ 2017ಕ್ಕೂ ಹಿಂದೆ ಇದ್ದಂತೆ ಅವಕಾಶ ನೀಡಬೇಕು. ಟಿಇಟಿ ಅರ್ಹತೆಯನ್ನು ಕಡ್ಡಾಯ ಮಾಡಬಾರದು ಎಂದು ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಚಂದ್ರಶೇಖರ ನುಗ್ಗಲಿ ಒತ್ತಾಯಿಸಿದ್ದಾರೆ. ಸರ್ಕಾರ ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಬಡ್ತಿ ನೀಡುತ್ತಿಲ್ಲ. ಹಿಂದೆ ಇದ್ದ ಅವಕಾಶವನ್ನು ಕಿತ್ತುಕೊಂಡಿದ್ದನ್ನು ಮರಳಿಸುತ್ತಿದೆ.



## ಬೆಂಗಳೂರಿನಲ್ಲಿ ಹಳೆ ಮರಗಳು, ಕೊಂಬೆಗಳಿಂದ ನಿರಂತರ ಅನಾಹುತ!


• ಬೆಂಗಳೂರಿನಲ್ಲಿವೆ ಅಪಾಯಕಾರಿ ಮರಗಳು • ಮರಗಳು ಬಿದ್ದು ಜನಸಾಮಾನ್ಯರ ಪ್ರಾಣ ಹಾನಿ • ಮರಗಳ ತೆರವು ಯಾವಾಗ

• ಉದಯವಾಹಿನಿ ಬೆಂಗಳೂರು

ಸಿಲಿಕಾನ್ ಸಿಟಿ, ಗ್ರೀನ್ ಸಿಟಿ ಎಂದೆಲ್ಲಾ ಕರೆಯಲ್ಪಡುತ್ತಿರುವ ಬೆಂಗಳೂರಿನಲ್ಲಿ ಎಲ್ಲಿ ನೋಡಿದರೂ ಮರಗಳ ಸಾಲು ಕಾಣಿಸುತ್ತಿವೆ. ಸುಂದರ ನಗರದಲ್ಲಿ ಹಸಿರು ಬೇಕೇ ಬೇಕು. ಆದರೆ ಹಳೆಯ ಮರಗಳು, ಅಪಾಯಕಾರಿ ಕೊಂಬೆಗಳು ಹಲವು ಅನಾಹುತಗಳನ್ನು ಸೃಷ್ಟಿಸುತ್ತಿವೆ. ಮರದ ಕೊಂಬೆ ಮುರಿದು ಬಿದ್ದು ಪದೇ ಪದೇ ಅನಾಹುತಗಳು ನಡೆಯುತ್ತಿದ್ದು, ಜನರು ಪ್ರಾಣ ಕಳೆದುಕೊಳ್ಳುವಂತಾಗಿದೆ. ಕೆಲವು ದಿನಗಳ ಹಿಂದೆ ನಗರದ ಸೋಲದೇವನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಬೃಹತ್ ಮರ ಬಿದ್ದ ಪರಿಣಾಮ 24ರ ಹರೆಯದ ಯುವತಿ ಸ್ಥಳದಲ್ಲೇ ಮೃತಪಟ್ಟ ಘಟನೆ ನಡೆದಿತ್ತು. ಮತ್ತೊಬ್ಬ ಬೈಕ್ ಸವಾರ ಗಂಭೀರವಾಗಿ ಗಾಯಗೊಂಡಿದ್ದಾರೆ.

ಸ್ಯಾಂಡಲ್‌ವುಡ್ ಪಂದ್ಯ ನೋಡಿ ಬೈಕ್‌ನಲ್ಲಿ ಮರಳುತ್ತಿದ್ದ 24 ವರ್ಷದ ಯುವತಿ ಮೇಲೆ ಬೃಹತ್ ಮರದ ಕೊಂಬೆಯೊಂದು ಬಿದ್ದ ಪರಿಣಾಮ ಅವರು ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ. 24 ವರ್ಷದ ಕೀರ್ತನಾ ದುರ್ದೈವಿ. ಭಾಸ್ಕರ್ ಎಂಬ ಬೈಕ್ ಚಾಲಕ ತೀವ್ರಗಾಗಿ ಗಾಯಗೊಂಡು ಆಸ್ಪತ್ರೆಗೆ ದಾಖಲಾಗಿದ್ದರು.



ಇದೊಂದು ಘಟನೆ ಮಾತ್ರವಲ್ಲ, ಬೆಂಗಳೂರಿನಲ್ಲಿ ಇತ್ತೀಚಿನ ದಿನಗಳಲ್ಲಿ ಇಂತಹ ಹಲವು ಘಟನೆಗಳು ವರದಿಯಾಗುತ್ತಿವೆ.

**ಅಪಾಯದ ಸ್ಥಿತಿಯಲ್ಲಿ?**

• 2022-23
ಅಪಾಯದ ಸ್ಥಿತಿಯ ಮರಗಳು- 79
ಅಪಾಯದ ಸ್ಥಿತಿಯ ರೆಂಬೆ, ಕೊಂಬೆಗಳು-181

• 2023-24
ಅಪಾಯದ ಸ್ಥಿತಿಯ ಮರಗಳು-102
ಅಪಾಯದ ಸ್ಥಿತಿಯ ರೆಂಬೆ, ಕೊಂಬೆಗಳು- 217

• 2024-25
ಅಪಾಯದ ಸ್ಥಿತಿಯ ಮರಗಳು-138
ಅಪಾಯದ ಸ್ಥಿತಿಯ ರೆಂಬೆ, ಕೊಂಬೆಗಳು- 619

• ಪ್ರಸ್ತುತ ಸಾಲು
ಅಪಾಯದ ಸ್ಥಿತಿಯ ಮರಗಳು- 77
ಅಪಾಯದ ಸ್ಥಿತಿಯ ರೆಂಬೆ, ಕೊಂಬೆಗಳು- 173

ಈ ಹಿಂದೆ ಬೆಂಗಳೂರಿನ ಬನಶಂಕರಿಯಲ್ಲಿ ಮರದ ಕೊಂಬೆ ಬಿದ್ದು ಗಾಯಗೊಂಡಿದ್ದ ಅಕ್ಷಯ್ (29) ಎಂಬುವವರ ಮೇಲೆ ಮರದ ಕೊಂಬೆ ಬಿದ್ದು ಮೃತಪಟ್ಟಿದ್ದರು. ಅಷ್ಟೇ ಅಲ್ಲದೆ, ದ್ವಿಚಕ್ರ ವಾಹನದಲ್ಲಿ ಹೋಗುತ್ತಿದ್ದಾಗ ಮರದ ಕೊಂಬೆ ಬಿದ್ದು ಗಿರಿಯಪ್ಪ (48) ಎಂಬುವರು ಸ್ಥಳದಲ್ಲೇ ಮೃತಪಟ್ಟರೆ, ರಮೇಶ್ ಎಂಬುವರು ಗಾಯಗೊಂಡಿದ್ದರು. ಹೀಗೆ ಸರಣಿ ಅವಘಡಗಳು ನಗರದಲ್ಲಿ ವರದಿಯಾಗುತ್ತಿವೆ. ಘಟನೆ ನಡೆದಾಗ ಪಾಲಿಕೆ ಅಧಿಕಾರಿಗಳು ಎಚ್ಚೆತ್ತುಕೊಳ್ಳುತ್ತಾರೆ. ಮತ್ತೆ ಈ ಬಗ್ಗೆ ನಿರ್ಲಕ್ಷ್ಯ ವಹಿಸಲಾಗುತ್ತಿದೆ. ಇದಕ್ಕೊಂದು ಪರಿಹಾರದ ಕ್ರಮಗಳನ್ನು ಕೈಗೊಳ್ಳಲಾಗುತ್ತಿಲ್ಲ. ಪರಿಣಾಮವಾಗಿ ಪದೇ ಪದೇ ಇಂತಹ ದುರಂತಗಳು ನಡೆಯುತ್ತಿವೆ. ಅಮಾಯಕರು, ಜನಸಾಮಾನ್ಯರು ಪ್ರಾಣ ಕಳೆದುಕೊಳ್ಳುತ್ತಿದ್ದಾರೆ.

**ಕ್ರಮಗಳೇನು?:** 2024-25ನೇ ಸಾಲಿನ ಮಳೆಗಾಲದಲ್ಲಿ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಸುಮಾರು 1162 ಮರಗಳು ಹಾಗೂ 3162 ರಂಬೆ ಕೊಂಬೆಗಳು ಬಿದ್ದಿರುವ ಪ್ರಕರಣಗಳು ದಾಖಲಾಗಿದ್ದು, ತೆರವುಗೊಳಿಸಲು ಕ್ರಮವಹಿಸಲಾಗಿರುತ್ತದೆ. ಪ್ರತೀ ವರ್ಷ ಪಾಲಿಕೆ ವ್ಯಾಪ್ತಿಯಲ್ಲಿ ನೆಡುತೋಪು ನಿರ್ಮಾಣ ಮತ್ತು ನಿರ್ವಹಣೆ ಕಾಮಗಾರಿಯಡಿ ಗಿಡಗಳನ್ನು ಬೆಳೆಸಲಾಗುತ್ತಿದ್ದು 2024-25 ಸಾಲಿನಲ್ಲಿ ಒಂದು ಲಕ್ಷ ಗಿಡಗಳನ್ನು ನೆಟ್ಟು ಪೋಷಣೆ ಮಾಡಲಾಗುತ್ತಿದೆ. ಬಿಬಿಎಂಪಿ ಅರಣ್ಯ ಘಟಕದಲ್ಲಿ ಮರಗಳ ವ್ಯವಸ್ಥಿತ ನಿರ್ವಹಣೆಗೆ 30 ತಂಡಗಳು ಕಾರ್ಯನಿರ್ವಹಿಸುತ್ತಿವೆ. ಹೆಚ್ಚುವರಿಯಾಗಿ 11 ಆರ್.ಆರ್.ಟಿ ತಂಡಗಳನ್ನು ನಿಯೋಜಿಸಿಕೊಂಡು ಒಣಗಿದ / ಅಪಾಯ ಸ್ಥಿತಿಯ, ಸಾರ್ವಜನಿಕರಿಗೆ ಹಾಗೂ ಸಾರಿಗೆ ಸಂಪರ್ಕಕ್ಕೆ ತೊಂದರೆಯಾಗುವ ಮರಗಳು/ರೆಂಬೆ-ಕೊಂಬೆಗಳನ್ನು ಪ್ರತಿನಿತ್ಯ ತೆರವುಗೊಳಿಸಲು ಕ್ರಮವಹಿಸಲಾಗುತ್ತಿದೆ. ಅನಿರೀಕ್ಷಿತ ಘಟನೆಯ ಸಂದರ್ಭದಲ್ಲಿ 1533 ಬಿಬಿಎಂಪಿ ಸಹಾಯವಾಣಿಗೆ ಕರೆ ಮಾಡಿ ದೂರು ದಾಖಲಿಸಬಹುದಾಗಿದ್ದು, ಆದ್ಯತೆ ಮೇರೆಗೆ ಸ್ಥಳಕ್ಕೆ ಧಾವಿಸಿ, ಕ್ರಮಕೈಗೊಳ್ಳಲಾಗುತ್ತಿದೆ ಎಂದು ಬೆಂಗಳೂರು ನಗರಾಭಿವೃದ್ಧಿ ಇಲಾಖೆ ತಿಳಿಸಿದೆ.

**ಈ ದಿನದ ದರ** ಪೆಟ್ರೋಲ್: 103.50 ₹/L ಡೀಸೆಲ್ : 90.03 ₹/L ಬಂಗಾರ: ₹13,086 /Gram24ct ₹11,995/Gram22ct ಬೆಳ್ಳಿ: ₹180.00/Gram

# ಬಿಜೆಪಿ ಅವಧಿಯಲ್ಲೂ ರಸ್ತೆಗುಂಡಿ ಟೀಕಿಸಿದ್ದೆ, ಆಗ ಬಿಎಸ್‌ವೈ ಏನು ಮಾಡಿದ್ರು ಗೊತ್ತಾ

• ಉದಯವಾಹಿನಿ, ಬೆಂಗಳೂರು

ಸತತವಾಗಿ ಸುರಿಯುತ್ತಿರುವ ಮಳೆಯಿಂದಾಗಿ ರಾಜಧಾನಿ ಬೆಂಗಳೂರಿನ ಮೂಲಭೂತ ಸೌಕರ್ಯದಿನದಿಂದ ದಿನಕ್ಕೆ ಹಾಳಾಗುತ್ತಿದೆ. ಅದರಲ್ಲೂ, ಪ್ರಮುಖವಾಗಿ ನಗರದ ರಸ್ತೆಗುಂಡಿಗಳು, ರಾಷ್ಟ್ರ ಮಟ್ಟದಲ್ಲಿ ಸುದ್ದಿಯಾಗುತ್ತಿದೆ. ಇದನ್ನು ಪ್ರಶ್ನಿಸುತ್ತಿರುವವರನ್ನು ಸಚಿವರುಗಳು ಟೀಕಿಸುತ್ತಿದ್ದಾರೆ. ನಗರದ ದೊಡ್ಡ ಉದ್ಯಮಿಗಳ ಪೈಕಿ ಟಿವಿ ಮೋಹನ್ ದಾಸ್ ಪೈ ಮತ್ತು ಕಿರಣ್ ಮಜುಂದಾರ್ ಶಾ, ಸರ್ಕಾರದ ವಿರುದ್ದ ಸತತವಾಗಿ, ನಗರದ ಮೂಲಭೂತ ಸೌಕರ್ಯದ ಬಗ್ಗೆ ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ. ಇದನ್ನು ಪ್ರಶ್ನಿಸಿದರೆ, ನೀವೇ ರಿಪೇರಿ ಮಾಡಿಕೊಳ್ಳಿ ಎನ್ನುವ ಉತ್ತರ ಕೈಗಾರಿಕಾ ಸಚಿವ ಎಂಬಿ ಪಾಟೀಲರಿಂದ ಬರುತ್ತಿದೆ.

ರಸ್ತೆಗುಂಡಿ ಮುಚ್ಚಲು ಅಕ್ಟೋಬರ್ ಅಂತ್ಯದ ಗಡುವನ್ನು ಸಿಎಂ ಸಿದ್ದರಾಮಯ್ಯ ನೀಡಿದ್ದಾರೆ. ಉದ್ಯಮಿ ಮೋಹನ್ ದಾಸ್ ಪೈ ಮಾತನಾಡುತ್ತಾ, ಹಿಂದೆ ಕೂಡಾ ನಾನು ರಸ್ತೆಗುಂಡಿ ಬಿದ್ದಿದ್ದಂತಹ ಸಂದರ್ಭದಲ್ಲಿ ಸರ್ಕಾರವನ್ನು ಟೀಕಿಸಿದ್ದೆ. ಆಗಿದ್ದ ಸರ್ಕಾರ ನನ್ನ ಟೀಕೆಯನ್ನು ಸಕರಾತ್ಮಕಾವಾಗಿ ತೆಗೆದುಕೊಂಡಿತ್ತು ಎಂದು ಹೇಳಿದ್ದಾರೆ. ಆ ಮೂಲಕ, ಈಗಿನ ಸರ್ಕಾರದ ನಿಲುವನ್ನು ಪ್ರಶ್ನಿಸಿದ್ದಾರೆ. ಕಾರ್ಯಕ್ರಮವೊಂದರಲ್ಲಿ ಮಾತನಾಡುತ್ತಿದ್ದ ಉದ್ಯಮಿ ಮೋಹನ್ ದಾಸ್ ಪೈ, ನಾನು ಹಿಂದೆ ಕೂಡಾ ಮೂಲಭೂತ ಸೌಕರ್ಯದ ಬಗ್ಗೆ ಪ್ರಶ್ನಿಸಿದ್ದೆ. ಯಡಿಯೂರಪ್ಪನವರ ಅವಧಿಯಲ್ಲೂ ರಸ್ತೆಗುಂಡಿಗಳು ಬಿದ್ದಿದ್ದವು. ಅದನ್ನು ಚಿತ್ರ ಸಮೇತ ಟೀಕಿಸಿ, ಸಾಮಾಜಿಕ ಜಾಲತಾಣದಲ್ಲಿ ಬರೆದುಕೊಂಡಿದ್ದೆ. ಆದರೆ, ಆ ಸರ್ಕಾರ ಅದನ್ನು ಪಾಸಿಟೀವ್ ಆಗಿ ತೆಗೆದುಕೊಂಡಿತ್ತು ಎಂದು ಪೈ ವಿವರಿಸಿದ್ದಾರೆ.

ಒಂದು ದಿನ ಯಾವುದೋ ಒಂದು ಕೆಲಸದಲ್ಲಿದ್ದೆ, ಆಗ ನನಗೆ ಡಿಜಿಪಿಯಿಂದ ಫೋನ್ ಬಂತು. ಮುಖ್ಯಮಂತ್ರಿಗಳು ತುರ್ತಾಗಿ ನಿಮ್ಮನ್ನು ನೋಡಬೇಕಂತೆ ಅಂದು ಡಿಜಿಪಿ ಹೇಳಿದರು. ಏನಪ್ಪಾ,



ಯಾಕೆ ಸಿಎಂ ಕರೀತಾ ಇದ್ದಾರೆ ಎಂದು ಟೆನ್ಷನ್ ನಲ್ಲೇ ಅವರ ನಿವಾಸಕ್ಕೆ ಹೋದೆ. ಅಲ್ಲಿ ಹೋದಾಗ, ಯಡಿಯೂರಪ್ಪ ಆತ್ಮೀಯವಾಗಿ ಬರ ಮಾಡಿಕೊಂಡು, ರಸ್ತೆಗುಂಡಿಯನ್ನು ಶೀಘ್ರವೇ ಸರಿ ಪಡಿಸುವುದಾಗಿ ನನಗೆ ಭರವಸೆಯನ್ನು ಕೊಟ್ಟಿದ್ದರು ಎಂದು ಮೋಹನ್ ದಾಸ್ ಪೈ, ಅಂದಿನ ಘಟನೆಯನ್ನು ವಿವರಿಸಿದ್ದರು.

ರಸ್ತೆಗುಂಡಿಯನ್ನು ಪ್ರಶ್ನಿಸಿದ್ದಕ್ಕಾಗಿ, ಮುಖ್ಯಮಂತ್ರಿ ಜೊತೆ ಕಾಫಿ ಕುಡಿದು ಬಂದೆ. ನನ್ನ ಟೀಕೆಯನ್ನು ಅವರು ಸಕಾರಾತ್ಮಕವಾಗಿ ತೆಗೆದುಕೊಂಡುರು ಎಂದು ಮೋಹನ್ ದಾಸ್ ಪೈ ಹೇಳಿದ್ದಾರೆ. ಆ ಮೂಲಕ, ಪರೋಕ್ಷವಾಗಿ ಈಗಿನ ಸರ್ಕಾರ ಮತ್ತು ಸಚಿವರ ನಡವಳಿಕೆಗೆ ಬೇಸರ ವ್ಯಕ್ತ ಪಡಿಸಿದರು.

ಬೆಂಗಳೂರಿಗೆ ಬರಬೇಕಾಗಿರುವ ಉದ್ಯಮಗಳು ಪಕ್ಕದ ರಾಜ್ಯದ ಪಾಲಾಗುತ್ತಿದೆ. ಇದನ್ನು ತಪ್ಪಿಸಬೇಕಾದ ಕರ್ನಾಟಕದ ಸಚಿವರುಗಳು ಜಾತಿಗಣತಿ, ತುಷ್ಟೀಕರಣದಲ್ಲಿ ತೊಡಗಿಸಿಕೊಂಡಿದ್ದಾರೆ ಎಂದು ಮೋಹನ್ ದಾಸ್ ಪೈ ಇತ್ತೀಚೆಗೆ ಹೇಳಿದ್ದರು. ಉಚಿತ ಯೋಜನೆಗಳಿಗೆ ಹಣ ಹೊಂದಿಸುವ ಬಗ್ಗೆ ಸಚಿವರುಗಳು ತಲೆಕೆಡಿಸಿಕೊಂಡಿದ್ದಾರೆ ಎಂದು ಪೈ ವ್ಯಂಗ್ಯವಾಡಿದ್ದರು.

**ಗೂಗಲ್ ಪ್ರಾಜೆಕ್ಟ್ ಕೈತಪ್ಪಿರುವುದಕ್ಕೆ ಮೋಹನ್ ದಾಸ್ ಪೈ, ಐಟಿಬಿಟಿ ಖಾತೆಯ ಸಚಿವ ಪ್ರಿಯಾಂಕ್ ಖರ್ಗೆ ವಿರುದ್ಧ ಕಿಡಿಕಾರಿದ್ದರು. ಆಂಧ್ರ ಪ್ರದೇಶದ ಸರ್ಕಾರ ಭಾರೀ ಸಬ್ಸಿಡಿಯನ್ನು ಗೂಗಲ್ ಸಂಸ್ಥೆಗೆ ನೀಡಿದೆ. ಯಾವುದೇ ಸರ್ಕಾರ ಈ ಹೊರೆಯನ್ನು ಹೊರಲು ಸಾಧ್ಯವೇ ಎಂದು ಖರ್ಗೆ ಪ್ರಶ್ನಿಸಿದ್ದರು. ಮೋಹನ್ ದಾಸ್ ಪೈ ಸುಮ್ಮನೆ ಸರ್ಕಾರವನ್ನು ಟೀಕೆ ಮಾಡುತ್ತಿದ್ದಾರೆ. ರಾಜ್ಯಸಭೆ ಸದಸ್ಯ ಸ್ಥಾನ ಬೇಕು ಅದಕ್ಕೆ ಈ ರೀತಿ ಆರೋಪ ಮಾಡುತ್ತಿದ್ದಾರೆ ಎಂದು ಪ್ರಿಯಾಂಕ್ ಖರ್ಗೆ, ಹಿಂದೆ ಆರೋಪ ಮಾಡಿದ್ದರು.**

# ರಾಜ್ಯದ ಅತ್ಯಂತ ಶ್ರೀಮಂತ ಪಾಲಿಕೆಯನ್ನು ಹೆಸರಿಸಿದ ಡಿಕೆಶಿ

## ಬೆಂಗಳೂರು ನಡಿಗೆ ಅಭಿಯಾನದಲ್ಲಿ ಡಿಸಿಎಂಗೆ ಸಾಥ್ ನೀಡಿದ ಶಾಸಕ ಬೈರತಿ ಬಸವರಾಜ್

• ಉದಯವಾಹಿನಿ, ಬೆಂಗಳೂರು

ಗ್ರೇಟರ್ ಬೆಂಗಳೂರು ವ್ಯಾಪ್ತಿಯ 5 ಪಾಲಿಕೆಗಳ ಪೈಕಿ, ಬೆಂಗಳೂರು ಪೂರ್ವ ಪಾಲಿಕೆ ಅತ್ಯಂತ ಶ್ರೀಮಂತ ಪಾಲಿಕೆಯಾಗಿದೆ. ಈ ಪಾಲಿಕೆಯ ವ್ಯಾಪ್ತಿಯಲ್ಲಿ ಬರುವ ತೆರಿಗೆ ಹಣವನ್ನು ಈ ಭಾಗಕ್ಕೆ ಬಳಸಿಕೊಳ್ಳಲಾಗುವುದು ಎಂದು ಉಪ ಮುಖ್ಯಮಂತ್ರಿ ಡಿಕೆ ಶಿವಕುಮಾರ್ ಹೇಳಿದ್ದಾರೆ.



ಉದಯವಾಹಿನಿ ಚಿತ್ರ

ಕೆಆರ್ ಪುರದ ಟಿಸಿ ಪಾಳ್ಯದ ವೆಂಗಯ್ಯ ಪಾರ್ಕ್ ನಲ್ಲಿ ಬೆಂಗಳೂರು ನಡಿಗೆ ಅಭಿಯಾನದಲ್ಲಿ ಡಿಸಿಎಂ ಪಾಲ್ಗೊಂಡಿದ್ದರು. ಕೆ.ಆರ್.ಪುರ ಹಾಗೂ ಮಹದೇವಪುರ ಒಳಗೊಂಡಿರುವ ಬೆಂಗಳೂರು ಪೂರ್ವ ಪಾಲಿಕೆ ಇಡೀ ರಾಜ್ಯದಲ್ಲಿ ಅತಿ ಹೆಚ್ಚು ಶ್ರೀಮಂತ ಪಾಲಿಕೆ ಎಂದು ಈ ಸಂದರ್ಭದಲ್ಲಿ ಹೇಳಿದರು.



ಈ ಭಾಗದಲ್ಲಿ ಅನೇಕ ಐಟಿ ಬಿಟಿ ಕಂಪನಿಗಳಿದ್ದು, ಈ ಪ್ರದೇಶದ ಸಮಗ್ರ ಅಭಿವೃದ್ಧಿಗೆ 74ನೇ ತಿದ್ದುಪಡಿ ಅಡಿಯಲ್ಲಿ ಪಾಲಿಕೆ ರಚಿಸಿದ್ದು, ಮುಂದಿನ ದಿನಗಳಲ್ಲಿ ಅಭಿವೃದ್ಧಿಗೆ ಅಪಾರ ಹಣ ವಿನಿಯೋಗ ಮಾಡಬಹುದು. ಈ ಹಿಂದೆ ಒಂದೇ ಪಾಲಿಕೆ ಇದ್ದಾಗ ಈ ಭಾಗದಿಂದ ಬರುವ ತೆರಿಗೆ ಆದಾಯವನ್ನು ಬೆಂಗಳೂರಿನ ಇತರೆ ಭಾಗಗಳ ಅಭಿವೃದ್ಧಿಗೆ ಬಳಕೆಯಾಗುತ್ತಿತ್ತು.

ಈಗ ಹೊಸ ಕಾಯ್ದೆ ಮೂಲಕ ಈ ಭಾಗದಲ್ಲಿ ಕ್ರೂಢೀಕರಣವಾಗುವ ಅಷ್ಟೂ ಸಂಪನ್ಮೂಲವನ್ನು ಈ ಪಾಲಿಕೆಯ 50 ವಾರ್ಡ್‌ಗಳ ಅಭಿವೃದ್ಧಿಗೆ ನೀಡಲಾಗುವುದು. ಇದರಿಂದ ಈ ಭಾಗದ ಐಟಿ ವಲಯ ಹಾಗೂ ನಾಗರೀಕರಿಗೆ ಉತ್ತಮ ಸೌಲಭ್ಯ ಕಲ್ಪಿಸಬಹುದಾಗಿದೆ ಎಂದು ಡಿಕೆ ಶಿವಕುಮಾರ್ ಭರವಸೆ ನೀಡಿದರು.

ಜನರ ಸಮಸ್ಯೆಗಳ ಶೀಘ್ರ ನಿವಾರಣೆಗೆ ನಮ್ಮ ಸರ್ಕಾರ ಹೆಜ್ಜೆ ಇಟ್ಟಿದೆ. ಟೆಂಡರ್ ಇಲ್ಲದೇ ಪಾಲಿಕೆಯ ಕೌನ್ಸಿಲ್ 10 ಕೋಟಿ ಮೊತ್ತದ ಕಾಮಗಾರಿಗಳಿಗೆ ಪಾಲಿಕೆ ಆಯುಕ್ತರು 3 ಕೋಟಿ ರೂಪಾಯಿ ಖರ್ಚು ಮಾಡಲು ಅವಕಾಶ ನೀಡಲಾಗಿದೆ. ಬಿಬಿಎಂಪಿ ಇದ್ದಾಗ 10 ಕೋಟಿ ಖರ್ಚು ಮಾಡಬಹುದಾಗಿತ್ತು. ಈಗ ಆ ಹಣ 50 ಕೋಟಿಗೆ ಏರಿಕೆಯಾಗಿದೆ. ಬೆಂಗಳೂರಿನ ಅಭಿವೃದ್ಧಿಗೆ ಐದು ಪಟ್ಟು ಹೆಚ್ಚು ಅವಕಾಶ ದೊರೆತಿದೆ ಎಂದು ಡಿಸಿಎಂ ಡಿಕೆ ಶಿವಕುಮಾರ್ ವಿವರಿಸಿದರು. ನಾವು ನಮ್ಮ ಪಾಡಿಗೆ ಕೆಲಸ ಮಾಡಿಕೊಂಡು ಹೋಗುತ್ತೇವೆ. ನಾವು ಟೀಕೆಗಳಿಗೆ ತಲೆಕೆಡಿಸಿಕೊಳ್ಳುವುದಿಲ್ಲ. ಭಗವಂತ ಹಾಗೂ ಜನರು ನಮಗೆ ಆಶೀರ್ವಾದ ಮಾಡಿದ್ದು, ನಾವು ಅವರ ಸೇವೆ ಮಾಡುತ್ತೇವೆ.

**ಬೆಂಗಳೂರಿನ ಜನತೆಗೆ ನಮ್ಮ ಸರ್ಕಾರ ದೀಪಾವಳಿ ಕೊಡುಗೆ ನೀಡಿದೆ. ಕಂದಾಯ ಭೂಮಿಯಲ್ಲಿ ಕಟ್ಟಿರುವ ಮನೆಗಳಿಗೆ 'ಬಿ' ಖಾತೆ ಹೊಂದಿರುವ ಹಾಗೂ ಹೊಂದಿರದವರು 500 ರೂಪಾಯಿ ಶುಲ್ಕ ಹಾಗೂ ಆಸ್ತಿ ಮೌಲ್ಯದ ಶೇ.5 ರಷ್ಟು ಹಣ ಪಾವತಿ ಮಾಡಿದರೆ 'ಎ' ಖಾತೆ ನೀಡಲಾಗುವುದು ಎಂದು ಉಪಮುಖ್ಯಮಂತ್ರಿಗಳು ಹೇಳಿದರು. ಮುಂದಿನ ದಿನಗಳಲ್ಲಿ ಐಟಿ- ಬಿಟಿ ಕಂಪನಿಗಳ ಜೊತೆ ನಾನು ಹಾಗೂ ಐಟಿ, ಕೈಗಾರಿಕೆ, ವಿಜ್ಞಾನ ಹಾಗೂ ತಂತ್ರಜ್ಞಾನ ಸಚಿವರುಗಳು ಪ್ರತ್ಯೇಕವಾಗಿ ಸಭೆ ನಡೆಸಿ ಅವರ ಸಮಸ್ಯೆಗಳನ್ನು ಆಲಿಸುತ್ತೇವೆ. ಟೀಕೆ ಟಿಪ್ಪಣಿ ಮಾಡುವವರಿಗೆ ನಮ್ಮ ಕೆಲಸವೇ ಉತ್ತರ ನೀಡುತ್ತದೆ ಎಂದು ಡಿಕೆ ಶಿವಕುಮಾರ್ ಹೇಳಿದರು.**

**ಬೆಂಗಳೂರು ನಗರದಿಂದ 6 ಸಾವಿರ ಕೋಟಿ ತೆರಿಗೆ ಸಂಗ್ರಹವಾಗುತ್ತಿದೆ. ಇದರಲ್ಲಿ ಬೆಂಗಳೂರು ನಗರ ಪೂರ್ವ ಪಾಲಿಕೆ 1,600 ಕೋಟಿ ರೂಪಾಯಿ ಪಾಲು ಹೊಂದಿದೆ. ಈ ಮೊದಲು ಎಲ್ಲಾ ಭಾಗಗಳ ತೆರಿಗೆ ಹಂಚಿಕೆಯಾಗುತ್ತಾ ಇತ್ತು. ಈಗ ಆಯಾ ಪ್ರದೇಶಗಳ ತೆರಿಗೆ ಅಲ್ಲಿಯೇ ವಿನಿಯೋಗವಾಗಲಿದೆ ಎಂದು ಡಿಸಿಎಂ ಡಿಕೆ ಶಿವಕುಮಾರ್ ಹೇಳಿದರು.**

ನೂತನ ಐದು ಪಾಲಿಕೆಗಳು ಬೆಂಗಳೂರಿನ ಅಭಿವೃದ್ಧಿಯಲ್ಲಿ ಇತಿಹಾಸ ಸೃಷ್ಟಿಸಲಿವೆ ಎನ್ನುವ ವಿಶ್ವಾಸವನ್ನು ಡಿಕೆ ಶಿವಕುಮಾರ್ ವ್ಯಕ್ತ ಪಡಿಸಿದರು.

# ಬೆಂಗಳೂರು ಸಂಚಾರ ದಟ್ಟಣೆ ತಡೆಗೆ ಕ್ರಮ

• ಉದಯವಾಹಿನಿ, ಬೆಂಗಳೂರು



ಉದಯವಾಹಿನಿ ಚಿತ್ರ

ನಗರದ ಟ್ರಾಫಿಕ್ ಸಿಗ್ನಲ್‌ಗಳ ಬಳಿ ಇರುವ ಬಸ್ ನಿಲ್ದಾಣಗಳು ಸಂಚಾರ ದಟ್ಟಣೆಗೆ ಕಾರಣವಾಗುತ್ತಿದ್ದು, ಈ ಹಿನ್ನೆಲೆಯಲ್ಲಿ ಸಂಚಾರದ ಮೇಲೆ ಪರಿಣಾಮ ಬೀರುವ ನಿಲ್ದಾಣಗಳನ್ನು ಸ್ಥಳಾಂತರಗೊಳಿಸಲು ಬೆಂಗಳೂರು ಮಹಾನಗರ ಸಾರಿಗೆ ನಿಗಮ (ಬಿಎಂಟಿಸಿ) ಮತ್ತು ಬೆಂಗಳೂರು ಸಂಚಾರ ಪೊಲೀಸರು (ಬಿಟಿಪಿ) ಮುಂದಾಗಿದೆ.

ಸಮಸ್ಯೆ ಪರಿಹಾರಕ್ಕಾಗಿ ಬೆಂಗಳೂರು ಮಹಾನಗರ ಸಾರಿಗೆ ನಿಗಮ (ಬಿಎಂಟಿಸಿ) ಮತ್ತು ಬೆಂಗಳೂರು ಸಂಚಾರ ಪೊಲೀಸರು 110 ಬಸ್ ನಿಲ್ದಾಣಗಳನ್ನು ಸ್ಥಳಾಂತರಿಸಲು ಮುಂದಾಗಿದ್ದಾರೆಂದು ತಿಳಿದುಬಂದಿದೆ.

ಬಸ್ ನಿಲ್ದಾಣ ಸ್ಥಳಾಂತರ ಕುರಿತು ಬಿಎಂಟಿಸಿ ಹಾಗೂ ಬಿಟಿಪಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ಸಂಸ್ಥೆಗೆ ಪತ್ರ ಬರೆದಿತ್ತು. ಆದರೆ, ಬಿಬಿಎಂಪಿ ಅಂತ್ಯಗೊಂಡು ಗ್ರೇಟರ್ ಬೆಂಗಳೂರು ಪ್ರಾಧಿಕಾರ ಅಸ್ತಿತ್ವಕ್ಕೆ ಬಂದ ಹಿನ್ನೆಲೆಯಲ್ಲಿ ಇದರ ಪ್ರಗತಿಗೆ ಅಡ್ಡಿಯಾಗಿದೆ ಎಂದು ತಿಳಿದುಬಂದಿದೆ.

ಜಿಬಿಎಯ ಕಾರ್ಯನಿರ್ವಾಹಕ ಎಂಜಿನಿಯರ್ ಹರಿಪ್ರಸಾದ್ ಅವರು ಮಾತನಾಡಿ, ಯೋಜನೆಯನ್ನು ಸಾರ್ವಜನಿಕ-ಖಾಸಗಿ ಪಾಲುದಾರಿಕೆ ಮಾದರಿಯಲ್ಲಿ ಕೈಗೆತ್ತಿಕೊಳ್ಳಲಾಗುವುದು. ಬಸ್ ನಿಲ್ದಾಣ ಸ್ಥಳಾಂತರದ ಉಸ್ತುವಾರಿಯನ್ನು ಶೆಲ್ಟರ್ ಏಜೆನ್ಸಿಗಳು ಮತ್ತು ಸ್ಥಳೀಯ ಬಿಎಂಟಿಸಿ ಅಧಿಕಾರಿಗಳು ವಹಿಸುತ್ತಾರೆ. ಈ ಕುರಿತು ಏಜೆನ್ಸಿಗಳಿಗೆ ತಿಳಿಸಿದ್ದೆವು, ಆದರೆ, ಬಿಬಿಎಂಪಿ ವಿಸರ್ಜಿಸಲ್ಪಟ್ಟ ನಂತರ, ಈ ಬಗ್ಗೆ ನಿಗಾ ಇರಿಸಲಾಗಿಲ್ಲ. ಜಿಬಿಎ ಅಡಿಯಲ್ಲಿ ಸ್ಥಳಾಂತರಕ್ಕೆ ಹೊಸ ಸ್ಥಳಗಳನ್ನು ನಿಯೋಜಿಸಲಾಗಿದೆ. ಈ ವಿಚಾರವನ್ನು ತ್ವರಿತಗೊಳಸಲಾಗುತ್ತಿದೆ ಎಂದು ಹೇಳಿದ್ದಾರೆ. ಲೋವರ್ ಆಗರಂ ರಸ್ತೆ ಮತ್ತು 80 ಅಡಿ ರಸ್ತೆ ಸೇರಿದಂತೆ ನಗರದ ಹಲವು ಪ್ರಮುಖ ರಸ್ತೆಗಳು ಕಿರಿದಾಗಿದ್ದು, ಈ ರಸ್ತೆಗಳಲ್ಲಿ ಬಸ್ ಗಳು ನಿಲ್ಲುವುದರಿಂದ ಸಂಚಾರಕ್ಕೆ ಸಮಸ್ಯೆಯಾಗುತ್ತದೆ. ಬಾಳೇಕುಂದ್ರಿ ಸರ್ಕಲ್ ಇದಕ್ಕೆ ಉತ್ತಮ ಉದಾಹರಣೆಯಾಗಿದೆ.

**ಟ್ಯಾಕ್ಸಿಗಳು ಮತ್ತು ಆಟೋರಿಕ್ಷಾಗಳು ಬಸ್ ನಿಲ್ದಾಣಗಳಲ್ಲಿ ಪಾರ್ಕಿಂಗ್ ಮಾಡುವುದರಿಂದ ಮತ್ತು ಬಸ್‌ಗಳಿಗೆ ಸ್ಥಳಾವಕಾಶ ನೀಡದಿರುವುದು ಸಂಚಾರಕ್ಕೆ ಕಾರಣವಾಗಿದೆ ಎಂದು ಬಿಎಂಟಿಸಿಯ ಮುಖ್ಯ ಸಂಚಾರ ವ್ಯವಸ್ಥಾಪಕ (ಕಾರ್ಯಾಚರಣೆ) ಜಿಟಿ ಪ್ರಭಾಕರ್ ರೆಡ್ಡಿ ಹೇಳಿದ್ದಾರೆ. ಯಾದೃಚ್ಛಿಕವಾಗಿ ನಿಲ್ಲುವ ಬಸ್‌ಗಳಿಂದ ಸಂಚಾರಕ್ಕೆ ಸಮಸ್ಯೆಯಾಗದಂತೆ ನೋಡಿಕೊಳ್ಳಲು ನಮ್ಮಲ್ಲಿ ಗಸ್ತು ವಾಹನಗಳಿವೆ. ತಪ್ಪು ಮಾಡುವ ಚಾಲಕರಿಗೆ ನೋಟಿಸ್ ಮತ್ತು ದಂಡ ವಿಧಿಸಲಾಗುತ್ತದೆ ಎಂದು ತಿಳಿಸಿದ್ದಾರೆ.**

# ಬಿಜೆಪಿ ನಾಯಕರಿಗೆ 'ಸವಾಲು' ಹಾಕಿದ ಪ್ರಿಯಾಂಕ್ ಖರ್ಗೆ!

• ಉದಯವಾಹಿನಿ, ಬೆಂಗಳೂರು



ಆರ್‌ಎಸ್‌ಎಸ್ ವಿರುದ್ಧ ಹೋರಾಟ ಆರಂಭಿಸಿರುವ ಸಚಿವ ಪ್ರಿಯಾಂಕ್ ಖರ್ಗೆ ಅವರಿಗೆ ರಾಜ್ಯದ ವಿವಿಧೆಡೆಗಳಿಂದ ಬೆಂಬಲ ಸಿಗುತ್ತಿದೆ. ಈ ಮಧ್ಯೆ ಚಿತ್ತಾಪುರ ಕ್ಷೇತ್ರದಿಂದ ಬಿಜೆಪಿ ಅಭ್ಯರ್ಥಿಯಾಗಿ ನಿಂತು ಸೋತಿದ್ದ ಮಣಿಕಂಠ ರಾಥೋಡ್ , ಬಹಿರಂಗವಾಗಿ ಬೆದರಿಕೆಯ ಮಾತುಗಳನ್ನಾಡಿರುವುದು ವಿವಾದಕ್ಕೆ ಕಾರಣವಾಗಿದೆ.

ಪ್ರಿಯಾಂಕ್ ಖರ್ಗೆ ಆರ್‌ಎಸ್‌ಎಸ್‌ಗೆ ಕ್ಷಮೆ ಕೇಳಬೇಕು. ಕ್ಷಮೆ ಕೇಳದೇ ಹೋದರೆ, ಇಷ್ಟು ದಿನ ಫೋನ್‌ನಲ್ಲಿ ಬೈಯುತ್ತಿದ್ದೇವೆ, ಮುಂದೆ ನಿಮ್ಮ ಮನೆಗೆ ಬರುವ ಸಾಧ್ಯತೆ ಇದೆ ಎಂದು ಎಚ್ಚರಿಕೆ ನೀಡಿದ್ದಾರೆ. ಮಣಿಕಂಠ ರಾಥೋಡ್ ಬೆದರಿಕೆಗೆ ಪ್ರತಿಕ್ರಿಯೆ ನೀಡಿದ ಪ್ರಿಯಾಂಕ್ ಖರ್ಗೆ, ಇದು ನನಗೆ ಹೊಸದೇನಲ್ಲ. ವ್ಯಕ್ತಿಯ ಬೆದರಿಕೆ ಶೈಲಿಯೂ ಹೊಸದಲ್ಲ. ಇದಕ್ಕೆ ಬಿಜೆಪಿ ಪಕ್ಷವೇ ಉತ್ತರ ನೀಡಬೇಕು. ಇಂಥ ವ್ಯಕ್ತಿಗಳಿಗೆ ಟಿಕೆಟ್ ನೀಡಿದ ಪಕ್ಷವೇ ಜವಾಬ್ದಾರಿಯಾಗಿರಬೇಕು ಎಂದು ಕಟುವಾಗಿ ಟೀಕಿಸಿದರು. ನಾನು ಕಾನೂನಿನ ಪಾಲನೆ ಮಾಡಬೇಕು ಎಂದು ಹೇಳಿದ್ದೆ. ಅದಕ್ಕೇ ಬೆದರಿಕೆ ಹಾಕುವುದು ಯಾವ ರೀತಿಯ ರಾಜಕೀಯ ಇಂಥವರಿಗೆ ಏನು ಹೇಳುವುದು ಎಂದು ಪ್ರಶ್ನಿಸಿದರು.

**ಈ ಕುರಿತು ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಪ್ರತಿಕ್ರಿಯಿಸಿರುವ ಪ್ರಿಯಾಂಕ್ ಖರ್ಗೆ, ಪ್ರತಿದಿನವೂ ಹೊಸ ಪುರಾವೆಗಳು ಬೆಳಕಿಗೆ ಬರುತ್ತಿವೆ ಬೆದರಿಕೆಗಳು ಮುಂದುವರಿದಿವೆ, ಆದರೆ ನಾನು ಭಯಪಡುವುದಿಲ್ಲ. ಅವರು ಫೋನ್ ಕರೆಗಳ ಮೂಲಕ ಬೆದರಿಸಲು ಪ್ರಯತ್ನಿಸಿದ್ದರು. ಆದರೆ ಅದು ವಿಫಲವಾದಾಗ ಅವರ ಧಮಕಿ ಇನ್ನಷ್ಟು ವಿಪರೀತವಾಗುತ್ತದೆ. ನಿನ್ನೆ ಬಿಜೆಪಿ ಚಿತ್ತಾಪುರ ಶಾಸಕ ಅಭ್ಯರ್ಥಿ, ಈಗ ನಿಮಗೆ ಫೋನ್ ಮೂಲಕ ಮಾತ್ರ ಬೆದರಿಕೆ ಹಾಕಲಾಗುತ್ತಿದೆ. ಆದರೆ ಮುಂದಿನ ದಿನಗಳಲ್ಲಿ, ಆರ್‌ಎಸ್‌ಎಸ್ ನಿಮ್ಮ ಮನೆಗೆ ನೇರವಾಗಿ ಬರುತ್ತದೆ, ಆರ್‌ಎಸ್‌ಎಸ್ ನವರು ಕಟ್ಟರ್ ಪಂಥೀಯರು ಮತ್ತು ದೇಶ ಭಕ್ತರು ಎಂದು ಎಚ್ಚರಿಕೆ ನೀಡಿದ್ದಾರೆ ಎಂದು ತಿಳಿಸಿದ್ದಾರೆ.**

# ಬೆಸ್ಕಾಂ ವ್ಯಾಪ್ತಿಯಲ್ಲಿ 209 ಇವಿ. ಚಾರ್ಜಿಂಗ್ ಕೇಂದ್ರಗಳ ಉನ್ನತೀಕರಣ

• ಉದಯವಾಹಿನಿ, ಬೆಂಗಳೂರು



ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ (ಬೆಸ್ಕಾಂ) ವ್ಯಾಪ್ತಿಯಲ್ಲಿ ಇರುವ 209 ಇ.ವಿ. ಚಾರ್ಜಿಂಗ್ ಕೇಂದ್ರಗಳ ಪೈಕಿ 184 ಕೇಂದ್ರಗಳನ್ನು ಮೇಲ್ದರ್ಜೆಗೆ ಏರಿಸಲಾಗಿದೆ. ಇದರಿಂದಾಗಿ ಎಲೆಕ್ಟ್ರಿಕ್ ವಾಹನಗಳ ಚಾರ್ಜ್ ವೇಗವಾಗಿ ಆಗಲಿದೆ' ಎಂದು ಬೆಸ್ಕಾಂ ವ್ಯವಸ್ಥಾಪಕ ನಿರ್ದೇಶಕ ಎನ್. ಶಿವಶಂಕರ್ ತಿಳಿಸಿದರು. ಬಸ್, ಟ್ರಕ್ ಸೇರಿದಂತೆ ದೊಡ್ಡ ವಾಹನಗಳಿಗೆ ಚಾರ್ಜ್ ಮಾಡಲು 240 ಕಿ. ವಾ ಸಾಮರ್ಥ್ಯದ ವೇಗದ ಚಾರ್ಜಿಂಗ್ ಪಾಯಿಂಟ್ ಹಾಗೂ ಕಾರು, ದ್ವಿಚಕ್ರ ವಾಹನಗಳಿಗೆ ಚಾರ್ಜ್ ಮಾಡಲು 60ರಿಂದ 120 ಕಿ.ವಾ. ಸಾಮರ್ಥ್ಯದ ಪಾಯಿಂಟ್‌ಗಳ ವ್ಯವಸ್ಥೆ ಮಾಡಲಾಗಿದೆ ಎಂದು ಸುದ್ದಿಗಾರರಿಗೆ ತಿಳಿಸಿದರು. ರಾಜ್ಯದಲ್ಲಿ ಸದ್ಯಕ್ಕೆ 5,960 ಇವಿ ಚಾರ್ಜಿಂಗ್ ಕೇಂದ್ರಗಳಿವೆ. ಇನ್ನೂ 1,500 ಕೇಂದ್ರಗಳನ್ನು ಸ್ಥಾಪಿಸಲು ಪಿ.ಎಂ ಇ-ಡ್ರೈವ್ ಯೋಜನೆಯಡಿ ಅನುದಾನ ನೀಡುವಂತೆ ಕೇಂದ್ರದ ಬೃಹತ್ ಕೈಗಾರಿಕಾ ಸಚಿವಾಲಯಕ್ಕೆ ಪ್ರಸ್ತಾವ ಸಲ್ಲಿಸಲಾಗುವುದು. ಈ ಕೇಂದ್ರಗಳಲ್ಲಿ 30ರಿಂದ 40 ನಿಮಿಷಗಳ ಒಳಗೆ ಚಾರ್ಜ್ ಆಗಲಿದೆ. ಹೀಗಾಗಿ ಹೆಚ್ಚು ಹೊತ್ತು ಕಾಯುವ ಅಗತ್ಯವಿಲ್ಲ ಎಂದರು.

# ದೀಪಾವಳಿ ಊರುಗಳತ್ತ ಜನ: ಬೆಂಗಳೂರಿನ ಹಲವೆಡೆ ಸಂಚಾರ ದಟ್ಟಣೆ

• ಉದಯವಾಹಿನಿ, ಬೆಂಗಳೂರು

ಉದ್ಯೋಗ, ವ್ಯಾಸಂಗ ಸೇರಿ ವಿವಿಧ ಕಾರಣಗಳಿಂದ ನಗರದಲ್ಲಿ ನೆಲಸಿರುವ ಲಕ್ಷಾಂತರ ಮಂದಿ ದೀಪಾವಳಿ ಹಬ್ಬದ ಅಂಗವಾಗಿ ಶುಕ್ರವಾರ ರಾತ್ರಿ ತಮ್ಮ ಊರುಗಳಿಗೆ ಹೊರಟರು. ಇದರಿಂದಾಗಿ ನಗರದ ಹಲವೆಡೆ ಸಂಚಾರ ದಟ್ಟಣೆ ಉಂಟಾಯಿತು. ಭಾನುವಾರ ರಜಾ ದಿನ. ಹಬ್ಬದ ಕಾರಣ ಸೋಮವಾರ, ಬುಧವಾರ ಸರ್ಕಾರಿ ರಜೆ ಇರಲಿದೆ. ಖಾಸಗಿ ಕಂಪನಿಗಳ ಬಹುತೇಕ ಮಂದಿಗೆ ಶನಿವಾರವೂ ರಜೆ ಇದೆ.



ಉದಯವಾಹಿನಿ ಚಿತ್ರ

ಹೀಗಾಗಿ ಶುಕ್ರವಾರ ರಾತ್ರಿಯೇ ಕುಟುಂಬ ಸಮೇತ ಊರುಗಳತ್ತ ಮುಖ ಮಾಡಿದ್ದರು. ಮೆಜೆಸ್ಟಿಕ್ ಸುತ್ತಮುತ್ತ ಭಾರಿ ಸಂಚಾರ ದಟ್ಟಣೆ ಕಂಡು ಬಂತು. ರೈಲು ನಿಲ್ದಾಣ, ಶಾಂತಿನಗರ ಬಸ್ ನಿಲ್ದಾಣ, ಯಶವಂತಪುರ ರೈಲು ನಿಲ್ದಾಣ ಸೇರಿ ವಿವಿಧೆಡೆ ಭಾರಿ ಜನಜಂಗುಳಿ ಇತ್ತು. ಕೆಎಸ್‌ಆರ್ ಟಿಸಿ ಹಾಗೂ ಖಾಸಗಿ ಬಸ್‌ಗಳಲ್ಲಿ ಪ್ರಯಾಣಿಕರು ತುಂಬಿ ತುಳುಕುತ್ತಿದ್ದರು.

ಹೊಸೂರು ರಸ್ತೆ, ಮೈಸೂರು ರಸ್ತೆ, ತುಮಕೂರು ರಸ್ತೆ, ಬಳ್ಳಾರಿ ರಸ್ತೆಯುದ್ದಕ್ಕೂ ಸಾಲು-ಸಾಲಾಗಿ ಸಾಗುತ್ತಿದ್ದ ಖಾಸಗಿ ವಾಹನಗಳಿಂದ ಅಧಿಕ ದಟ್ಟಣೆ ಉಂಟಾಯಿತು. ಸ್ವಂತ ವಾಹನಗಳಾದ ಕಾರು, ದ್ವಿಚಕ್ರ ವಾಹನಗಳಲ್ಲೇ ಲಕ್ಷಾಂತರ ಮಂದಿ ರಾತ್ರಿ ಊರಿನತ್ತ ತೆರಳಿದ ಪರಿಣಾಮ,ವಾಹನಗಳು ತಾಸುಗಟ್ಟಲೆ ಟ್ರಾಫಿಕ್‌ನಲ್ಲಿ ಸಾಲುಗಟ್ಟಿ ನಿಂತಿದ್ದವು.

ವಾಹನಗಳ ಸುಗಮ ಸಂಚಾರಕ್ಕೆ ಪೊಲೀಸರು ಹರಸಾಹಸಪಟ್ಟರು. ರೈಲು ಹಾಗೂ ಬಸ್ ನಿಲ್ದಾಣಗಳಲ್ಲಿ ಬಿಗಿ ಪೊಲೀಸ್ ಬಂದೋಬಸ್ತ್ ಮಾಡಲಾಗಿತ್ತು.

**ಬಿಹಾರಕ್ಕೆ ಹೊರಟ ಕಾರ್ಮಿಕರು:** ಹಬ್ಬ ಮತ್ತು ಬಿಹಾರದಲ್ಲಿ ವಿಧಾನಸಭಾ ಚುನಾವಣೆ ಇರುವುದರಿಂದ ಕರ್ನಾಟಕದಲ್ಲಿ ಇರುವ ಬಿಹಾರಿ ಕಾರ್ಮಿಕರು ತಮ್ಮ ರಾಜ್ಯಕ್ಕೆ ಹೊರಟಿದ್ದಾರೆ.

ಇದರಿಂದ ರೈಲು ನಿಲ್ದಾಣಗಳಲ್ಲಿ ನೂಕುನುಗ್ಗಲು ಉಂಟಾಯಿತು. ನವೆಂಬರ್ 6 ಮತ್ತು 11ರಂದು ಬಿಹಾರದಲ್ಲಿ ಚುನಾವಣೆ ನಡೆಯಲಿದೆ. ಹಾಗಾಗಿ ಕಾರ್ಮಿಕರು ದೀರ್ಘ ರಜೆಯೊಂದಿಗೆ ತೆರಳುತ್ತಿದ್ದಾರೆ.

# ಟನೆಲ್ ರಸ್ತೆ ಯೋಜನೆಯಲ್ಲಿ ಮೇಜರ್ ಸರ್ಜರಿ

## ಮೇಖ್ರಿ ಸರ್ಕಲ್‌ನ 3 ರ?ಯಾಂಪ್‌ಗಳಿಗೆ ಕೊಕ್, ಸ್ಯಾಂಕಿ ಕೆರೆ ಬಳಿ ಹೊಸ ನಿರ್ಗಮನ!

• ಉದಯವಾಹಿನಿ, ಬೆಂಗಳೂರು

ಟನೆಲ್‌ರಸ್ತೆ ನಿರ್ಮಾಣ ಯೋಜನೆ ಬಗ್ಗೆ ಒಂದಿಲ್ಲೊಂದು ವಿವಾದಗಳು ಹುಟ್ಟಿಕೊಳ್ಳುತ್ತಿವೆ. ಲಾಲ್‌ಭಾಗ್ ಪರಿಸರಕ್ಕೆ ಧಕ್ಕೆ ವಿವಾದ ಆಯ್ತು ಇದೀಗ ಸ್ಯಾಂಕಿ ಟ್ಯಾಂಕ್ ಪರಿಸರದ ಮೇಲೆ ದುಷ್ಪರಿಣಾಮ ಆಗುವ ಬಗ್ಗೆ ಅಪಸ್ವರ ಕೇಳಿಬಂದಿದೆ.

ಬಹು ನಿರೀಕ್ಷಿತ 16.75 ಕಿ.ಮೀ. ಉದ್ದದ ಬೆಂಗಳೂರು ಸುರಂಗ ರಸ್ತೆ ಯೋಜನೆಯ ವಿನ್ಯಾಸದಲ್ಲಿ ದೊಡ್ಡ ಬದಲಾವಣೆ ಮಾಡಲಾಗಿದ್ದು, ಮೇಖ್ರಿ ಸರ್ಕಲ್‌ನಲ್ಲಿ ಮೂಲತಃ ಯೋಜಿಸಲಾಗಿದ್ದ ಕನಿಷ್ಠ ಮೂರು ಪ್ರವೇಶ ಮತ್ತು ನಿರ್ಗಮನ ರ್‍ಯಾಂಪ್‌ಗಳನ್ನು ಅಧಿಕಾರಿಗಳು ಕೈಬಿಟ್ಟಿದ್ದಾರೆ.

ಪರಿಷ್ಕೃತ ಯೋಜನೆಯ ಪ್ರಕಾರ, ಸ್ಯಾಂಕಿ ಕೆರೆಯ ಪ್ರವೇಶದ್ವಾರದ ಎದುರು, ಅಂದರೆ ಮಲ್ಲೇಶ್ವರಂ 18ನೇ ಕ್ರಾಸ್ ಬಳಿ ಹೊರಬರುವಂತೆ ಹೊಸ ನಿರ್ಗಮನ ರ್‍ಯಾಂಪ್ ಒಂದನ್ನು ಸೇರಿಸಲಾಗಿದೆ. ರ್‍ಯಾಂಪ್ ಸ್ಯಾಂಕಿ ರಸ್ತೆಯ ಕೆಳಭಾಗದಲ್ಲಿ ಹಾದುಹೋಗಲಿದೆ.

ಇದೇ ವೇಳೆ, ಈ ಯೋಜನೆಯಿಂದಾಗುವ ಪರಿಸರ ಹಾನಿಯ ಬಗ್ಗೆ, ವಿಶೇಷವಾಗಿ ಉತ್ತರ ಬೆಂಗಳೂರಿನ ಬ್ರಿಟಿಷರ ಕಾಲದ ಜಲಮೂಲವಾದ ಸಂಕಿ ಕೆರೆಯ ಬಳಿ ಆಗುವ ಪರಿಣಾಮಗಳ ಕುರಿತು ಹಲವರು ಆತಂಕ ವ್ಯಕ್ತಪಡಿಸಿದ್ದಾರೆ.

ಕೆರೆಯ ಬಳಿ ನಿರ್ಗಮನ ರ್‍ಯಾಂಪ್ ನಿರ್ಮಿಸಿದರೆ, 18ನೇ ಕ್ರಾಸ್, ಸಂಪಿಗೆ ರಸ್ತೆ ಮತ್ತು ಸಂಕಿ ರಸ್ತೆಯ ವಾಹನಗಳು ಸೇರುವ ಜಂಕ್ಷನ್‌ನಲ್ಲಿ ಸಂಚಾರ ದಟ್ಟಣೆ ಮತ್ತಷ್ಟು ಹದಗೆಡಲಿದೆ.

ಮುಖ್ಯವಾಗಿ, ಇದು ಕೆರೆಯ ಪರಿಸರ ವ್ಯವಸ್ಥೆಗೆ ಅಪಾಯವನ್ನುಂಟುಮಾಡಬಹುದು ಎಂದು ಸಿಟಿಜನ್ಸ್ ಫಾರ್ ಸ್ಯಾಂಕಿ'ಯ ಪ್ರೀತಿ ಸುಂದರರಾಜನ್ ಆತಂಕ ವ್ಯಕ್ತಪಡಿಸಿದ್ದಾರೆ. ಸ್ಯಾಂಕಿ ರಸ್ತೆಯ ಕೆಳಗಿರುವ ಕೆರೆಯ ಏರಿ ಎಷ್ಟು ಪ್ರಬಲವಾಗಿದೆ ಎಂದು ನಮಗೆ ತಿಳಿದಿಲ್ಲ. ಅಲ್ಲಿ ಸುರಂಗವನ್ನು ಅಗೆಯುವುದು ಗಂಭೀರ ಅಪಾಯವನ್ನು ತಂದೊಡ್ಡ ಬಹುದು, ವಿಶೇಷವಾಗಿ ಕೆಳಭಾಗದಲ್ಲಿರುವ ವೈಯಾಲಿಕಾವಲ್ ನಂತಹ ಪ್ರದೇಶಗಳು ವಸತಿ ಪ್ರದೇಶಗಳಾಗಿವೆ, ಎಂದರು. ವಿವರವಾದ ಯೋಜನಾ ವರದಿಯಲ್ಲಿ ಮಾಡಲಾಗಿರುವ ಈ ಕೊನೆ ಕ್ಷಣದ ಬದಲಾವಣೆಗಳು, ದೀರ್ಘಾವಧಿಯ ಯೋಜನೆಯ ಕೊರತೆಯನ್ನು ಸೂಚಿಸುತ್ತವೆ.



ಉದಯವಾಹಿನಿ ಚಿತ್ರ

**ಈ ಟೀಕೆಗಳಿಗೆ ಪ್ರತಿಕ್ರಿಯಿಸಿದ ಬಿ-ಸ್ಮೈಲ್‌ನ ತಾಂತ್ರಿಕ ನಿರ್ದೇಶಕ ಬಿ.ಎಸ್. ಪ್ರಹ್ಲಾದ್, ಹೆಬ್ಬಾಳದ ಬಳಿಯ ಸಣ್ಣ ಸುರಂಗವನ್ನು ಸಂಯೋಜಿಸಲು ಈ ಬದಲಾವಣೆಗಳು ಅವಶ್ಯಕವಾಗಿದ್ದವು. ಹೊಸ ರ?ಯಾಂಪ್‌ನಿಂದ ಕೆರೆಗೆ ಅಥವಾ ಅದರ ಕೋಡಿಗೆ ಯಾವುದೇ ಅಪಾಯವಿಲ್ಲ, ಎಂದು ಸ್ಪಷ್ಟಪಡಿಸಿದ್ದಾರೆ.**

### ಮೂಲ, ಪರಿಷ್ಕೃತ ಯೋಜನೆ

**ಮೂಲ ಯೋಜನೆಯ ಪ್ರಕಾರ, ಉತ್ತರ-ದಕ್ಷಿಣ ಸಂಪರ್ಕಿಸುವ ಈ ಅವಳಿ-ಸುರಂಗ ಭೂಗತ ರಸ್ತೆಯುದ್ದಕ್ಕೂ ವಿವಿಧ ಪ್ರದೇಶಗಳಿಗೆ ಸಂಪರ್ಕ ಕಲ್ಪಿಸಲು ಒಟ್ಟು 16 ರ್‍ಯಾಂಪ್‌ಗಳನ್ನು ನಿರ್ಮಿಸಲು ಉದ್ದೇಶಿಸಲಾಗಿತ್ತು. ಹೆಬ್ಬಾಳ, ಮೇಖ್ರಿ ಸರ್ಕಲ್ ಮತ್ತು ವಿಧಾನಸೌಧದಲ್ಲಿ ತಲಾ 4 ರ್‍ಯಾಂಪ್‌ಗಳು ಲಾಲ್‌ಬಾಗ್ ಮತ್ತು ಸೇಂಟ್ ಜಾನ್ಸ್ ಆಸ್ಪತ್ರೆ ಬಳಿ ತಲಾ ಎರಡು ರ್‍ಯಾಂಪ್‌ಗಳನ್ನು ಪ್ರಸ್ತಾಪಿಸಲಾಗಿತ್ತು.**

ಇದೇ ಮಾರ್ಗದಲ್ಲಿ ಹೆಬ್ಬಾಳ ಜಂಕ್ಷನ್ ಬಳಿ ನಿರ್ಮಿಸಲು ಉದ್ದೇಶಿಸಿರುವ ಮತ್ತೊಂದು 2 ಕಿ.ಮೀ. ಉದ್ದದ ಸುರಂಗ ರಸ್ತೆ ಯೋಜನೆಗೆ ಅನುಕೂಲ ಮಾಡಿಕೊಡಲು ಈ ಬದಲಾವಣೆಗಳನ್ನು ಮಾಡಲಾಗಿದೆ ಎಂದು ವರದಿಯಾಗಿದೆ. ಈ ಯೋಜನೆಯು ಹೆಬ್ಬಾಳದ ಅಸ್ತಿತ್ವದಲ್ಲಿರುವ ಫ್ಲೈಓವರ್ ಮೇಲಿನ ದಟ್ಟಣೆಯನ್ನು ಕಡಿಮೆ ಮಾಡುವ ಗುರಿ ಹೊಂದಿದೆ.

# ಮಹಿಳೆಯ ಬೆರಳು ಕತ್ತರಿಸಿ ಚಿನ್ನಾಭರಣ ದರೋಡೆ ಮಾಡಿದ್ದ ಇಬ್ಬರ ಬಂಧನ

• ಉದಯವಾಹಿನಿ, ಬೆಂಗಳೂರು

ಆರ್ಕೆಸ್ಟ್ರಾ ನೋಡಿಕೊಂಡು ಮನೆಗೆ ಹೋಗುತ್ತಿದ್ದ ಮಹಿಳೆಯರನ್ನು ಗುರಿಯಾಗಿಸಿ, ಲಾಂಗ್‌ನಿಂದ ಹಲ್ಲೆ ಮಾಡಿ, ಸರಗಳ್ಳತನ ಮಾಡಿ ಪರಾರಿಯಾಗಿದ್ದ ಇಬ್ಬರು ಖದೀಮರನ್ನು ಗಿರಿನಗರ ಠಾಣೆ ಪೊಲೀಸರು ಬಂಧಿಸಿ ಜೈಲಿಗಟ್ಟಿದ್ದಾರೆ. ಯೋಗಾನಂದ (35) ಹಾಗೂ ಈತನ ಸಹಚರ ಪ್ರವೀಣ್ ಬಂಧಿತರು. ಇವರಿಂದ 80 ಗ್ರಾಂ ಚಿನ್ನಾಭರಣವನ್ನು ವಶಕ್ಕೆ ಪಡೆದುಕೊಳ್ಳಲಾಗಿದೆ. ಬೆಂಗಳೂರು ದಕ್ಷಿಣ ವಿಭಾಗದ ಡಿಸಿಪಿ ಲೋಕೇಶ್ ಬಿ.ಜಗಲಾಸರ್ ಅವರು ಪ್ರಕರಣದ ಕುರಿತು ಮಾಹಿತಿ ನೀಡಿದರು. ಸೆ.13ರಂದು ದೂರುದಾರ ಮಹಿಳೆ ಉಷಾ ಹಾಗೂ ಸ್ನೇಹಿತೆ ವರಲಕ್ಷ್ಮೀ ಎಂಬವರು ಗಣೇಶ ಹಬ್ಬದ ಆರ್ಕೆಸ್ಟ್ರಾ ಮುಗಿಸಿ ಮನೆಗೆ ವಾಪಸ್ ಆಗುವಾಗ ಪಲ್ಸರ್ ಬೈಕ್‌ನಲ್ಲಿ ಬಂದ ದುರುಳರು ಮಚ್ಚು ತೋರಿಸಿದ್ದಾರೆ. ಗಾಬರಿಗೊಂಡ ಉಷಾ ಸರ ನೀಡಿದರೆ, ವರಲಕ್ಷ್ಮಿ ಅವರು ಪ್ರತಿರೋಧ ತೋರಿಸಿದ್ದು ಮಚ್ಚಿನಿಂದ ಹಲ್ಲೆ ಮಾಡಿದ್ದರು. ಈ ವೇಳೆ ಅವರ, ಕೈ ಬೆರಳು ತುಂಡಾಗಿತ್ತು. ಅದೇ ದಿನ ಕುಮಾರಸ್ವಾಮಿ ಲೇಔಟ್ ಹಾಗೂ ಕೋಣನಕುಂಟೆ ಠಾಣಾ ವ್ಯಾಪ್ತಿಯಲ್ಲಿ ಸರಗಳ್ಳತನ ಮಾಡಿದ್ದರು. ಪ್ರಕರಣ ದಾಖಲಿಸಿ ತನಿಖೆ ನಡೆಸಿ ಇಬ್ಬರು ಆರೋಪಿಗಳನ್ನು ಬಂಧಿಸಿ, ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ ಎಂದು ಪೊಲೀಸರು ಹೇಳಿದ್ದಾರೆ.

# 10 ಲಕ್ಷ ಒರಿಜಿನಲ್ ನೋಟ್ ಕೊಟ್ರೆ 30 ಲಕ್ಷ ಕೋಟಾ ಆಫರ್

• ಉದಯವಾಹಿನಿ, ಬೆಂಗಳೂರು

ರಾಜ್ಯ ರಾಜಧಾನಿ ಬೆಂಗಳೂರಿನಲ್ಲಿ ಕೋಟಾ ನೋಟಿನ ಗ್ಯಾಂಗ್ ಆಕ್ಟೀವ್ ಆಗಿದೆ. 10 ಲಕ್ಷ ರೂ. ಒರಿಜಿನಲ್ ನೋಟ್ ಕೊಟ್ಟರೆ 30 ಲಕ್ಷ ರೂ. ಕೋಟಾ ನೋಟಿನ ಆಫರ್ ನೀಡಿ ಜನರಿಗೆ ವಂಚಿಸುತ್ತಿದ್ದಾರೆ ಎನ್ನುವ ಆರೋಪ ಕೇಳಿಬಂದಿದೆ. ಜಯನಗರದ 4ನೇ ಬ್ಲಾಕ್‌ನಲ್ಲಿ ಹಣದ ಸಮೇತ ನಿಂತಿದ್ದ ತಮಿಳುನಾಡಿನ ತಿರುನೆಲ್ವೇಳಿಯ ಗ್ಯಾಂಗ್ ಪೊಲೀಸರ ಬಲೆಗೆ ಬಿದ್ದಿದ್ದಾರೆ. ಆರೋಪಿಗಳು 10 ಲಕ್ಷ ಅಸಲಿ ನೋಟಿಗೆ ಒರಿಜಿನಲ್ ರೀತಿಯೇ ಕಾಣುವ 3 ಪಟ್ಟು ಹಣ ನೀಡುತ್ತೇವೆ ಅಂತಾ ಜನರನ್ನು ನಂಬಿಸುತ್ತಿದ್ರು. ತಮಿಳುನಾಡಿನಲ್ಲಿ ಸಕ್ರಿಯವಾಗಿದ್ದ ಈ ಗ್ಯಾಂಗ್ ಇತ್ತೀಚಿಗೆ ಬೆಂಗಳೂರಲ್ಲಿ ಆ್ಯಕ್ಟೀವ್ ಆಗಿತ್ತು.

ಜಯನಗರ 4ಣು ಬ್ಲಾಕ್‌ನಲ್ಲಿ ಹಣದ ಸಮೇತ ನಿಂತಿದ್ದ ಗ್ಯಾಂಗ್ ಬಗ್ಗೆ ಖಚಿತ ಮಾಹಿತಿ ಪಡೆದ ಜಯನಗರ ಪೊಲೀಸ್ರು ರೆಡ್ ಹ್ಯಾಂಡ್ ಆಗಿ ಮೂವರು ಆರೋಪಿಗಳನ್ನು ಲಾಕ್ ಮಾಡಿದ್ದಾರೆ. ಪೊಲೀಸರ ದಾಳಿ ವೇಳೆ ವಂಚಕರು ನೋಟಿನ ಬಂಡಲ್ ಮೇಲ್ಭಾಗ ಮತ್ತು ಕೆಳ ಭಾಗದಲ್ಲಿ ಒರಿಜಿನಲ್ ನೋಟುಗಳನ್ನಿಟ್ಟು ಮಧ್ಯಭಾಗದಲ್ಲಿ ಬಿಳಿ ಹಾಳೆ ಜೋಡಿಸಿ ವಂಚನೆ ಮಾಡ್ತಿದ್ದರು ಎಂಬುದು ಬೆಳಕಿಗೆ ಬಂದಿದೆ. ಸದ್ಯ ಮೂವರನ್ನ ಬಂಧಿಸಿ ಇನ್ನುಳಿದ ಆರೋಪಿಗಳಿಗಾಗಿ ಜಯನಗರ ಪೊಲೀಸರು ಹುಡುಕಾಟ ಮುಂದುವರಿಸಿದ್ದಾರೆ.

ಖತರ್ನಾಕ್ ಗ್ಯಾಂಗ್ ಹಲವರಿಗೆ ಇದೇ ರೀತಿ ವಂಚನೆ ಮಾಡಿರೋದು ಬೆಳಕಿಗೆ ಬಂದಿದ್ದು, ಪೊಲೀಸರು ತನಿಖೆ ಮುಂದುವರಿಸಿದ್ದಾರೆ.

# ಡಿಸೆಂಬರ್ 7ಕ್ಕೆ ಶಿಕ್ಷಕರ ಅರ್ಹತಾ ಪರೀಕ್ಷೆ ಶಿಕ್ಷಣ ಇಲಾಖೆ ಆದೇಶ

• ಉದಯವಾಹಿನಿ, ಬೆಂಗಳೂರು

ಡಿ. 7ರಂದು ಶಿಕ್ಷಕರ ಅರ್ಹತಾ ಪರೀಕ್ಷೆ ನಡೆಸಲು ಶಿಕ್ಷಣ ಇಲಾಖೆ ದಿನಾಂಕ ಘೋಷಣೆ ಮಾಡಿದೆ. ಈ ಸಂಬಂಧ ಶಾಲಾ ಶಿಕ್ಷಣ ಇಲಾಖೆ ಮಾಧ್ಯಮ ಹೇಳಿಕೆ ಬಿಡುಗಡೆ ಮಾಡಿದೆ. ಡಿ.7ಕ್ಕೆ ಟಿಇಟಿ ಪರೀಕ್ಷೆ ನಡೆಸಲು ದಿನಾಂಕ ನಿಗದಿ ಮಾಡಿದ್ದು, ಡಿ.31ಕ್ಕೆ ಫಲಿತಾಂಶ ಪ್ರಕಟವಾಗಲಿದೆ. ಶಿಕ್ಷಕರ ಅರ್ಹತಾ ಪರೀಕ್ಷೆ ಕುರಿತ ಅಧಿಸೂಚನೆ ಹೊರಡಿಸಲಾಗುತ್ತಿದ್ದು, ಅಭ್ಯರ್ಥಿಗಳು ಅ.23ರಿಂದ ನ. 09ರವರೆಗೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದಾಗಿದೆ. ಕಲ್ಯಾಣ ಕರ್ನಾಟಕ ಪ್ರದೇಶದ ಮತ್ತು ಉಳಿದ ಶಿಕ್ಷಕರ ಹುದ್ದೆಗಳ ಭರ್ತಿಗೂ ಸಿಇಟಿ ಪರೀಕ್ಷೆಯ ಮೂಲಕ ಶೀಘ್ರದಲ್ಲೇ ಕ್ರಮ ಕೈಗೊಳ್ಳಲಾಗುವುದು ಎಂದು ಇಲಾಖೆ ಮಾಹಿತಿ ನೀಡಿದೆ.

# ಶಕ್ತಿದೇವತೆ ಹಾಸನಾಂಬೆ ದರ್ಶನಕ್ಕೆ ಜನಸಾಗರ ಬೆಂಗಳೂರು To ಹಾಸನ ಬಸ್ ಸಂಚಾರ ಸ್ಥಗಿತ

• ಉದಯವಾಹಿನಿ, ಬೆಂಗಳೂರು

ಹಾಸನಾಂಬೆ ದರ್ಶನಕ್ಕೆ ರಾಜ್ಯದ ಮೂಲೆ ಮೂಲೆಗಳಿಂದ ಸಹಸ್ರಾರು ಸಂಖ್ಯೆಯಲ್ಲಿ ಭಕ್ತರು ಧಾವಿಸುತ್ತಿದ್ದರು. ವಾರಾಂತ್ಯ ಹಾಗೂ ದೀಪಾವಳಿ ರಜೆ ಕಾರಣದಿಂದ ಭಕ್ತರ ಸಂಖ್ಯೆ ಹೆಚ್ಚಾಗಿದೆ. ಹೀಗಾಗಿ ಬೆಂಗಳೂರು-ಹಾಸನ ಬಸ್ ಸಂಚಾರ ತಾತ್ಕಾಲಿಕವಾಗಿ ಸ್ಥಗಿತ ಮಾಡಲಾಗಿದೆ. ಜನಸಂಖ್ಯೆ ನಿಯಂತ್ರಿಸಲು ಟಿಕೆಟ್ ಬುಕಿಂಗ್ ಕೂಡ ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿದೆ.

**ಕೆಎಸ್‌ಆರ್‌ಟಿಸಿ ಬಸ್ ಸಂಚಾರ ಸ್ಥಗಿತ:** ಹಾಸನಾಂಬೆ ದೇಗುಲ ಹಾಗೂ ಸುತ್ತಮುತ್ತ ಬಾರಿ ಜನಸ್ತೋಮ ನೆರೆದಿದೆ. ಭಕ್ತರು ಹಾಸನಾಂಬೆ ದರ್ಶನಕ್ಕೆ ಸರತಿ ಸಾಲಿನಲ್ಲಿ ಕಾಯುತ್ತಿದ್ದಾರೆ. ಇತ್ತ ಭಾರಿ ಸಂಖ್ಯೆಯಲ್ಲಿ ಭಕ್ತರು ಆಗಮಿಸುತ್ತಿದ್ದಾರೆ. ಭಕ್ತರ ನಿಯಂತ್ರಣಕ್ಕೆ ಪೊಲೀಸರು ಹರಸಾಹಸ ಪಡುತ್ತಿದ್ದಾರೆ. ಭಕ್ತರನ್ನು ನಿಯಂತ್ರಸಲು ಅಸಾಧ್ಯದ ಪರಿಸ್ಥಿತಿ ನಿರ್ಮಾಣವಾಗುತ್ತಿದ್ದಂತೆ ತಾತ್ಕಾಲಿಕವಾಗಿ ಕೆಎಸ್‌ಆರ್‌ಟಿಸಿ ಬಸ್ ಸಂಚಾರ ಸ್ಥಗಿತಗೊಳಿಸಲಾಗಿದೆ. ತಾತ್ಕಾಲಿಕವಾಗಿ ಬಸ್ ಸಂಚಾರ ಸ್ಥಗಿತಗೊಂಡಿದೆ.

# ಕರಾವಳಿ ಭಾಗದಲ್ಲಿ ಹೆಚ್ಚಿನ ಮಳೆ ನಿರೀಕ್ಷೆ, 20 ಜಿಲ್ಲೆಗಳಿಗೆ ಯೆಲ್ಲೋ ಅಲರ್ಟ್

• ಉದಯವಾಹಿನಿ, ಬೆಂಗಳೂರು

ಚಳಿಗಾಲ ಋತುವಿಗೆ ಹತ್ತಿರ ಬಂದರೂ ರಾಜ್ಯದಲ್ಲಿ ಮಳೆ ಕಡಿಮೆಯಾಗಿಲ್ಲ. ಕರ್ನಾಟದಲ್ಲಿ ಭಾರಿ ಮಳೆಯಾಗುವ ಸಾಧ್ಯತೆಯಿದೆ ಎಂದು ಹವಾಮಾನ ಇಲಾಖೆ 20 ಜಿಲ್ಲೆಗಳಿಗೆ ಯೆಲ್ಲೋ ಅಲರ್ಟ್ ಘೋಷಿಸಿದೆ. ಉತ್ತರ ಒಳನಾಡು ಭಾಗದಲ್ಲಿ ಸಣ್ಣ ಪ್ರಮಾಣದಲ್ಲಿ, ಬೆಂಗಳೂರು ಸೇರಿದಂತೆ ದಕ್ಷಿಣ ಒಳನಾಡು ಪ್ರದೇಶದಲ್ಲಿ ಸಾಧಾರಣ ಮಳೆ, ಕರಾವಳಿ ಮತ್ತು ಘಟ್ಟ ಪ್ರದೇಶಗಳಲ್ಲಿ ಭಾರೀ ಮಳೆಯಾಗುವ ಸೂಚನೆಯನ್ನು ಹವಾಮಾನ ಇಲಾಖೆ ನೀಡಿದೆ.



**ಮಳೆ ಬೀಳುವ ಜಿಲ್ಲೆಗಳು:** ದಕ್ಷಿಣ ಕನ್ನಡ, ಉತ್ತರ ಕನ್ನಡ ಮತ್ತು ಉಡುಪಿಯಲ್ಲಿ ಗುಡುಗು ಸಹಿತ ಮಳೆಯಾಗಲಿದೆ. ಬೆಳ್ತಂಗಡಿ, ಪುತ್ತೂರು, ಸುಳ್ಯ, ಕುಂದಾಪುರ ಮತ್ತು ಕಾರ್ಕಳದಲ್ಲಿ ಮಳೆ ತುಸು ಹೆಚ್ಚಾಗುವ ನಿರೀಕ್ಷೆ ಇದೆ. ಹವಾಮಾನ ವೈಪರೀತ್ಯದ ಕಾರಣ ಸಮುದ್ರಕ್ಕೆ ಇಳಿಯದಂತೆ ಮೀನುಗಾರರಿಗೆ ಸೂಚಿಸಲಾಗಿದೆ.

# ಬಿಜೆಪಿ ಇದರಲ್ಲಿ ವಿನಾಕಾರಣ ರಾಜಕಾರಣ ಮಾಡುತ್ತಿದೆ

## ■ ಚಿತ್ತಾಪುರ ಗಲಾಟೆ: ಸರ್ಕಾರ ಯಾವುದೇ ಸಂಘಟನೆಯನ್ನು ಗುರಿಮಾಡಿಲ್ಲ: ಶಾಂತಿ ಭಂಗವಾದರೆ ಎಚ್ಚರಿಕೆ: ಸಿಎಂ

• **ಉದಯವಾಹಿನಿ, ಮೈಸೂರು**

ಸರ್ಕಾರವೂ ಆದೇಶ ಹೊರಡಿಸಿದೆ



ನಾವು ಆರ್‌ಎಸ್‌ಎಸ್ ಟಾರ್ಗೆಟ್ ಮಾಡಿಲ್ಲ. ಎಲ್ಲಾ ಸಂಘಟನೆಗಳಿಗೂ ಕೂಡ ಅನ್ವಯ ಆಗುವಂತೆ ಆದೇಶ ಮಾಡಿದ್ದೇವೆ. ಬಿಜೆಪಿ ಇದರಲ್ಲಿ ವಿನಾಕಾರಣ ರಾಜಕಾರಣ ಮಾಡುತ್ತಿದೆ ಎಂದರು. ಮೈಸೂರಿನಲ್ಲಿ ಮಾತನಾಡಿದ ಸಿಎಂ ಸಿದ್ದರಾಮಯ್ಯ, ಚಿತ್ತಾಪುರದ ಗಲಾಟೆಯ ಬಗ್ಗೆ ಮಾಹಿತಿ ಪಡೆಯುತ್ತೇನೆ. ಯಾವುದೇ ಸಂಘಟನೆಯನ್ನು ಟಾರ್ಗೆಟ್ ಮಾಡಿಲ್ಲ ಎಂದರು.

ಇನ್ನು ಬಿಜೆಪಿ ಪ್ರತಿಕ್ರಿಯೆ ವಿಚಾರವಾಗಿ ಮಾತನಾಡಿ, ಮೊದಲಿನಿಂದಲೂ ಬಿಜೆಪಿ ಇದನ್ನೇ ಮಾಡಿಕೊಂಡು ಬರುತ್ತಿದೆ. ಬಿಜೆಪಿಯಿಂದ ಕರ್ನಾಟಕದಲ್ಲಿ ಶಾಂತಿ ಭಂಗ ಮಾಡಲು ಸಾಧ್ಯವಿಲ್ಲ ಎಂದರು. ಯಾವುದೇ ಸಂಘ ಸಂಸ್ಥೆಗಳ ಚಟುವಟಿಕೆಗಳನ್ನು ಜನರಿಗೆ ತೊಂದರೆಯಾಗುವಂತೆ ಸಾರ್ವಜನಿಕ ಸ್ಥಳಗಳಲ್ಲಿ ನಡೆಸಲು ಅನುಮತಿ ಪಡೆಯುವಂತೆ ಆದೇಶ ನೀಡಲಾಗಿದ್ದು, ಇದರಲ್ಲಿ ಯಾವುದೇ ಸಂಘ ಸಂಸ್ಥೆಗಳನ್ನು ಗುರಿಯಾಗಿಸಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಚಿತ್ತಾಪುರದಲ್ಲಿ ಆರ್‌ಎಸ್‌ಎಸ್ ಪಥಸಂಚಲನದ ಬಗ್ಗೆ ಗೊಂದಲ ಎದ್ದಿರುವ ಬಗ್ಗೆ ಪ್ರತಿಕ್ರಿಯೆ ನೀಡಿ, ಈ ಬಗ್ಗೆ ಹಿಂದೆ ಬಿಜೆಪಿಯ ಜಗದೀಶ್ ಶೆಟ್ಟರ್ ಅವರ ನೇತೃತ್ವದ ಸರ್ಕಾರ ಆದೇಶ ಹೊರಡಿಸಿದಂತೆ , ನಮ್ಮ ಸರ್ಕಾರವೂ ಆದೇಶವನ್ನು ಹೊರಡಿಸಿದೆ. ಬಿಜೆಪಿ ಸರ್ಕಾರ ಹೊರಡಿಸಿದ್ದ ಈ ಆದೇಶಕ್ಕೆ ಯಾವುದೇ ವಿರೋಧ ವ್ಯಕ್ತವಾಗಿರಲಿಲ್ಲ. ಈ ಆದೇಶದಲ್ಲಿ ಸರ್ಕಾರ ಯಾವುದೇ ನಿಗಧಿತವಾದ ಸಂಘ ಸಂಸ್ಥೆಯನ್ನು ಗುರಿ ಮಾಡಿಲ್ಲ. ಬಿಜೆಪಿ ಜನರ ಹಿತ ಚಿಂತನೆ ಮಾಡುವುದನ್ನು ಬಿಟ್ಟು ರಾಜಕೀಯದಲ್ಲಿ ತೊಡಗಿದ್ದಾರೆ. ಈ ವಿಷಯದಲ್ಲಿ ಸಮಾಜದ ಶಾಂತಿಭಂಗವಾಗದಂತೆ ಪೊಲೀಸ್ ಇಲಾಖೆ ನೋಡಿಕೊಳ್ಳುತ್ತದೆ ಎಂದರು.

> **ಚಿತ್ತಾಪುರ ಗಲಾಟೆ ಬಗ್ಗೆ ಮಾಹಿತಿ ಪಡೆಯುತ್ತೇನೆ. ಯಾವುದೇ ಸಂಘಟನೆಗಳನ್ನು ಗುರಿಯಾಗಿಸಿಲ್ಲ, ಎಲ್ಲರಿಗೂ ಅನ್ವಯವಾಗುವ ಆದೇಶ. ಬಿಜೆಪಿ ಅನಗತ್ಯ ರಾಜಕೀಯ ಮಾಡುತ್ತಿದೆ.**
> – ಸಿದ್ದರಾಮಯ್ಯ, ಮುಖ್ಯಮಂತ್ರಿ

**ಘಟನೆ ಏನು?:** ಸಚಿವ ಪ್ರಿಯಾಂಕ್ ಖರ್ಗೆ ಅವರ ತವರು ಕ್ಷೇತ್ರವಾದ ಚಿತ್ತಾಪುರದಲ್ಲಿ, ರಾಷ್ಟ್ರೀಯ ಸ್ವಯಂಸೇವಕ ಸಂಘ ಆಯೋಜಿಸಿದ್ದ ಪಥ ಸಂಚಲನಕ್ಕಾಗಿ ಅಳವಡಿಸಲಾಗಿದ್ದ ಅಲಂಕಾರಿಕ ಕೇಸರಿ ಧ್ವಜಗಳು ಮತ್ತು ಬ್ಯಾನರ್‌ಗಳನ್ನು ತಡರಾತ್ರಿ ಪುರಸಭೆ ಸಿಬ್ಬಂದಿ ತೆರವುಗೊಳಿಸಿದ್ದಾರೆ.

ವಿಜಯ ದಶಮಿ ಉತ್ಸವ ಹಾಗೂ RSSನ 100ನೇ ವರ್ಷದ ಸಂಭ್ರಮಾಚರಣೆಗಾಗಿ ಈ ಸಿದ್ಧತೆಗಳನ್ನು ಮಾಡಲಾಗಿತ್ತು. ಪರವಾನಗಿ ಇಲ್ಲದೆ ಅಳವಡಿಸಲಾಗಿದೆ ಎಂಬ ಕಾರಣ ನೀಡಿ ಈ ಕ್ರಮ ಕೈಗೊಳ್ಳಲಾಗಿದೆ.

**ಗುತ್ತಿಗೆದಾರರ ಬಾಕಿ- ಸಂಬಂಧಪಟ್ಟ ಸಚಿವರಿಂದ ಕ್ರಮ:** ಗುತ್ತಿಗೆದಾರರ ಬಾಕಿ ಪಾವತಿಯಾಗದಿದ್ದರೆ ರಾಜ್ಯಪಾಲರನ್ನು ಭೇಟಿಮಾಡುವುದಾಗಿ ಕೂಗೆದ್ದಿರುವ ಬಗ್ಗೆ ಪ್ರತಿಕ್ರಿಯೆ ನೀಡಿ, ಈ ಬಗ್ಗೆ ಸಂಬಂಧಪಟ್ಟ ಸಚಿವರು ಕ್ರಮ ಕೈಗೊಳ್ಳಲಿದ್ದಾರೆ ಎಂದು ಸ್ಪಷ್ಟಪಡಿಸಿದರು.

### ಎಲ್ಲಾ ಜಿಲ್ಲೆಗಳಲ್ಲಿ ಉದ್ಯೋಗ ಮೇಳ

**ಮೈಸೂರಿನ ಉದ್ಯೋಗ ಮೇಳ ಯಶಸ್ವಿಯಾಗಿರುವ ಬಗ್ಗೆ ತಮ್ಮ ಅಭಿಪ್ರಾಯ ತಿಳಿಸುತ್ತಾ, ನಿನ್ನೆಯ ಉದ್ಯೋಗ ಮೇಳ ಯಶಸ್ವಿಯಾಗಿ ನೆರವೇರಿದ್ದು, ಈ ಕಾರ್ಯಕ್ರಮವನ್ನು ರಾಜ್ಯದ ಉಳಿದ ಜಿಲ್ಲೆಗಳಲ್ಲಿ ಹಮ್ಮಿಕೊಳ್ಳಲಾಗುವುದು ಎಂದು ತಿಳಿಸಿದರು.**

## ಮಿನಿ ನ್ಯೂಸ್


ಉದಯವಾಹಿನಿ ಚಿತ್ರ

• **ಉದಯವಾಹಿನಿ, ಮೈಸೂರು**

**ಮೈಸೂರಿನ ರಾಣಿ ಬಹದ್ದೂರ್ ಸಭಾಂಗಣದಲ್ಲಿ ಶನಿವಾರ ಮೈಸೂರು ಫೋಟೋ ಜರ್ನಲಿಸ್ಟ್ ಅಸೋಸಿಯೇಷನ್ ಆಯೋಜಿಸಿದ್ದ ಸಿಎಂ ಸಿದ್ದರಾಮಯ್ಯರವರ ಹೆಸರಿನಲ್ಲಿ ನೀಡಲಾದ ಪತ್ರಿಕೆ ಛಾಯಾಗ್ರಾಹಕರ ರಾಜ್ಯಮಟ್ಟದ ಸುದ್ದಿ ಛಾಯಾಚಿತ್ರ ಸ್ಪರ್ಧೆಯಲ್ಲಿ ದ್ವಿತೀಯ ಬಹುಮಾನವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯರವರು ಪ್ರಜಾವಾಣಿ ಮತ್ತು ಡೆಕ್ಕನ್ ಹೆರಾಲ್ಡ್ ಪತ್ರಿಕೆಯ ಹಿರಿಯ ಛಾಯಾಗ್ರಹಕ ಎಂ.ಎಸ್. ಮಂಜುನಾಥ್‌ರವರಿಗೆ ನೀಡಿದರು.**

# ಬಡಾಮಕಾನ್ ದರ್ಗಾದಲ್ಲಿ ಪೊಲೀಸರಿಗೆ ನೋಟು ಎರಚಿ ಸನ್ಮಾನ

• **ಉದಯವಾಹಿನಿ, ಚನ್ನಪಟ್ಟಣ**


ಉದಯವಾಹಿನಿ ಚಿತ್ರ

ಬಡಾಮಕಾನ್ ದರ್ಗಾದಲ್ಲಿ ಹಜರತ್ ಸೈಯದ್ ಮಹಮ್ಮದ್ ಅಖಿಲ್ ಷಾ ಖಾದ್ರಿ ಅವರ ಗಂಧ ಮಹೋತ್ಸವದ ಕೊನೆ ದಿನವಾದ ರಾತ್ರಿ ನಡೆದ ಕವ್ವಾಲಿ ಕಾರ್ಯಕ್ರಮದಲ್ಲಿ, ಆಯೋಜಕರು ಪಟ್ಟಣದ ಮೂವರು ಪೊಲೀಸರಿಗೆ ಸನ್ಮಾನಿಸಿ ಅವರ ಮೇಲೆ ನೋಟುಗಳನ್ನು ಎರಚಿದ್ದಾರೆ. ಚನ್ನಪಟ್ಟಣ ಟೌನ್ ಪೊಲೀಸ್ ಠಾಣೆಯ ಪಿಎಸ್‌ಐ ಹರೀಶ್ ಸಿ.ಎಂ, ಎಎಸ್‌ಐ ಫೈರೋಜ್ ಹಾಗೂ ಪೂರ್ವ ಠಾಣೆಯ ದುರ್ಗಪ್ಪ ನೋಟಿನ ಸನ್ಮಾನ ಸ್ವೀಕರಿಸಿದವರು. ಘಟನೆಯ ವಿಡಿಯೋ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದ್ದಂತೆ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಆರ್. ಶ್ರೀನಿವಾಸ ಗೌಡ ಅವರು ಮೂವರಿಗೂ ಷೋಕಾಸ್ ನೋಟಿಸ್ ನೀಡಿದ್ದಾರೆ.

ನಾಲ್ಕು ದಿನಗಳ ಗಂಧ ಮಹೋತ್ಸವದ ಕಡೆಯ ದಿನದ ರಾತ್ರಿ ಕವ್ವಾಲಿ ಕಾರ್ಯಕ್ರಮವಿತ್ತು. ಅದು ಮುಗಿದ ಬಳಿಕ ಮಹೋತ್ಸವಕ್ಕೆ ಶ್ರಮಿಸಿದವರಿಗೆ ಆಯೋಜಕರು ವೇದಿಕೆಗೆ ಕರೆದು ಸನ್ಮಾನಿಸುತ್ತಿದ್ದರು. ಅದರಂತೆ, ಮಹೋತ್ಸವಕ್ಕೆ ಪೊಲೀಸ್ ಬಂದೋಬಸ್ತ್ ಒದಗಿಸಿದ ಕಾರಣಕ್ಕೆ ಮೂವರೂ ಅಧಿಕಾರಿಗಳನ್ನು ವೇದಿಕೆಗೆ ಕರೆದರು. ಪೊಲೀಸ್ ಸಮವಸ್ತ್ರದಲ್ಲಿದ್ದ ಮೂವರಿಗೂ ದೊಡ್ಡ ಹೂವಿನಹಾರ ಮತ್ತು ಟ್ರೋಫಿ ನೀಡಿ ಸನ್ಮಾನಿಸಿದರು. ಬಳಿಕ, 20ರ ನೋಟುಗಳನ್ನು ಮೂವರ ಮೇಲೂ ಎರಚಿದರು.

ಈ ವೇಳೆ, ಸಭಿಕರು ಜೋರಾಗಿ ಕೂಗಿ ಶಿಳ್ಳೆ ಹಾಕಿದರು. ಸಾರ್ವಜನಿಕ ಕಾರ್ಯಕ್ರಮದಲ್ಲಿದ್ದೇವೆ ಎಂಬುದರ ಪರಿವಿಲ್ಲದ ಮೂವರೂ, ತಮ್ಮ ಮೇಲೆ ನೋಟು ಎರಚುತ್ತಿದ್ದರೂ ತಡೆಯದೆ ಖುಷಿಯಿಂದ ಸನ್ಮಾನ ಸ್ವೀಕರಿಸಿದರು. ಪೊಲೀಸರ ಮೈ ಮೇಲೆ ಎರಚುತ್ತಿದ್ದ ನೋಟುಗಳು ಕೆಳಕ್ಕೆ ಬೀಳುತ್ತಿದ್ದಾಗ ವೇದಿಕೆಯ ಮುಂಭಾಗದಲ್ಲಿ ಕುಳಿತಿದ್ದವರು, ನಾ ಮುಂದು ತಾ ಮುಂದೆ ಎಂದು ಎರಕಿಕೊಂಡರು.

### ಷೋಕಾಸ್ ನೋಟಿಸ್ ಜಾರಿ

**ದೊಡ್ಡ ಕಾರ್ಯಕ್ರಮಗಳಲ್ಲಿ ಯಾವುದೇ ರೀತಿಯ ಅಚಾತುರ್ಯಕ್ಕೆ ಅವಕಾಶವಿಲ್ಲದಂತೆ ಪೊಲೀಸರು ಬಂದೋಬಸ್ತ್ ಒದಗಿಸಿದ್ದಾರೆಂಬ ಕಾರಣಕ್ಕೆ ಅಭಿಮಾನದಿಂದ ಜನ ಸನ್ಮಾನಿಸುತ್ತಾರೆ. ಆದರೆ, ಗಂಧ ಮಹೋತ್ಸವದ ಕಡೆಯ ದಿನ ಸನ್ಮಾನಿಸಿ ಹಣ ಎರಚಿರುವುದು ತಪ್ಪು. ಘಟನೆಗೆ ಸಂಬಂಧಿಸಿದಂತೆ ಪಿಎಸ್ಐಗಳಾದ ಹರೀಶ್ ಸಿ.ಎಂ, ದುರ್ಗಪ್ಪ ಹಾಗೂ ಎಎಸ್‌ಐ ಫೈರೋಜ್ ಅವರಿಗೆ ಷೋಕಾಸ್ ನೋಟಿಸ್ ನೀಡಲಾಗಿದ್ದು, ಕಾನೂನು ಪ್ರಕಾರ ಕ್ರಮ ಕೈಗೊಳ್ಳಲಾಗುವುದು ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಆರ್. ಶ್ರೀನಿವಾಸ ಗೌಡ ಅವರು ಪ್ರತಿಕ್ರಿಯಿಸಿದರು.**

# 8 ಕೆರೆ ತುಂಬಿಸಲು ಕೂಡಿ ಬಂತು ಕಾಲ 3.24 ಕೋಟಿ ರೂ. ವೆಚ್ಚದಲ್ಲಿ ಕಾಮಗಾರಿ

• **ಉದಯವಾಹಿನಿ, ಹಾರೋಹಳ್ಳಿ**


ಉದಯವಾಹಿನಿ ಚಿತ್ರ

ತಾಲ್ಲೂಕಿನ ಮರಳವಾಡಿ ಭಾಗದ ಹನುಮಂತಪುರ, ಚಿಕ್ಕಮರಳವಾಡಿ, ಆನೆಹೊಸಹಳ್ಳಿ, ಕುಲುಮೆದೊಡ್ಡಿ, ಮಲ್ಲಿಗೆಮೆಟ್ಟಿಲು, ಬೈರೇಗೌಡನ ದೊಡ್ಡಿ ಸೇರಿದಂತೆ ಒಟ್ಟು ಎಂಟು ಕೆರೆಗಳನ್ನು ತುಂಬಿಸುವ ಯೋಜನೆಗೆ ಶನಿವಾರ ಚಾಲನೆ ನೀಡಲಾಗಿದೆ. ಸರ್ಕಾರದ ಅನುದಾನದಿಂದ ಸಣ್ಣ ನೀರಾವರಿ ಇಲಾಖೆಯು 3.24ಕೋಟಿ ವೆಚ್ಚದಲ್ಲಿ ಈ ಕಾಮಗಾರಿಯನ್ನು ಕೈಗೊಂಡಿದೆ. ಬನ್ನೇರುಘಟ್ಟದಿಂದ ಹರಿಯುವ ಸುವರ್ಣಮುಖಿ ನದಿ ನೀರನ್ನು ಪೈಪ್‌ಲೈನ್ ಮೂಲಕ ಈ ಕೆರೆಗಳಿಗೆ ತುಂಬುವ ಪ್ರಕ್ರಿಯೆ ನಡೆಯುತ್ತಿದೆ. ಮರಳವಾಡಿ ಭಾಗ ಬರಪೀಡಿತ ಪ್ರದೇಶವಾಗಿದ್ದು, ಅಂತರ್ಜಲ ಮಟ್ಟ ಗಣನೀಯವಾಗಿ ಕುಸಿದಿದೆ ಮತ್ತು ಕೃಷಿ ಮಳೆಯನ್ನೇ ಅವಲಂಬಿಸಿದೆ. ಈ ಯೋಜನೆಯಿಂದ ಅಂತರ್ಜಲ ಮಟ್ಟ ಏರಿಕೆಯಾಗಿ ರೈತರ ಬೆಳೆಗಳಿಗೆ ವರ್ಷಪೂರ್ತಿ ನೀರಿನ ಲಭ್ಯತೆ ಸಿಗಲಿದೆ ಎಂದು ನಿರೀಕ್ಷಿಸಲಾಗಿದೆ. ಕ್ಷೇತ್ರದ ಶಾಸಕ ಇಕ್ಬಾಲ್ ಹುಸೇನ್ ಹನುಮಂತಪುರದ ಕೆರೆಯಲ್ಲಿ ಪೂಜೆ ಸಲ್ಲಿಸಿ ಶನಿವಾರ ಯೋಜನೆಗೆ ಚಾಲನೆ ನೀಡಿದರು. ಇದೇ ಸಮಯದಲ್ಲಿ ತಾಲ್ಲೂಕಿನ 181 ಕೆರೆಗಳಲ್ಲಿ 77 ಕೆರೆಗಳ 91 ಎಕರೆ 14 ಗುಂಟೆ ಜಾಗವನ್ನು ಒತ್ತುವರಿದಾರರು ಆಕ್ರಮಿಸಿಕೊಂಡಿದ್ದಾರೆ ಎಂದು ಆರೋಪವಿದೆ. ಶತಮಾನಗಳ ಇತಿಹಾಸ ಹೊಂದಿರುವ ಈ ಕೆರೆಗಳು ಆಕ್ರಮಣದಿಂದ ಹಾನಿಗೊಳಗಾಗಿದ್ದು, ತಾಲ್ಲೂಕು ಆಡಳಿತ ಈ ಬಗ್ಗೆ ತಕ್ಷಣ ಕ್ರಮ ಕೈಗೊಂಡು ಕೆರೆಗಳನ್ನು ಅಭಿವೃದ್ಧಿಪಡಿಸಬೇಕೆಂಬ ಒತ್ತಾಯವನ್ನು ಸಾರ್ವಜನಿಕರು, ಸಾಮಾಜಿಕ ಕಾರ್ಯಕರ್ತರು ಮಾಡಿದ್ದಾರೆ.

> **ರೈತರಿಗೆ ಅನುಕೂಲ ಶಾಸಕರು ಕೆರೆಗಳಿಗೆ ನೀರು ತುಂಬಿಸಿ ಈ ಭಾಗದಲ್ಲಿ ಅಂತರ್ಜಲ ಮಟ್ಟ ಹೆಚ್ಚಿಸುವ ಕೆಲಸ ಮಾಡುತ್ತಿದ್ದು ಇದೊಂದು ಉತ್ತಮ ಕೆಲಸವಾಗಿದೆ. ಮುಂದಿನ ದಿನಗಳಲ್ಲಿ ಇನ್ನಷ್ಟು ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಲಾಗುವುದು. ಕೆರೆಗಳಿಗೆ ನೀರು ತುಂಬಿಸುವುದರಿಂದ ಅಂತರ್ಜಲ ಮಟ್ಟ ಹೆಚ್ಚುವುದರ ಜತೆಗೆ ರೈತರಿಗೂ ಅನುಕೂಲವಾಗಲಿದೆ.**
> –ಎಚ್.ಎ.ಇಕ್ಬಾಲ್ ಹುಸೇನ್ ಶಾಸಕ

# ಗುಜರಾತಿನಂತೆ ರಾಜ್ಯದಲ್ಲೂ ಸಚಿವ ಸಂಪುಟ ಪುನರ್ ರಚನೆಯಾಗಲಿ

• **ಉದಯವಾಹಿನಿ, ಕೋಲಾರ**

ಗುಜರಾತಿನಂತೆ ಕರ್ನಾಟಕದಲ್ಲೂ ಸಚಿವ ಸಂಪುಟ ಪುನರ್ ರಚನೆಯಾಗಬೇಕು. ಹಳಬರನ್ನು ತೆಗೆದು ಹೊಸಬರಿಗೆ ಅವಕಾಶ ಮಾಡಿಕೊಡಬೇಕು ಎಂದು ಮಾಲೂರು ಕ್ಷೇತ್ರದ ಕಾಂಗ್ರೆಸ್ ಶಾಸಕ ಕೆ.ವೈ.ನಂಜೇಗೌಡ ಒತ್ತಾಯಿಸಿದರು. ಜಿಲ್ಲಾ ಹಾಲು ಒಕ್ಕೂಟದ ಸಭಾಂಗಣದಲ್ಲಿ ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಎಲ್ಲಾ ಮಂತ್ರಿಗಳನ್ನು ಬದಲಾಯಿಸಬೇಕು.

ಕೋಲಾರ ಜಿಲ್ಲೆಯಲ್ಲಿ ನಾಲ್ವರು ಕಾಂಗ್ರೆಸ್ ಶಾಸಕರಿದ್ದು, ಮಂತ್ರಿ ಸ್ಥಾನ ಕೊಟ್ಟಿಲ್ಲ. ಈ ಬಗ್ಗೆ ನಮಗೆ ನೋವಿದೆ. ನಮಗೂ ಅವಕಾಶ ಮಾಡಿಕೊಡಬೇಕು. ನಾವೆಲ್ಲಾ ಕಷ್ಟಪಟ್ಟು ಶಾಸಕರಾಗಿದ್ದೇವೆ. ಯಾವಾಗ ಸಚಿವ ಸಂಪುಟ ವಿಸ್ತರಣೆ ಮಾಡುತ್ತಾರೆಯೋ ಗೊತ್ತಿಲ್ಲ. ಜಿಲ್ಲೆಯ ಕಾಂಗ್ರೆಸ್ ಶಾಸಕರು ಒಗ್ಗಟ್ಟಾಗಿದ್ದರೆ ಅವಕಾಶ ಖಂಡಿತ ಸಿಗಲಿದೆ ಎಂದರು. ಸಿಎಂ ಬದಲಾವಣೆ ಬಗ್ಗೆ ನಾನು ಮಾತನಾಡುವುದಿಲ್ಲ. ಈ ಸಂಬಂಧ ಹೈಕಮಾಂಡ್ ತೀರ್ಮಾನ ಕೈಗೊಳ್ಳುತ್ತದೆ. ಸಿಎಂ, ಡಿಸಿಎಂ ಸಂಬಂಧ ಚೆನ್ನಾಗಿದೆ. ಎಲ್ಲಾ ಶಾಸಕರಿಗೂ ಸಹಕಾರ ನೀಡುತ್ತಿದ್ದಾರೆ ಎಂದು ಹೇಳಿದರು. ಗುಜರಾತಿನ ಬಿಜೆಪಿ ಸರ್ಕಾರದಲ್ಲಿ ಮುಖ್ಯಮಂತ್ರಿ ಹೊರತುಪಡಿಸಿ ಎಲ್ಲರೂ ರಾಜೀನಾಮೆ ಕೊಟ್ಟಿದ್ದರು. ನಂತರ ಹೊಸ ಮುಖಗಳಿಗೆ ಅವಕಾಶ ಮಾಡಿಕೊಟ್ಟಿದ್ದಾರೆ. ನಮ್ಮಲ್ಲೂ ಹೊಸಬರಿಗೆ ದಾರಿ ಮಾಡಿಕೊಡಬೇಕು ಎಂದು ತಿಳಿಸಿದರು.

# ತುಮಕೂರು-ರಾಯದುರ್ಗ ರೈಲ್ವೆ ಕಾಮಗಾರಿ ಪರಿಶೀಲನೆ

• **ಉದಯವಾಹಿನಿ, ಪಾವಗಡ**


ಉದಯವಾಹಿನಿ ಚಿತ್ರ

ತಾಲ್ಲೂಕಿನಲ್ಲಿ ನಡೆಯುತ್ತಿರುವ ರೈಲ್ವೆ ಕಾಮಗಾರಿ ಪ್ರಗತಿಯನ್ನು ಕೇಂದ್ರ ರೈಲ್ವೆ ಸಚಿವ ವಿ. ಸೋಮಣ್ಣ ಪರಿಶಿಲಿಸಿದರು. ಕೆ.ರಾಂಪುರ ಬಳಿ ನಿರ್ಮಾಣಗೊಂಡಿರುವ ರೈಲ್ವೆ ನಿಲ್ದಾಣ ಕಾಮಗಾರಿ, ಪಟ್ಟಣ-ಪೆನುಗೊಂಡ ರಸ್ತೆಯ ಟಿ.ಎನ್ ಪೇಟೆ ಬಳಿಯ ರೈಲ್ವೆ ನಿಲ್ದಾಣ ಕಾಮಗಾರಿಯ ಪ್ರಗತಿ ವೀಕ್ಷಿಸಿದರು. ಕೆ ರಾಂಪುರ ಬಳಿಯ ರೈಲ್ವೆ ನಿಲ್ದಾಣಕ್ಕೆ ದೊಡ್ಡಹಳ್ಳಿ ಎಂದು ಹೆಸರಿಟ್ಟಿರುವ ಬಗ್ಗೆ ವಿವಾದ ಮುಂದುವರಿದಿದ್ದು, ಸ್ಥಳೀಯರು ನಿಲ್ದಾಣದ ಹೆಸರನ್ನು ಕೆ.ರಾಂಪುರ ರೈಲ್ವೆ ನಿಲ್ದಾಣ ಎಂದು ಮರುನಾಮಕರಣ ಮಾಡುವಂತೆ ಸಚಿವ ಸೋಮಣ್ಣ ಅವರಿಗೆ ಮನವಿ ಪತ್ರ ಸಲ್ಲಿಸಿದರು.

ಪತ್ರಕರ್ತರ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ರಾಜ್ಯ ಸರ್ಕಾರದ ಖಜಾನೆ ಖಾಲಿಯಾಗಿದೆ. ಹೀಗಾಗಿ ಆರ್ ಎಸ್‌ಎಸ್ ಹೆಸರಿನಲ್ಲಿ ಗೊಂದಲ ಸೃಷ್ಟಿಸುತ್ತಿದೆ. ರಾಜ್ಯದ ಹಲವೆಡೆ ಅತಿವೃಷ್ಟಿಯಾಗಿ ಸಮಸ್ಯೆಯಾಗಿದೆ. ಪಾವಗಡ ಸೇರಿದಂತೆ ಹಲವು ತಾಲ್ಲೂಕುಗಳಲ್ಲಿ ಸಮರ್ಪಕ ಮಳೆ ಬಿದ್ದಿಲ್ಲ. ಇಂತಹ ಸಮಸ್ಯೆ ಇರುವ ಪ್ರದೇಶಗಳಿಗೆ ಆದ್ಯತೆ ನೀಡಿ ಜನರ ಸಮಸ್ಯೆ ಬಗೆಹರಿಸಬೇಕು. ಸಲ್ಲದ ಗೊಂದಲ ಸೃಷ್ಟಿಸಬಾರದು. ಅಭಿವೃದ್ಧಿಯತ್ತ ಗಮನಕೊಡಬೇಕು ಎಂದರು.

# ಅಂಗನವಾಡಿ ಕಾರ್ಯಕರ್ತೆಯರ ಪ್ರತಿಭಟನೆ

• **ಉದಯವಾಹಿನಿ, ಗೌರಿಬಿದನೂರು**


ಉದಯವಾಹಿನಿ ಚಿತ್ರ

ಅಂಗನವಾಡಿ ಕಾರ್ಯಕರ್ತೆಯರನ್ನು ಆರ್ಥಿಕ ಮತ್ತು ಶೈಕ್ಷಣಿಕ ಸಮೀಕ್ಷೆ ಕಾರ್ಯದಿಂದ ಕೈ ಬಿಡಬೇಕು ಎಂದು ಒತ್ತಾಯಿಸಿ ತಾಲ್ಲೂಕು ಆಡಳಿತ ಕಚೇರಿಯ ಮುಂದೆ ಅಂಗನವಾಡಿ ಕಾರ್ಯಕರ್ತೆಯರು ಪ್ರತಿಭಟನೆ ನಡೆಸಿದರು. ಸಿಐಟಿಯು ಜಿಲ್ಲಾ ಕಾರ್ಯದರ್ಶಿ ಸಿದ್ದಗಂಗಪ್ಪ ಮಾತನಾಡಿ, ಸರ್ಕಾರ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ ಮಾಡುವಂತೆ ಶಾಲಾ ಶಿಕ್ಷಕರನ್ನು ನೇಮಿಸಿದ್ದು ಇವರಿಗೆ 20ಸಾವಿರ ಸಂಭಾವನೆ ನೀಡುತ್ತಿದ್ದರು ಸಹ ತಾಲ್ಲೂಕಿನ ಕೆಲವು ಶಿಕ್ಷಕರು ನಕಲಿ ವೈದ್ಯಕೀಯ ಪ್ರಮಾಣ ಪತ್ರ ನೀಡಿ ಪ್ರವಾಸ ಕೈಗೊಂಡಿದ್ದಾರೆ. ಈ ಬಗ್ಗೆ ಬಿಇಒ ಅವರಿಗೆ ದೂರು ನೀಡಿದ್ದೆವು. ಈಗ ಪ್ರವಾಸದಿಂದ ಬಂದ ಶಿಕ್ಷಕರು ಕೆಲಸ ಪ್ರಾರಂಭಿಸಿದ್ದಾರೆ. ಅವರು ಸಮೀಕ್ಷೆ ಮಾಡದೇ ಇರುವ ಕೆಲಸವನ್ನು ಅಂಗನವಾಡಿ ಕಾರ್ಯಕರ್ತೆಯರ ಮೇಲೆ ಒತ್ತಡ ಹೇರುವುದು ಎಷ್ಟು ಸರಿ ಎಂದು ಪ್ರಶ್ನಿಸಿದರು. ಗೌರವಧನ ಪಡೆಯುವ ಅಂಗನವಾಡಿ ಕಾರ್ಯಕರ್ತೆಯರ ಮೇಲೆ ಮಾನಸಿಕ ಹಿಂಸೆ, ದೌರ್ಜನ್ಯ ಸಹಿಸುವುದಿಲ್ಲ. ಶಿಕ್ಷಕರು ಸಮೀಕ್ಷೆಯಲ್ಲಿ ಬಿಟ್ಟಿರುವ ಮನೆಗಳನ್ನು ಇವರು ಮಾಡಬೇಕು ಎಂಬುವುದನ್ನು ಬಿಟ್ಟು ಸಹಕಾರ ನೀಡಬೇಕು. ತಾಲ್ಲೂಕು ಆಡಳಿತವಾಗಲಿ, ಶಿಕ್ಷಕರಾಗಲಿ ಅಂಗನವಾಡಿ ಕಾರ್ಯಕರ್ತೆಯರ ಮೇಲೆ ಸರ್ವಾಧಿಕಾರಿ ಧೋರಣೆ ನಡೆಸಿದರೆ ಸಹಿಸುವುದಿಲ್ಲ ಎಂದು ಎಚ್ಚರಿಕೆ ನೀಡಿದರು.

# ಖಾಲಿ ಹುದ್ದೆ ಭರ್ತಿಗೊಳಿಸಿ


• **ಉದಯವಾಹಿನಿ, ಮೈಸೂರು**

ಸರ್ಕಾರದಲ್ಲಿ ಖಾಲಿಯಿರುವ ವಿವಿಧ ಹುದ್ದೆಗಳನ್ನು ಭರ್ತಿ ಮಾಡುವಂತೆ ಒತ್ತಾಯಿಸಿ ನಿರುದ್ಯೋಗಿಗಳು, ವಿದ್ಯಾರ್ಥಿ ಸಂಘಟನೆ ಸದಸ್ಯರು ಮಾನಸ ಗಂಗೋತ್ರಿ ಆವರಣದ ಕ್ಲಾಕ್ ಟವರ್ ಬಳಿ ಪ್ರತಿಭಟಿಸಿದರು. ನಾಲ್ಕೈದು ಪದವಿ ತೆಗೆದುಕೊಂಡರೂ ಕನಿಷ್ಠ ಸರ್ಕಾರಿ ಉದ್ಯೋಗ ದೊರೆಯುತ್ತಿಲ್ಲ. ವಿದ್ಯಾರ್ಥಿಗಳು ಹೆಚ್ಚು ಹೆಚ್ಚು ಓದಿದ ಕಾರಣಕ್ಕೆ ಚಿತ್ರಹಿಂಸೆಗೆ ಗುರಿಯಾಗಿದ್ದು, ಮಾನಸಿಕವಾಗಿ ವಿಚಲಿತವಾಗಿದ್ದಾರೆ. ಪ್ರಧಾನಿ 10 ವರ್ಷದ ಹಿಂದೆಯೇ ವಾರ್ಷಿಕವಾಗಿ 2 ಕೋಟಿ ಉದ್ಯೋಗ ಸೃಷ್ಟಿ ಮಾಡುವುದಾಗಿ ಭರವಸೆ ನೀಡಿದ್ದರು. ಆದರೆ ಅಧಿಕಾರಕ್ಕೆ ಬಂದ ಮೇಲೆ ಅತಿ ಹೆಚ್ಚು ಉದ್ಯೋಗಗಳು ನಷ್ಟವಾಗಿ ಉದ್ಯೋಗ ಕ್ಷೇತ್ರದಲ್ಲಿ ನೇಮಕಾತಿ ನಡೆಯುತ್ತಿಲ್ಲ ಎಂದು ಆರೋಪಿಸಿದರು. ರಾಜ್ಯ ಸರ್ಕಾರದಲ್ಲಿ 2,73,386 ಮಂಜೂರಾದ ಖಾಲಿ ಹುದ್ದೆಗಳಿವೆ.

ಈ ಹುದ್ದೆ ಭರ್ತಿ ಮಾಡದೆ ಒಳ ಮೀಸಲಾತಿ, ಜಾತಿ ಸಮೀಕ್ಷೆ ನೆಪವೊಡ್ಡಿ ನೇಮಕಾತಿಯನ್ನು ನಾಜೂಕಾಗಿ ಮುಂದಕ್ಕೆ ಹಾಕುವ ಸರ್ಕಾರ ಇದೆಲ್ಲದರ ಅಣಕದಂತೆ ಖಾಸಗಿ ಉದ್ಯೋಗ ಮೇಳವನ್ನು ಏರ್ಪಡಿಸುತ್ತಿದೆ ಎಂದು ಟೀಕಿಸಿದರು. ವಿದ್ಯಾರ್ಥಿ ಯುವಜನರ ಕಷ್ಟವನ್ನು ಕೇಳುವ ಯಾವ ಹೋರಾಟಗಾರರೂ ಮಾಧ್ಯಮಗಳೂ, ಮುತ್ಸದ್ದಿ ವ್ಯಕ್ತಿಗಳು ನಮಗೆ ಕಾಣುತ್ತಿಲ್ಲ. ಕೂಡಲೇ ಖಾಲಿಯಿರುವ ಹುದ್ದೆ ಭರ್ತಿ ಮಾಡಬೇಕು ಎಂದು ಆಗ್ರಹಿಸಿದರು.

# ನಗರಸಭೆಗೆ ತೆರಿಗೆ ಪಾವತಿಸಲು ಮನವಿ

• **ಉದಯವಾಹಿನಿ, ಚಿಂತಾಮಣಿ**


ಉದಯವಾಹಿನಿ ಚಿತ್ರ

ನಗರಸಭೆಗೆ ತೆರಿಗೆ ಬಾಕಿ ಉಳಿಸಿಕೊಂಡಿರುವವರು ಕೂಡಲೇ ಬಾಕಿ ಪಾವತಿ ಮಾಡಬೇಕು ಇಲ್ಲದಿದ್ದರೆ ಮುಂದಿನ ದಿನಗಳಲ್ಲಿ ಅವರ ಹೆಸರನ್ನು ಬಹಿರಂಗಗೊಳಿಸಲಾಗುವುದು ಎಂದು ನಗರಸಭೆ ಆಯುಕ್ತ ಜಿ.ಎನ್.ಚಲಪತಿ ತಿಳಿಸಿದರು. ನಗರಸಭೆಯಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ನಗರಸಭೆಗೆ ಹೆಚ್ಚಿನ ತೆರಿಗೆ ಬಾಕಿ ಉಳಿಸಿಕೊಂಡಿರುವ ವಾಣಿಜ್ಯ ಸಂಸ್ಥೆಗಳು, ಅಂಗಡಿ ಮಳಿಗೆಗಳ ಹೆಸರುಗಳನ್ನು ಬಹಿರಂಗಪಡಿಸಿ ಮಾತನಾಡಿದರು.

ನಗರಸಭೆ ಅಂಗಡಿ-ಮುಂಗಟ್ಟುಗಳಿಗೆ ಅನೇಕ ಬಾರಿ ನೋಟಿಸ್ ನೀಡಲಾಗಿದೆ. 2 ತಿಂಗಳಿನಿಂದ ಕರಪತ್ರಗಳ ಮೂಲಕ ಮನವಿ ಮಾಡಲಾಗಿದೆ. ಬಾಕಿ ಇರುವವರಿಗೆ ಕಾಲಾವಕಾಶ ನೀಡಬೇಕು, ಏಕಾಏಕಿ ಬೀಗ ಹಾಕಬಾರದು ಎಂದು ಸಚಿವರು ಸೂಚಿಸಿದ್ದರು. ಎರಡು ತಿಂಗಳು ಕಾಲಾವಕಾಶ ನೀಡಿದ್ದರೂ ಬಾಕಿ ಕಟ್ಟಿಲ್ಲ. ಇನ್ನೂ 15 ದಿನ ಕಾಲಾವಕಾಶ ನೀಡಲಾಗುವುದು. ಪಾವತಿಸದಿದ್ದರೆ ಕಾನೂನಿನಂತೆ ಕ್ರಮಕೈಗೊಳ್ಳಲಾಗುವುದು ಎಂದು ತಿಳಿಸಿದರು. ಕೆಲವು ಕಟ್ಟಡಗಳ ಮಾಲೀಕರು ಕಡಿಮೆ ತೆರಿಗೆ ಕಟ್ಟುತ್ತಿದ್ದಾರೆ. ಹೆಚ್ಚು ಬಾಕಿ ಉಳಿಸಿಕೊಂಡಿರುವ 45 ಪ್ರಕರಣಗಳನ್ನು ಪಟ್ಟಿ ಮಾಡಲಾಗಿದೆ. ಅವರಿಂದ ಸುಮಾರು 9.35 ಕೋಟಿ ರೂ. ತೆರಿಗೆ ಬಾಕಿ ಬರಬೇಕಾಗಿದೆ ಎಂದರು.

ಕಿಸಾನ್ ಫ್ಯಾಕ್ಟರಿ 70.85 ಲಕ್ಷ ರೂ., ಆದರ್ಶ ಚಿತ್ರಮಂದಿರ 32ಲಕ್ಷ ರೂ., ಕೆಎಂಡಿ ಕಲ್ಯಾಣ ಮಂಟಪ 37.49 ಲಕ್ಷ ರೂ., ರಾಘವೇಂದ್ರಸ್ವಾಮಿ ಸೇವಾ ಟ್ರಸ್ಟ್ ರೂ. 29.59 ಲಕ್ಷ ರೂ., ಕೋಮಾರ್ಲು ಎಂಟರ್ ಪ್ರೈಸರ್ಸ್ 7.85 ಲಕ್ಷ ರೂ., ಕನ್ಯಕಾ ಪರಮೇಶ್ವರಿ ಸೇವಾ ಟ್ರಸ್ಟ್ 39 ಲಕ್ಷ ರೂ., ಚೆನ್ನಕೇಶವ ಲಾಡ್ಜ್ ರೂ. 16.95, ಕೆನರಾ ಬ್ಯಾಂಕ್ ಬಿಲ್ಡಿಂಗ್ ರೂ. 6.88, ಕೆ.ಎನ್.ನಾಗೇಂದ್ರ 72.17ಲಕ್ಷ ರೂ., ಅಶ್ವತ್ಥರೆಡ್ಡಿ 15 ಲಕ್ಷ ರೂ., ಎಂ.ಕೆ.ಬಿ ಶಾಲೆ 3.10 ಲಕ್ಷ ರೂ., ವೆಂಕಟೇಶ್ವರ ಎಂಟರ್ ಪ್ರೈಸರ್ಸ್ 1.30 ಲಕ್ಷ ರೂ., ಚೆಮ್ಮನೂರ್ ಜ್ಯೂಲರ್ಸ್ 4.70 ಲಕ್ಷ ರೂ., ಚೆಮ್ಮನೂರ್ ಜ್ಯುವೆಲರ್ಸ್ ರೂ. 2.90, ಭಾರತ್ ಪೆಟ್ರೋಲಿಯಂ 1.58ಲಕ್ಷ ರೂ., ಪ್ಯಾರೈಡರ್ಸ್ ಮಿಲ್ 79ಲಕ್ಷ ರೂ., ಪಿವಿಎನ್ ಸಿಲ್ಕ್ 1,94 ಲಕ್ಷ ರೂ., ಎಸ್.ಎಲ್.ಎನ್ ಚಿತ್ರಮಂದಿರ 20ಲಕ್ಷ ರೂ., ವುಡ್ ಲ್ಯಾಂಡ್ 26.86ಲಕ್ಷ ರೂ., ಬಾಲಾಜಿ ಲಾಡ್ಜ್ 20 ಲಕ್ಷ ರೂ., ಎಸ್.ಎಫ್.ಎಸ್ ಶಾಲೆ ಶ್ರೀರಾಮ ಸೇವಾ ಟ್ರಸ್ ರೂ.5.31, ಎನ್.ತಿಮ್ಮಾರೆಡ್ಡಿ 6.65ಲಕ್ಷ ರೂ., ಅನುರಾಗ ಬಾರ್ 1.85ಲಕ್ಷ ರೂ., ವೇಗಾ ಮಿಲ್ಸ್ 11.70ಲಕ್ಷ ರೂ., ಅಜಾದ್ ಕಲ್ಯಾಣ ಮಂಟಪ 9.95ಲಕ್ಷ ರೂ., ವಿಜಯಲಕ್ಷ್ಮಿ 4.83ಲಕ್ಷ ರೂ., ಫಾಸ್ಟ್ ಫುಡ್ ರಾಘವೇಂದ್ರ 1.83ಲಕ್ಷ ರೂ., ಎಂ.ಜಿ.ಸಂಜಯ ಕುಮಾರ್ 2.26ಲಕ್ಷ ರೂ., ಮಮತಾ ಅಂಡ್ ಸಂಜಯ ಕುಮಾರ್ 5 ಲಕ್ಷ ರೂ. ಬಾಕಿ ಇದೆ ಎಂದು ಮಾಹಿತಿ ನೀಡಿದರು.

# ಜಿ. ಪರಮೇಶ್ವರ್‌ಗೆ ಮೀಸಲು ಕ್ಷೇತ್ರ ಏಕೆ?

• **ಉದಯವಾಹಿನಿ, ತುಮಕೂರು**

ಜಿಲ್ಲಾ ಉಸ್ತುವಾರಿ ಸಚಿವ ಜಿ.ಪರಮೇಶ್ವರ ಸಾಮಾನ್ಯ ಕ್ಷೇತ್ರದಲ್ಲಿ ಯಾಕೆ ನಿಲ್ಲಬಾರದು ಅವರು ಸಾಮಾನ್ಯ ಕ್ಷೇತ್ರದಲ್ಲಿ ಸ್ಪರ್ಧಿಸಿದರೆ ಮೀಸಲು ಕ್ಷೇತ್ರದಿಂದ ಮತ್ತೊಬ್ಬರಿಗೆ ಸಹಾಯ ಆಗುವುದಿಲ್ಲವೇ ಎಂದು ಶಾಸಕ ಕೆ.ಎನ್.ರಾಜಣ್ಣ ಪ್ರಶ್ನಿಸಿದರು. ನಗರದಲ್ಲಿ ಶನಿವಾರ ಜಾಗೃತ ಕರ್ನಾಟಕ ಸಂಘಟನೆಯಿಂದ ಆಯೋಜಿಸಿದ್ದ ಸಾಮಾಜಿಕ, ಶೈಕ್ಷಣಿಕ ಸಮೀಕ್ಷೆ-ಈಡೇರುವುದೇ ಸರ್ವ ಸಮುದಾಯಗಳ ನಿರೀಕ್ಷೆ ವಿಚಾರಗೋಷ್ಠಿಯಲ್ಲಿ ಮಾತನಾಡಿದರು.

ಮೀಸಲು ಕ್ಷೇತ್ರ ಬಿಟ್ಟುಕೊಡುವ ಮನಃಸ್ಥಿತಿ ನಮ್ಮಲ್ಲಿ ಬರಬೇಕು. ಎಲ್ಲವನ್ನು ನಾವೇ ಬಳಸಿಕೊಂಡು ಕೂತರೆ ಬೇರೆಯವರು ಎಲ್ಲಿಗೆ ಹೋಗುತ್ತಾರೆ. ನಮ್ಮಲ್ಲಿ ಧೈರ್ಯದ ಕೊರತೆ ಇದ್ದು, ಅದು ಹೋಗಬೇಕು ಎಂದು ಪರಮೇಶ್ವರ ಅವರಿಗೆ ಸಲಹೆ ಮಾಡಿದರು. ಸಿಎಂ ಸಿದ್ದರಾಮಯ್ಯ ಅವರು ಎಚ್. ಕಾಂತರಾಜು, ಜಯಪ್ರಕಾಶ್ ಹೆಗ್ಡೆ ನೇತೃತ್ವದ ವರದಿ ಜಾರಿ ಮಾಡುವ ಮನಸ್ಥಿತಿ ಹೊಂದಿದ್ದರು. ಆದರೆ ವರದಿ ಜಾರಿಗೊಳಿಸದಂತೆ ಕಾಂಗ್ರೆಸ್ ನಾಯಕರೇ ಅವರ ಮೇಲೆ ಒತ್ತಡ ತಂದರು. ಹೀಗಾಗಿ ಮತ್ತೊಂದು ಸರ್ವೆ ನಡೆಸುವ ನಿರ್ಣಯ ಕೈಗೊಳ್ಳಬೇಕಾಯಿತು. ಈ ವಿಚಾರದಲ್ಲಿ ಅವರು ನಿಸ್ಸಹಾಯಕರಾದರು ಎಂದು ಹೇಳಿದರು.

> **ಯತೀಂದ್ರ ಸಿದ್ದರಾಮಯ್ಯ ಮುಂದೊಂದು ದಿನ ಮುಖ್ಯಮಂತ್ರಿ ಯಾಕಾಗಬಾರದು? ದೇವೇಗೌಡರಿಗೆ ಕುಮಾರಸ್ವಾಮಿ ಉತ್ತರಾಧಿಕಾರಿ ಆಗಬಹುದು, ಸಿದ್ದರಾಮಯ್ಯಗೆ ಯತೀಂದ್ರ ಉತ್ತರಾಧಿಕಾರಿ ಆದರೆ ತೊಂದರೆ ಏನು? ದೇವೇಗೌಡರು ಪ್ರಧಾನಮಂತ್ರಿ, ಮುಖ್ಯಮಂತ್ರಿ ಆಗುವುದಕ್ಕೆ ಅವರ ಹೋರಾಟ ಇದೆ. ಕುಮಾರಸ್ವಾಮಿ ಅವರಿಗೆ ಏನಿದೆ? ಅವರಪ್ಪನ ಹೆಸರಷ್ಟೇ ಬಂಡವಾಳ.**
> – ಕೆ.ಎನ್.ರಾಜಣ್ಣ, ಶಾಸಕ



# 1.10ಕೋಟಿ ರೂ. ವೆಚ್ಚದಲ್ಲಿ ಶಾಲಾ ಕಟ್ಟಡ ನಿರ್ಮಾಣ

• **ಉದಯವಾಹಿನಿ, ನಂಜನಗೂಡು**

ತಾಲ್ಲೂಕಿನ ಹೆಮ್ಮರಗಾಲ ಗ್ರಾಮದಲ್ಲಿ ಒಸಾಟ್ ಎಜುಕೇಷನ್ ಚಾರಿಟಬಲ್ ಟ್ರಸ್ಟ್, ದಾನಿಗಳಿಂದ ಸಂಗ್ರಹಿಸಿದ 1.10ಕೋಟಿ ರೂ, ವೆಚ್ಚದ ಕೆಪಿಎಸ್‌ಇ ಶಾಲೆಯ ಹೆಚ್ಚುವರಿ ಕಟ್ಟಡ ಕಾಮಗಾರಿಗೆ ಶಾಸಕ ದರ್ಶನ್ ಧ್ರುವನಾರಾಯಣ ಭೂಮಿ ಪೂಜೆ ನೆರವೇರಿಸಿದರು. ಸುದ್ದಿಗಾರರೊಂದಿಗೆ ಮಾತನಾಡಿ, ಸರ್ಕಾರಿ ಶಾಲೆಗಳಿಗೆ ಮೂಲ ಸೌಕರ್ಯಗಳನ್ನು ಒದಗಿಸಲು ಒಸಾಟ್ ಸಂಸ್ಥೆ 20 ವರ್ಷಗಳಿಂದ ಶ್ರಮಿಸುತ್ತಿದೆ, ಸಂಸ್ಥೆ ಗ್ರಾಮೀಣ ವಿದ್ಯಾರ್ಥಿಗಳಿಗೆ ಉತ್ತಮ ಕಲಿಕಾ ವಾತಾವರಣ ಕಾರ್ಯಕ್ಕೆ ಮುಂದಾಗಿರುವುದು ಶ್ಲಾಘನೀಯ, ಒಸಾಟ್ ಎಜುಕೇಶನ್ ಚಾರಿಟಬಲ್ ಟ್ರಸ್ಟ್ ಸಂಸ್ಥೆಯ ಮೂಲಕ ದಾನಿಗಳಾದ ರಾಜಲಕ್ಷ್ಮಿ ಅವರು ತಮ್ಮ ತಾಯಿಯ ನೆನಪಿಗಾಗಿ 1.10 ಕೋಟಿ ರೂ, ವೆಚ್ಚದಲ್ಲಿ ಆರು ಶಾಲಾ ಕೊಟ್ಟಡಿ, ಶೌಚಾಲಯವನ್ನು ನಿರ್ಮಿಸಿ ಕೊಡಲಿದ್ದಾರೆ. ಕಟ್ಟಡವನ್ನು ಸಂರಕ್ಷಿಸಿ, ಶಿಕ್ಷಣ ಪಡೆಯುವ ಮೂಲಕ ಸದುಪಯೋಗಪಡಿಸಿಕೊಳ್ಳಬೇಕು ಎಂದು ಹೇಳಿದರು. ಟ್ರಸ್ಟ್‌ನ ಬಾಲಕೃಷ್ಣರಾವ್ ಮಾತನಾಡಿ, ಒಸಾಟ್ ಸಂಸ್ಥೆಯು 20 ವರ್ಷಗಳಿಂದ ಸರ್ಕಾರಿ ಶಾಲೆಗಳಿಗೆ ಮೂಲ ಸೌಕರ್ಯಗಳನ್ನು ಒದಗಿಸುತ್ತಾ ಬಂದಿದ್ದು, 10 ರಾಜ್ಯಗಳಲ್ಲಿ ಈಗಾಗಲೇ 126 ಶಾಲೆಗಳನ್ನು ನಿರ್ಮಿಸಿ ಕೊಡಲಾಗಿದೆ. ಕರ್ನಾಟಕದಲ್ಲಿ 80 ಶಾಲೆಗಳನ್ನು ನಿರ್ಮಿಸಿದ್ದು, ಡಿಜಿಟಲ್ ಸೌಲಭ್ಯ ಸೇರಿದಂತೆ ಅಗತ್ಯ ಸೌಲಭ್ಯಗಳನ್ನು ಒದಗಿಸಿ ಸಮಗ್ರವಾಗಿ ಅಭಿವೃದ್ಧಿಪಡಿಸಿ ಶಿಕ್ಷಣಕ್ಕೆ ನೆರವು ನೀಡುತ್ತಿದೆ ಎಂದರು.

# ಮಾದಪ್ಪನ ಕ್ಷೇತ್ರದಲ್ಲಿ ಶೌಚಾಲಯಗಳ ಕೊರತೆ

## ● ಸರತಿ ಸಾಲಿನಲ್ಲಿ ನಿಂತು ಶೌಚಕ್ಕೆ ಹೋಗಬೇಕಾದ ಅನಿವಾರ್ಯತೆ: ಆಕ್ರೋಶ ಹೊರಹಾಕಿದ ಭಕ್ತರು

• **ಉದಯವಾಹಿನಿ, ಚಾಮರಾಜನಗರ**

ಲಕ್ಷಾಂತರ ಭಕ್ತರು ಭೇಟಿನೀಡುವ, ನಾಡಿನ ಪ್ರಮುಖ ಧಾರ್ಮಿಕ ಶ್ರದ್ಧಾ ಕೇಂದ್ರವಾಗಿರುವ ಮಲೆ ಮಹದೇಶ್ವರನ ಕ್ಷೇತ್ರದಲ್ಲಿ ಶೌಚಾಲಯಗಳ ಕೊರತೆ ಕಾಡುತ್ತಿದ್ದು ಅವ್ಯವಸ್ಥೆಯ ವಿರುದ್ಧ ಭಕ್ತರು ಸಾರ್ವಜನಿಕವಾಗಿ ಆಕ್ರೋಶ ಹೊರಹಾಕಿದ್ದಾರೆ. ಕೋಟ್ಯಂತರ ರೂಪಾಯಿ ಕಾಣಿಕೆ ಸಂಗ್ರಹವಾಗುತ್ತಿದ್ದರೂ ಭಕ್ತರ ಸಂಖ್ಯೆಗೆ ಅನುಗುಣವಾಗಿ ಕ್ಷೇತ್ರದಲ್ಲಿ ಶೌಚಾಲಯಗಳನ್ನು ನಿರ್ಮಾಣ ಮಾಡದ ಮಲೆ ಮಹದೇಶ್ವರ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ಕಾರ್ಯವೈಖರಿ ವಿರುದ್ಧ ಅಸಮಾಧಾನ ವ್ಯಕ್ತವಾಗಿದೆ.

> **ದೀಪಾವಳಿ ಜಾತ್ರೆಗೆ ಬರುವ ಭಕ್ತರಿಗೆ ಅನಾನುಕೂಲವಾಗದಂತೆ ತಾತ್ಕಾಲಿಕವಾಗಿ ಮೊಬೈಲ್ ಫೋನ್ ಶೌಚಾಲಯಗಳ ಅಳವಡಿಕೆಗೆ ಕ್ರಮ ತೆಗೆದುಕೊಳ್ಳಲಾಗುವುದು. ಶೌಚಾಲಯಗಳ ಶೀಘ್ರ ದುರಸ್ತಿ ಮಾಡಿಸಲಾಗುವುದು.**
> –ಸಿ.ಟಿ.ಶಿಲ್ಪಾನಾಗ್ ಜಿಲ್ಲಾಧಿಕಾರಿ

ಕ್ಷೇತ್ರದಲ್ಲಿ ವಿಜೃಂಭಣೆಯಿಂದ ನಡೆಯುತ್ತಿರುವ ದೀಪಾವಳಿ ಜಾತ್ರಾ ಮಹೋತ್ಸವಕ್ಕೆ ನಾಡಿನ ಹಲವೆಡೆಗಳಿಂದ ಲಕ್ಷಾಂತರ ಸಂಖ್ಯೆಯ ಭಕ್ತರು ಬಂದಿದ್ದು ಕ್ಷೇತ್ರದಲ್ಲಿರುವ ಬೆರಳೆಣಿಕೆ ಸಾರ್ವಜನಿಕ ಶೌಚಾಲಯಗಳಲ್ಲಿ ನಿತ್ಯ ಕರ್ಮಗಳನ್ನು ಮುಗಿಸಲು ಗಂಟೆಗಟ್ಟಲೆ ಕಾಯಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ಆಕ್ಷೇಪ ವ್ಯಕ್ತಪಡಿಸಿದ್ದಾರೆ.


ಉದಯವಾಹಿನಿ ಚಿತ್ರ

ಇದಕ್ಕೆ ಪೂರಕವಾಗಿ ಶೌಚಾಲಯದ ಮುಂದೆ ಮಹಿಳೆಯರು ಸಾಲುಗಟ್ಟಿ ನಿಂತಿರುವ ವಿಡಿಯೋ ಸಾಮಾಜಿಕ ಜಾಲತಾಣದಲ್ಲಿ ಹೆಚ್ಚು ಸದ್ದು ಮಾಡುತ್ತಿದ್ದು ದೇಗುಲದ ಅವ್ಯವಸ್ಥೆಯ ವಿರುದ್ಧ ಹಲವರಿಂದ ಟೀಕೆಗಳು ವ್ಯಕ್ತವಾಗಿವೆ. ಕ್ಷೇತ್ರದಲ್ಲಿರುವ ಸಮುದಾಯ ಶೌಚಾಲಯಗಳಿಗೆ ಬೀಗ ಹಾಕಲಾಗಿದ್ದು, ಕೆಲವು ಶೌಚಾಲಯಗಳನ್ನು ಮಾತ್ರ ತೆರೆಯಲಾಗಿದೆ. ಪರಿಣಾಮ ಭಕ್ತರು ಶೌಚಕ್ಕೆ ತಾಸುಗಟ್ಟಲೆ ಕಾಯಬೇಕಾಗಿದೆ. ಮಹಿಳೆಯರು ಮುಜುಗರ ಅನುಭವಿಸುತ್ತಿದ್ದಾರೆ, ಸಕ್ಕರೆ ಕಾಯಿಲೆಯಿಂದ ಬಳಲುತ್ತಿರುವ, ಪದೇಪದೇ ಮೂತ್ರ ವಿಸರ್ಜನೆ ಮಾಡಬೇಕಾದ ರೋಗಿಗಳ ಪಾಡಂತೂ ಹೇಳತೀರದು ಎಂದು ಮಹಿಳೆಯರೊಬ್ಬರು ಆಕ್ರೋಶ ಹೊರಹಾಕಿದ್ದಾರೆ.

> **ಭಕ್ತರ ದಟ್ಟಣೆ ಹೆಚ್ಚಿದ್ದಾಗ ದೇವರ ದರ್ಶನಕ್ಕೆ ಐದಾರು ತಾಸು ಸರತಿ ಸಾಲಿನಲ್ಲಿ ನಿಲ್ಲಬೇಕಾಗದ ಸಮಯದಲ್ಲಿ ಭಕ್ತರು ಸಮಸ್ಯೆ ಅನುಭವಿಸುತ್ತಾರೆ. ಸರತಿ ಸಾಲು ಬಿಡುವ ಹಾಗಿಲ್ಲ, ಶೌಚದ ಬಾಧೆ ತಡೆಯಲೂ ಸಾಧ್ಯವಾಗದೆ ಬಳಲುತ್ತಾರೆ. ಜಾತ್ರೆ ಉತ್ಸವದಂತಹ ವಿಶೇಷ ಸಂದರ್ಭಗಳಲ್ಲಿ ದೇಗುಲಕ್ಕೆ ಸಮೀಪದಲ್ಲಿ ಮೊಬೈಲ್ ಶೌಚಾಲಯಗಳನ್ನು ಅಳವಡಿಸಿದರೆ ಹೆಚ್ಚು ಅನುಕೂಲವಾಗುತ್ತದೆ.**
> – ಅನಸೂಯಮ್ಮ

**ಬೆರಳೆಣಿಕೆ ಸಮುದಾಯ ಶೌಚಾಲಯ:** ಮಲೆ ಮಹದೇಶ್ವರ ದೇವಸ್ಥಾನದ ರಾಜಗೋಪುರದ ಮುಂಭಾಗ, ಅಂತರಗಂಗೆ ಬಳಿ, ಬಸ್ ನಿಲ್ದಾಣ, ದೇವಸ್ಥಾನಕ್ಕೆ ತೆರಳುವ ಮಾರ್ಗ ಸೇರಿದಂತೆ ಐದಾರು ಸಮುದಾಯ ಶೌಚಾಲಯ ಮಾತ್ರ ಇವೆ. ದೀಪಾವಳಿ, ಯುಗಾದಿ, ಶಿವರಾತ್ರಿ ಜಾತ್ರಾ ಮಹೋತ್ಸವ ಹಾಗೂ ಅಮಾವಾಸ್ಯೆ ಪೂಜೆಯ ಸಂದರ್ಭ ಲಕ್ಷಕ್ಕೂ ಹೆಚ್ಚು ಭಕ್ತರು ಕ್ಷೇತ್ರಕ್ಕೆ ಭೇಟಿ ನೀಡಿದಾಗ ಶೌಚಾಲಯಗಳ ಸಮಸ್ಯೆ ಗಂಭೀರವಾಗುತ್ತದೆ.

ಮೂರು ದಿನಗಳಲ್ಲಿ ದುರಸ್ತಿ’ ಮಲೆ ಮಹದೇಶ್ವರ ಬೆಟ್ಟದಲ್ಲಿ ಶೌಚಾಲಯಗಳ ಕೊರತೆಯ ಬಗ್ಗೆ ಸಾಮಾಜಿಕ ಜಾಲತಾಣದಲ್ಲಿ ಆರೋಪಗಳು ಕೇಳಿಬಂದಿರುವ ಬಗ್ಗೆ ಪ್ರತಿಕ್ರಿಯೆ ನೀಡಿರುವ ಮಲೆ ಮಹದೇಶ್ವರ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ಎ.ಇ.ರಘು ಕ್ಷೇತ್ರದಲ್ಲಿ ಬಹಳಷ್ಟು ಶೌಚಾಲಯಗಳು ಹಾಳಾಗಿದ್ದರಿಂದ ದುರಸ್ತಿ ಕಾರ್ಯ ನಡೆಸಲಾಗುತ್ತಿದೆ. ಹಾಗಾಗಿ ಭಕ್ತರಿಗೆ ಅನಾನುಕೂಲವಾಗುತ್ತಿದ್ದು ಮೂರ್ನಾಲ್ಕು ದಿನಗಳಲ್ಲಿ ಶೌಚಾಲಯಗಳು ಭಕ್ತರ ಹಬಳಕೆಗೆ ಸಿಗಲಿವೆ ಅಲ್ಲಿಯವರೆಗೂ ಸಹಕರಿಸಬೇಕು ಎಂದು ಮನವಿ ಮಾಡಿದ್ದಾರೆ.


ಉದಯವಾಹಿನಿ ಚಿತ್ರ

# ಅಕ್ರಮ ಗಣಿಗಾರಿಕೆ: 15 ಟನ್ ಮರಳು ವಶ

• **ಉದಯವಾಹಿನಿ, ಮದ್ದೂರು**

ತಾಲ್ಲೂಕಿನ ಅಜ್ಜಹಳ್ಳಿ ಗ್ರಾಮದಲ್ಲಿ ಬಳಿ ಶಿಂಷಾ ನದಿ ಪಾತ್ರದಲ್ಲಿ ಅಕ್ರಮವಾಗಿ ಮರಳು ಗಣಿಗಾರಿಕೆ ಮಾಡುತ್ತಿದ್ದ ಅಡ್ಡೆಯ ಮೇಲೆ ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಅಧಿಕಾರಿಗಳು ದಾಳಿ ನಡೆಸಿ, 15 ಟನ್ ಮರಳು, ಕೊಪ್ಪರಿಗೆಗಳನ್ನು ವಶಕ್ಕೆ ಪಡೆದಿದ್ದಾರೆ.

ಈಗಾಗಲೇ ಇದೇ ವ್ಯಾಪ್ತಿಯಲ್ಲಿ ಇತ್ತೀಚೆಗೆ ಅಕ್ರಮ ಮರಳುಗಾರಿಕೆ ಸಂಬಂಧ 2 ಪ್ರಕರಣಗಳನ್ನು ದಾಖಲಿಸಿದ್ದರೂ ಅಕ್ರಮ ಮರಳು ಗಣಿಗಾರಿಕೆ ದಂಧೆ ಮುಂದುವರಿಯುತ್ತಿದ್ದು, ಅಕ್ರಮ ಮರಳು ಗಣಿಗಾರಿಕೆ ನಡೆಸುತ್ತಿರುವವರ ವಿರುದ್ಧ ಮದ್ದೂರು ನ್ಯಾಯಾಲಯದಲ್ಲಿ ದೂರು ದಾಖಲಿಸುತ್ತೇವೆ ಎಂದು ಗಣಿ ಮತ್ತು ಭೂವಿಜ್ಞಾನ ಇಲಾಖೆಯ ಅಧಿಕಾರಿ ಮಹೇಶ್ ತಿಳಿಸಿದ್ದಾರೆ. ಅಷ್ಟೇ ಅಲ್ಲದೇ ತಾಲ್ಲೂಕಿನ ಕೆ. ಕೋಡಿಹಳ್ಳಿ, ನಗರಕೆರೆ ಸೇರಿದಂತೆ ಹಲವೆಡೆಗಳಲ್ಲಿಯೂ ಅಕ್ರಮವಾಗಿ ಮರಳು ಗಣಿಗಾರಿಕೆ ನಡೆಯುತ್ತಿದ್ದು ಸ್ಥಳೀಯ ಪೊಲೀಸರು ಈ ಬಗ್ಗೆ ನೋಡಿಯೂ ಮೌನವಹಿಸಿದ್ದಾರೆ ಎಂದು ಸಾರ್ವಜನಿಕರು ದೂರಿದ್ದಾರೆ.

ಅಂತರಾಳದಿಂದ...
EDITORIAL

# ದೆಹಲಿ: ಪಟಾಕಿಗೆ ಹಸಿರು ನಿಶಾನೆ; ಪರಿಸರ–ಆರೋಗ್ಯ ಕಾಳಜಿ ನಿರ್ಲಕ್ಷ್ಯ



ದೆಹಲಿ ಮತ್ತು ರಾಷ್ಟ್ರ ರಾಜಧಾನಿ ಪ್ರದೇಶಗಳಲ್ಲಿ (ಎನ್‌ಸಿಆರ್) ಪಟಾಕಿಗೆ ಹೇರಿದ್ದ ಸಂಪೂರ್ಣ ನಿರ್ಬಂಧವನ್ನು ತೆರವುಗೊಳಿಸಿ, ಅಕ್ಟೋಬರ್ 18ರಿಂದ 20ರವರೆಗೆ ಹಸಿರು ಪಟಾಕಿಗಳ ತಯಾರಿಕೆ, ಮಾರಾಟ ಮತ್ತು ಬಳಕೆಗೆ ಸುಪ್ರೀಂ ಕೋರ್ಟ್ ಅವಕಾಶ ಕಲ್ಪಿಸಿರುವುದು ದುರದೃಷ್ಟಕರ. ಪಟಾಕಿಗಳ ಮಾರಾಟ ಮತ್ತು ಬಳಕೆಗೆ ಆರು ವರ್ಷಗಳಿಂದ ಜಾರಿಯಲ್ಲಿದ್ದ ನಿರ್ಬಂಧವನ್ನು ಸಡಿಲಿಸಿ, ಹಸಿರು ಪಟಾಕಿ ಬಳಕೆಗೆ ಅನುಮತಿ ನೀಡುವಂತೆ ಕೇಂದ್ರ ಸರ್ಕಾರ ಮತ್ತು ದೆಹಲಿ ಸರ್ಕಾರಗಳು ಮಾಡಿಕೊಂಡಿದ್ದ ಮನವಿಯನ್ನು ಸುಪ್ರೀಂ ಕೋರ್ಟ್ ಪುರಸ್ಕರಿಸಿದೆ.


ಇದರಿಂದಾಗಿ, ಮುಂದಿನ ವಾರದ ದೀಪಾವಳಿ ಹಬ್ಬದ ಸಂದರ್ಭದಲ್ಲಿ ಪಟಾಕಿಗಳ ಮಾರಾಟ ಮತ್ತು ಬಳಕೆಗೆ ಷರತ್ತುಬದ್ಧ ಅವಕಾಶ ದೊರೆತಿದೆ. ಪಟಾಕಿ ಉದ್ಯಮದಲ್ಲಿ ತೊಡಗಿಕೊಂಡಿರುವವರ ಹಿತಾಸಕ್ತಿ ಪರಿಸರ ಕಾಳಜಿಗೆ ಸಂಬಂಧಿಸಿದಂತೆ, ವಿರೋಧಾಭಾಸದ ಹಿತಾಸಕ್ತಿಗಳ ಸಂದರ್ಭದಲ್ಲಿ ಸಮತೋಲನದ ದಾರಿಯೊಂದನ್ನು ಕಂಡುಕೊಳ್ಳುವ ಅಗತ್ಯವನ್ನು ನ್ಯಾಯಾಲಯ ಪ್ರಸ್ತಾಪಿಸಿದೆ.

**ರಾಷ್ಟ್ರ ರಾಜಧಾನಿ ಪ್ರದೇಶದಲ್ಲಿ ವಾಯುಮಾಲಿನ್ಯ ಉಲ್ಬಣಗೊಳ್ಳುತ್ತದೆ ಹಾಗೂ ಜನರ ಆರೋಗ್ಯದ ಮೇಲೆ ಗಂಭೀರ ಪರಿಣಾಮ ಉಂಟಾಗುತ್ತದೆ ಎನ್ನುವ ಕಾರಣಕ್ಕಾಗಿ ಪಟಾಕಿ ತಯಾರಿಕೆ-ಬಳಕೆಯ ಮೇಲೆ ಸಂಪೂರ್ಣ ನಿರ್ಬಂಧ ವಿಧಿಸಲಾಗಿತ್ತು. ಈ ನಿರ್ಬಂಧವನ್ನು ಸಡಿಲಿಸಿರುವ ಸುಪ್ರೀಂ ಕೋರ್ಟ್, ಇದೊಂದು ತಾತ್ಕಾಲಿಕ ಕ್ರಮವಾಗಿದ್ದು, ಪರಿಸರ ಕಾಳಜಿಗೆ ಸಂಬಂಧಿಸಿದಂತೆ ರಾಜಿ ಮಾಡಿಕೊಳ್ಳದೆ ಪಟಾಕಿಗಳ ಬಳಕೆಗೆ ಅವಕಾಶ ಕಲ್ಪಿಸಬೇಕಾಗಿದೆ ಎಂದು ಹೇಳಿದೆ.**

ಪರಿಸರ ಮಾಲಿನ್ಯದ ದೃಷ್ಟಿಯಿಂದ ಸ್ವೀಕಾರಾರ್ಹವಲ್ಲದ ಹಸಿರು ಪಟಾಕಿಗಳನ್ನು ಪರಿಚಯಿಸುವ ಸರ್ಕಾರದ ಚಿಂತನೆ ಕಾನೂನಿನ ಕಣ್ಣಿಗೆ ಮಣ್ಣು ಎರಚುವಂತಹದ್ದು ಹಾಗೂ ರಾಜಕೀಯ ಉದ್ದೇಶಗಳನ್ನು ಹೊಂದಿರುವಂತಹದ್ದಾಗಿದೆ. ಹಸಿರು ಪಟಾಕಿಗಳು ತಮ್ಮ ಹೆಸರಿಗೆ ತಕ್ಕಂತೆ ಪರಿಸರಕ್ಕೆ ಪೂರಕ ಅಥವಾ ಸುರಕ್ಷಿತ ಅಲ್ಲ. ಹಸಿರು ಪಟಾಕಿ ಎನ್ನುವ ಪರಿಕಲ್ಪನೆಯೇ ವಿರೋಧಾಭಾಸದಿಂದ ಕೂಡಿದೆ. ಸಾಂಪ್ರದಾಯಿಕ ಪಟಾಕಿಗಳಿಂತಲೂ ಶೇ 30ರಷ್ಟು ಕಡಿಮೆ ಮಾಲಿನ್ಯವನ್ನು ಉಂಟುಮಾಡುತ್ತವೆ ಹಾಗೂ ಭಾರಲೋಹಗಳನ್ನು ಕಡಿಮೆ ಪ್ರಮಾಣದಲ್ಲಿ ಹೊಂದಿವೆ ಎನ್ನುವುದು ನಿಜವಾದರೂ, ದೆಹಲಿಯ ಪರಿಸರ ಮತ್ತು ನಾಗರಿಕರ ಆರೋಗ್ಯದ ಮೇಲೆ ಹಸಿರು ಪಟಾಕಿಗಳು ಉಂಟು ಮಾಡುವ ಪರಿಣಾಮ ಗಂಭೀರವಾದುದೇ ಆಗಿದೆ; ಮಕ್ಕಳು, ಹಿರಿಯ ನಾಗರಿಕರು ಹಾಗೂ ಆರೋಗ್ಯದ ಸಮಸ್ಯೆಗಳನ್ನು ಹೊಂದಿರುವವರು ಹೆಚ್ಚಿನ ತೊಂದರೆ ಅನುಭವಿಸಬೇಕಾಗುತ್ತದೆ. ಹಸಿರು ಪಟಾಕಿಗಳ ಬಳಕೆಗೆ ನ್ಯಾಯಾಲಯ 2018ರಲ್ಲಿ ಅವಕಾಶ ಕಲ್ಪಿಸಿತ್ತಾದರೂ, ಹಸಿರು ಪಟಾಕಿ ಮತ್ತು ಸಾಂಪ್ರದಾಯಿಕ ಪಟಾಕಿಗಳ ವಿಂಗಡಣೆ ಕಷ್ಟಕರ ಎನ್ನುವ ಕಾರಣ ನೀಡಿ, ಎಲ್ಲಾ ಬಗೆಯ ಪಟಾಕಿ ಮಾರಾಟ ಮತ್ತು ಬಳಕೆಯನ್ನು ದೆಹಲಿ ಸರ್ಕಾರ 2020ರಲ್ಲಿ ಸಂಪೂರ್ಣವಾಗಿ ನಿಷೇಧಿಸಿತ್ತು.

ನಾಗರಿಕರ ಆರೋಗ್ಯ ಹಾಗೂ ಪರಿಸರ ಕಾಳಜಿಯನ್ನು ಗಮನದಲ್ಲಿರಿಸಿಕೊಂಡು ರಾಷ್ಟ್ರ ರಾಜಧಾನಿ ವ್ಯಾಪ್ತಿಯಲ್ಲಿ ಯಾವುದೇ ಬಗೆಯ ಪಟಾಕಿಯ ತಯಾರಿಕೆ, ಮಾರಾಟ, ಬಳಕೆಯನ್ನು ಸಂಪೂರ್ಣವಾಗಿ ನಿಷೇಧಿಸುವ ಕ್ರಮವನ್ನು ಸರ್ಕಾರಗಳು ಕೈಗೊಳ್ಳುವುದು ಅನಿವಾರ್ಯ: ಇದಕ್ಕೆ ಬದಲಾಗಿ, ತಮ್ಮ ರಾಜಕೀಯ ಹಿತಾಸಕ್ತಿಗಾಗಿ ಅನುಮಾನಕ್ಕೆ ಆಸ್ಪದ ಕಲ್ಪಿಸುವ ಕ್ರಮಗಳನ್ನು ಕೈಗೊಳ್ಳುತ್ತಿವೆ. ಹಸಿರು ಪಟಾಕಿ ಬಳಕೆಗೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್ ಗೊತ್ತುಪಡಿಸಿರುವ ಹಾಗೂ ಸರ್ಕಾರ ಜಾರಿಗೊಳಿಸುವುದಾಗಿ ಒಪ್ಪಿಕೊಂಡಿರುವ ಷರತ್ತುಗಳು, ಸುರಕ್ಷತಾ ಕ್ರಮಗಳು ಹಾಗೂ ಮುನ್ನೆಚ್ಚರಿಕೆಗಳು ಉಲ್ಲಂಘನೆಯಾಗುವುದರಲ್ಲಿ ಯಾವುದೇ ಅನುಮಾನವಿಲ್ಲ. ಅಂತಿಮವಾಗಿ, ಕಾನೂನಿಗೆ ಸಂಬಂಧಿಸಿದ ಸಂಗತಿಗಳು ಕಾಗದದ ಮೇಲಷ್ಟೇ ಪಾಲನೆಯಾಗುತ್ತವೆ. ಸಂಪೂರ್ಣ ನಿಷೇಧವಾಗಿದ್ದಾಗಲೂ, ಅದರ ಅನುಷ್ಠಾನ ದುರ್ಬಲವಾಗಿತ್ತು ಎನ್ನುವುದನ್ನು ನ್ಯಾಯಾಲಯವೂ ಗಮನಿಸಿರುವಾಗ, ಅಂಶಿಕ ನಿರ್ಬಂಧಗಳು ಪಾಲನೆಯಾಗುತ್ತವೆ ಎಂದು ಹೇಳಲಾಗದು. ಸಾರ್ವಜನಿಕ ಹಿತಾಸಕ್ತಿಗೆ ಸಂಬಂಧಿಸಿದ ವಿಷಯಗಳಿಗೆ ಸಂಬಂಧಿಸಿದಂತೆ ಸಮತೋಲನದ ಧೋರಣೆಯ ಅಳವಡಿಕೆ ಎನ್ನುವ ಚಿಂತನೆಯೂ ಸಮಸ್ಯಾತ್ಮಕವಾದುದು. ಪಟಾಕಿಗಳನ್ನು ಸಂಪೂರ್ಣವಾಗಿ ನಿಷೇಧಿಸುವುದು ಹಾಗೂ ಆ ನಿರ್ಬಂಧವನ್ನು ಪರಿಣಾಮಕಾರಿಯಾಗಿ, ಪ್ರಾಮಾಣಿಕವಾಗಿ ಜಾರಿಗೊಳಿಸುವುದರಲ್ಲಷ್ಟೇ ಸಾರ್ವಜನಿಕ ಹಿತ ಅಡಗಿದೆ.

# ರಾಮಾಯಣ



## ಮಾರೀಚನ ಹಿತೋಪದೇಶ ಮುಂದುವರಿದದ್ದು

• ಹಿಂದಿನ ಸಂಚಿಕೆಯಿಂದ

### 120 ನೆಯ ಅಧ್ಯಾಯ

ಮಾರೀಚನು ಪುನಃ ಹೇಳಿದನು: ರಾವಣೇಶ್ವರ, ಆ ಬಳಿಕ ನಡೆದ ವೃತ್ತಾಂತವನ್ನು ಕೇಳು: ಒಂದುಸಲ ನಾನು ಕೆಲವು ರಾಕ್ಷಸರನ್ನು ಕೂಡಿಕೊಂಡು ಮೃಗರೂಪವನ್ನು ತಾಳಿ ದಂಡಕಾರಣ್ಯಕ್ಕೆ ಹೋದೆನು. ಭಯಂಕರವಾದ ಕೋರೆದಾಡೆಗಳುಳ್ಳ ದೀಪ್ತಜಿಹ್ವನೂ ಮಹಾಬಲವಂತನಾದ ತೀಕ್ಷ್ಯದಂಷ್ಟ್ರನೂ ನಾನೂ ಮಾಂಸಭಕ್ಷಣ ಮಾಡುವ ಮೃಗರೂಪದಿಂದ ದಂಡಕಾರಣ್ಯದಲ್ಲಿಯೂ ಪುಣ್ಯತೀರ್ಥಗಳಲ್ಲಿಯೂ ಗ್ರಾಮಾಂತರಗಳಲ್ಲಿಯೂ ಸಂಚರಿಸಿಕೊಂಡು ವೃಕ್ಷಮೂಲಗಳಲ್ಲಿಯೂ ಅಗ್ನಿ ಹೋತ್ರಗಳಲ್ಲಿಯೂ ಇದ್ದ ತಪಸ್ವಿಗಳನ್ನು ಬೆದರಿಸುತ್ತ ಧರ್ಮಚಾರಿಗಳಾದ ಆ ತಪ್ಪುಗಳ ರಕ್ತಮಾಂಸಗಳನ್ನು ಭಕ್ಷಿಸುತ್ತಿದ್ದೆವು. ದಂಡಕಾರಣ್ಯದಲ್ಲಿದ್ದ ಋಷಿಗಳನ್ನು ಬೆದರಿಸಿ ಓಡಿಸುತ್ತ ಅವರ ರಕ್ತ ಮಾಂಸಾಹಾರಗಳಿಂದ ಸೊಕ್ಕಿ ಅವರು ಮಾಡುತ್ತಿದ್ದ ಸಮಸ್ತ ಕರ್ಮಗಳನ್ನೂ ಕೆಡಿಸುತ್ತಿದ್ದೆವು. ಆ ಸಮಯದಲ್ಲಿ ದಂಡಕಾರಣ್ಯದಲ್ಲಿ ತಪಸ್ವಿಯಾಗಿದ್ದ ಶ್ರೀರಾಮನನ್ನೂ ಆತನ ಪತ್ನಿಯಾದ ಸೀತಾದೇವಿಯನ್ನೂ ಆತನ ತಮ್ಮನೂ ಮಹಾರಥಿಕನೂ ಆದ ಲಕ್ಷ್ಮಣನನ್ನೂ ಕಂಡು ಮೂವರೂ ಅಟ್ಟಿಕೊಂಡು ಹೋದೆವು.

ಶ್ರೀರಾಮನು ನಮ್ಮನ್ನು ಕಂಡು ಮೂರು ಶರಗಳನ್ನು ಎಸೆದನು. ನಾನು ಮೊದಲೇ ಆತನಿಂದ ಕಂಗೆಟ್ಟಿದ್ದವನಾದ ಕಾರಣ ಭಯಪಟ್ಟು ಓಡಿಬಂದೆನು. ಅವರಿಬ್ಬರೂ ಬಾಣಗಳಿಂದ ಗಾಯಪಡೆದು ಯಮಲೋಕವನ್ನೈದಿದರು. ದೈವಾಧೀನದಿಂದ ಜೀವಸಹಿತವಾಗಿ ಉಳಿದ ನಾನು ಈ ಆಶ್ರಮದಲ್ಲಿ ಸಂನ್ಯಾಸವನ್ನು ಕೈಕೊಂಡು ತಪಸ್ವಿಯಾಗಿದ್ದೇನೆ. ಈಗಲೂ ಮರಗಳಲ್ಲಿ ನಾರುಬಟ್ಟೆಗಳನ್ನು ಕಟ್ಟಿ ಕೃಷ್ಣಾಜಿನವನ್ನು ಹೊದ್ದುಕೊಂಡು ಬಿಲ್ಲುಬಾಣಗಳನ್ನು ಹಿಡಿದುಕೊಂಡಿರುವ ಶ್ರೀರಾಮನನ್ನು ಮೃತ್ಯುಪಾಶವನ್ನು ಕೈಯಲ್ಲಿ ಹಿಡಿದಿರುವ ಪ್ರಳಯಕಾಲದ ಯಮನಂತೆ ಕಾಣುತ್ತಿದ್ದೇನೆ! ರಾವಣ, ನನ್ನ ಕಣ್ಣಿಗೆ ಎಲ್ಲಿ ನೋಡಿದರೂ ಸಾವಿರಮಂದಿ ಶ್ರೀರಾಮರು ಕಾಣುತ್ತಿದ್ದಾರೆ. ಈ ಅರಣ್ಯವೆಲ್ಲವೂ ರಾಮರೂಪವಾಗಿಯೇ ತೋರುತ್ತಿದೆ. ಸ್ವಪ್ನದಲ್ಲಿಯೂ ಶ್ರೀರಾಮನನ್ನು ಕಂಡು ಬೆದರುತ್ತ ಎದ್ದು ಕುಳಿತುಕೊಂಡು ಮೂರ್ಛಾಗತನಾಗುತ್ತಿದ್ದೇನೆ. ರತ್ನ ರಥ ಎಂಬ ರಕಾರವನ್ನು ಮೊದಲಾಗುಳ್ಳ ನಾಮೋಚ್ಚಾರಣೆ ಗಳನ್ನು ಕೇಳಿದರೂ ಆ ಶಬ್ದಗಳು ನನಗೆ ಭಯವನ್ನುಂಟುಮಾಡುತ್ತಿವೆ! ಈ ರೀತಿಯಲ್ಲಿ ನಾನು ಶ್ರೀರಾಮನ ಪ್ರಭಾವವನ್ನು ಬಲ್ಲೆನು. ಅಂಥ ರಾಮನೊಡನೆ ವಿರೋಧಮಾಡಿಕೊಳ್ಳುವುದು ನಿನಗುಚಿತವಲ್ಲ. ಆತನು ರಣರಂಗದಲ್ಲಿ ಬಲಿಚಕ್ರವರ್ತಿಯನ್ನೂ ನಮುಚಿ ರಾಕ್ಷಸನನ್ನೂ ಸುಲಭವಾಗಿ ಕೊಲ್ಲಬಲ್ಲವನು. ಎಲೈ ರಾವಣನೆ. ನೀನು ಶ್ರೀರಾಮನ ಸಂಗಡ ಯುದ್ಧವನ್ನು ಮಾಡುವುದಕ್ಕೆ ಸಮರ್ಥನಲ್ಲ ಸೀತಾದೇವಿಯನ್ನ ಪಹರಿಸಿಕೊಂಡು ಬರುವುದೆಂಬ ಕಾರ್ಯವನ್ನು ನಿಲ್ಲಿಸು. ನೀನು ನನ್ನ ಮುಖವನ್ನು ಕಾಣಬೇಕಾದರೆ ನನ್ನೊಡನೆ ಆತನ ಪ್ರಸಂಗವನ್ನು ಹೇಳಬೇಡ.

**ಮುಂದುವರಿಯುವುದು...**

# ಡ್ರೈ ಸ್ಕಿನ್ ಇರುವವರಿಗೆ ಬೆಸ್ಟ್ ಹಾಲಿನ ಕೆನೆಯ ಫೇಸ್‌ಪ್ಯಾಕ್

ಹಾಲಿನ ಕೆನೆ, ಅರಿಶಿನವನ್ನು ಬಹಳ ಹಿಂದಿನಿಂದಲೂ ಸೌಂದರ್ಯವನ್ನು ಹೆಚ್ಚಿಸಲು ಬಳಸಲಾಗುತ್ತಿತ್ತು.

ಈ ಫೇಸ್‌ಪ್ಯಾಕ್ ಅನ್ನು ತಯಾರಿಸುವುದು ಹೇಗೆ ಎನ್ನುವುದನ್ನು ತಿಳಿಯೋಣ. ಡ್ರೈ ಸ್ಕಿನ್ ಇರುವವರು ತಮ್ಮ ಚರ್ಮವನ್ನು ಹೈಡ್ರೇಟ್ ಆಗಿರಿಸಲು, ಚರ್ಮವನ್ನು ಕೋಮಲವಾಗಿರಿಸಲು ಅಡುಗೆ ಮನೆಯಲ್ಲಿರುವ ಕೆಲವೊಂದು ಸಾಮಾಗ್ರಿಗಳು ಸಹಕಾರಿಯಾಗಬಲ್ಲದು. ಅಡುಗೆ ಮನೆಯು ನೈಸರ್ಗಿಕ ಚರ್ಮದ ಆರೈಕೆ ಪದಾರ್ಥಗಳಿಂದ ತುಂಬಿದೆ. ಅಂತಹ ಪದಾರ್ಥಗಳಲ್ಲಿ ಹಾಲಿನ ಕೆನೆ ಮತ್ತು ಅರಿಶಿನ ಕೂಡಾ ಒಂದು. ಇವು ಹಲವಾರು ತಲೆಮಾರುಗಳಿಂದ ಭಾರತೀಯ ಸೌಂದರ್ಯದ ಭಾಗವಾಗಿವೆ. ಹಾಲಿನ ಕೆನೆಯು ಕಠಿಣವಾದ ಸ್ಕಬ್ಬರ್‌ಗಳು ಮತ್ತು ಕ್ಲೀನರ್‌ಗಳಿಲ್ಲದೆ ನಿಮ್ಮ ಚರ್ಮವನ್ನು ಹೈಡ್ರೇಟ್ ಮಾಡುತ್ತದೆ



ಮತ್ತು ಎಫ್ಫೋಲಿಯೇಟ್ ಮಾಡುತ್ತದೆ. ಅರಿಶಿನವು ಆಂಟಿಫಂಗಲ್ ಮತ್ತು ಉರಿಯೂತ ನಿವಾರಕವಾಗಿದೆ.

**ಒಣ ಚರ್ಮಕ್ಕಾಗಿ DIY ಹಾಲಿನ ಕೆನೆ, ಅರಿಶಿನ ಫೇಸ್ ಮಾಸ್ಕ್:** ಈ ಮಳೆಗಾಲದಲ್ಲಿ ಹೊಳೆಯುವ ಚರ್ಮವನ್ನು ಪಡೆಯುವ ಬಯಕೆ ನಿಮ್ಮದಾಗಿದ್ದರೆ ಬಹಳ ಸರಳವಾಗಿ ಮನೆಯಲ್ಲೇ ಈ ಹಾಲಿನ ಕೆನೆ ಹಾಗೂ ಅರಿಶಿನದಿಂದ ಫೇಸ್‌ಮಾಸ್ಕ್ ತಯಾರಿಸಿ ಹಚ್ಚಿಕೊಳ್ಳಿ.

**ತಯಾರಿಸುವ ವಿಧಾನ:** ಒಂದು ಶುದ್ಧ ಬಟ್ಟಲಿನಲ್ಲಿ, ತಾಜಾ ಹಾಲಿನ ಕೆನೆ ತೆಗೆದುಕೊಳ್ಳಿ. ಅರಿಶಿನ ಪುಡಿಯನ್ನು ಸೇರಿಸಿ. ಬಳಸುತ್ತಿದ್ದರೆ, ಕಡಲೆ ಹಿಟ್ಟು ಮತ್ತು ಕೆಲವು ಹನಿ ರೋಸ್ ವಾಟರ್ ಸೇರಿಸಿ. ನೀವು ನಯವಾದ, ಸ್ಥಿರವಾದ ಪೇಸ್ಟ್ ಅನ್ನು ಪಡೆಯುವವರೆಗೆ ಎಲ್ಲಾ ಪದಾರ್ಥಗಳನ್ನು ಚೆನ್ನಾಗಿ ಬೆರೆಸಿ. ಮಾಸ್ಕ್ ಅನ್ನು ಹಚ್ಚುವ ಮೊದಲು, ಸೌಮ್ಯವಾದ ಕ್ಲೆನ್ಸರ್‌ನಿಂದ ನಿಮ್ಮ ಮುಖವನ್ನು ನಿಧಾನವಾಗಿ ಸ್ವಚ್ಛಗೊಳಿಸಿ. ಮುಖವನ್ನು ಒರೆಸಿ. ಸ್ವಚ್ಛವಾದ ಬೆರಳುಗಳು ಅಥವಾ ಮೃದುವಾದ ಬ್ರಷ್ ಬಳಸಿ, ನಿಮ್ಮ ಮುಖ ಮತ್ತು ಕುತ್ತಿಗೆಯಾದ್ಯಂತ ಪೇಸ್ಟ್ ಅನ್ನು ಹಚ್ಚಿ. ನಿಮ್ಮ ಕಣ್ಣುಗಳು ಮತ್ತು ತುಟಿಗಳ ಸುತ್ತಲಿನ ಸೂಕ್ಷ್ಮ ಚರ್ಮವನ್ನು ತಪ್ಪಿಸಲು ಜಾಗರೂಕರಾಗಿರಿ.

### ಬೇಕಾಗುವ ಪದಾರ್ಥಗಳು

- ಒಂದು ಚಮಚ ತಾಜಾ ಹಾಲಿನ ಕೆನೆ
- ಕಾಲು ಟೀಚಮಚ ಅರಿಶಿನ ಪುಡಿ
- ಅರ್ಧ ಟೀಚಮಚ ಕಡಲೆ ಹಿಟ್ಟು
- ಕೆಲವು ಹನಿ ರೋಸ್ ವಾಟರ್

ಮಾಸ್ಕ್ ಅನ್ನು 15 ರಿಂದ 20 ನಿಮಿಷಗಳ ಕಾಲ ಬಿಡಿ. ಪದಾರ್ಥಗಳು ನಿಮ್ಮ ಚರ್ಮವನ್ನು ಆಳವಾಗಿ ಪೋಷಿಸಲು ಬಿಡಿ.

**ಮುಖ ತೊಳೆಯುವ ಮೊದಲು ಮಸಾಜ್ ಮಾಡಿ**

ನೀವು ಮುಖವನ್ನು ತೊಳೆಯುವಾಗ ವೃತ್ತಾಕಾರದ ಚಲನೆಗಳಲ್ಲಿ ನಿಧಾನವಾಗಿ ಮಸಾಜ್ ಮಾಡಿ. ಈ ಲಘು ಮಸಾಜ್ ಚರ್ಮವನ್ನು ನಿಧಾನವಾಗಿ ಎಫ್ಫೋಲಿಯೇಟ್ ಮಾಡಲು ಸಹಾಯ ಮಾಡುತ್ತದೆ. ಉಗುರು ಬೆಚ್ಚಗಿನ ನೀರಿನಿಂದ ಚೆನ್ನಾಗಿ ತೊಳೆಯಿರಿ. ಚರ್ಮವನ್ನು ಹೈಡ್ರೇಟ್ ಆಗಿರಿಸಲು ಮಾಯಿಶ್ಚರೈಸರ್ ಅನ್ನು ಹಚ್ಚಿರಿ. ಉತ್ತಮ ಬದಲಾವಣೆಗಳನ್ನು ನೋಡಲು ವಾರಕ್ಕೆ ಒಂದು ಅಥವಾ ಎರಡು ಬಾರಿ ಈ DIY ಹಾಲಿನ ಕೆನೆ ಮತ್ತು ಅರಿಶಿನ ಫೇಸ್ ಮಾಸ್ಕ್ ಅನ್ನು ಬಳಸಿ.



# ಮೂಳೆಗಳು ಗಟ್ಟಿ ಮುಟ್ಟಾಗಿರಬೇಕಾದ್ರೆ ಮಖಾನ ಬೀಜಗಳ ಲಾಡು ತಿನ್ನುವ ಅಭ್ಯಾಸ ಮಾಡಿಕೊಳ್ಳಿ!

ಮಖಾನ ಅಥವಾ ತಾವರೆ ಹೂವಿನ ಬೀಜಗಳ ಬಗ್ಗೆ ನೀವು ಕೇಳಿರಬಹುದು. ನಿಮ್ಮ ಮೂಳೆಗಳಲ್ಲಿ ಕ್ಯಾಲ್ಸಿಯಂ ಹೆಚ್ಚಿಸುವುದರಿಂದ ಹಿಡಿದು ನಿಮ್ಮ ಜೀರ್ಣ ಶಕ್ತಿಯನ್ನು ಕೂಡ ಇದು ದುಪ್ಪಟ್ಟುಗೊಳಿಸುತ್ತದೆ. ಇದನ್ನು ತಯಾರಿಸುವ ವಿಧಾನವನ್ನು ತಿಳಿಯೋಣ ಬನ್ನಿ. ತಾವರೆ ಹೂವು ನಿಮಗೆಲ್ಲ ಗೊತ್ತಿರುವ ಹಾಗೆ ತನ್ನ ಅಮೋಘ ಅಂದದಿಂದ ಎಲ್ಲರನ್ನೂ ಕೈ ಬೀಸಿ ಕರೆಯುತ್ತದೆ. ಬೆಳೆಯುವುದು ಕೆಸರಿನಲ್ಲಾದರೂ ದೇವರ ಮುಡಿಗೇರುವಷ್ಟು ಪಾವಿತ್ರ್ಯತೆ ಹೊಂದಿರುವ ಹೂವು. ಕೇವಲ ಪೂಜೆಗೆ ಮಾತ್ರವಲ್ಲ, ಜನರ ಆರೋಗ್ಯಕ್ಕೂ ಇವುಗಳಿಂದ ಲಾಭ ಉಂಟು. ಅಂದರೆ ಮಖಾನ ಎಂದೇ ಪ್ರಸಿದ್ಧವಾಗಿರುವ ಇವುಗಳ ಬೀಜಗಳು ಜನರ ಆಹಾರ ಪದ್ಧತಿಯಲ್ಲಿದ್ದರೆ ಅವುಗಳಿಂದ ಸಿಗುವ ಕ್ಯಾಲ್ಸಿಯಂ, ಪ್ರೋಟೀನ್, ನಾರು ಮತ್ತು ಇನ್ನಿತರ ಪೌಷ್ಟಿಕಾಂಶಗಳು ಕೇವಲ ದೇಹದ ಮೂಳೆಗಳನ್ನು ಬಲಪಡಿಸುವುದು ಮಾತ್ರವಲ್ಲದೆ ಜೀರ್ಣಶಕ್ತಿ ಸೇರಿದಂತೆ ಇನ್ನೂ ಹಲವಾರು ಆರೋಗ್ಯ ಪ್ರಯೋಜನಗಳನ್ನು ನೀಡುತ್ತವೆ ಎಂದು ಹೇಳುತ್ತಾರೆ. ದುರ್ಬಲ ಮೂಳೆ ಇರುವವರು ಇವುಗಳ ಸೇವನೆಯನ್ನು ಅಭ್ಯಾಸ ಮಾಡಿ ಕೊಳ್ಳಬಹುದು. ಬಾಯಿ ರುಚಿಗಾಗಿ ತಿನ್ನುವ ಮಖಾನ ಬೀಜಗಳು ತಮ್ಮ ಆರೋಗ್ಯ ಪ್ರಯೋಜನಗಳಿಗಾಗಿಯೇ ಪ್ರಸಿದ್ಧಿ ಪಡೆದಿವೆ.

**ಅನಾನಸ್ ಹಣ್ಣು ಸೇವನೆ ಮಾಡಿ :** ಅನಾನಸ್‌ನಲ್ಲಿ ವಿಟಮಿನ್ ಸಿ ಕಂಡುಬರುತ್ತದೆ, ಇದು ರೋಗನಿರೋಧಕ ಶಕ್ತಿಯನ್ನು ಬಲಪಡಿಸುತ್ತದೆ. ಇದಲ್ಲದೆ, ಪೊಟ್ಯಾಸಿಯಮ್ ಕೂಡ ಹೆಚ್ಚಿನ ಪ್ರಮಾಣದಲ್ಲಿ ಕಂಡುಬರುತ್ತದೆ. ಇದು ನಮ್ಮ ದೇಹವನ್ನು ಸಮತೋಲನ ಗೊಳಿಸಲು ಸಹಾಯ ಮಾಡುತ್ತದೆ. ಮೂಳೆಗಳಲ್ಲಿ ನೋವು ಅಥವಾ ಕ್ಯಾಲ್ಸಿಯಂ ಕೊರತೆಯನ್ನು ಅನುಭವಿಸುವ ಜನರು ತಮ್ಮ ಆಹಾರದಲ್ಲಿ ಅನಾನಸ್ ಹಣ್ಣನ್ನು ಸೇವನೆ ಮಾಡಿದರೆ ಒಳ್ಳೆಯದು.

**ಹಕ್ಕು ನಿರಾಕರಣೆ:** ಈ ಲೇಖನವು ಕೇವಲ ಮಾಹಿತಿಗಾಗಿ ಮಾತ್ರ. ಇದು ಯಾವುದೇ ರೀತಿಯಲ್ಲೂ ಯಾವುದೇ ಔಷಧಿ ಅಥವಾ ಚಿಕಿತ್ಸೆಗೆ ಪರ್ಯಾಯವಲ್ಲ. ವಿಜಯಕರ್ನಾಟಕ ಇದರ ಸತ್ಯತೆ, ನಿಖರತೆ ಮತ್ತು ಪರಿಣಾಮದ ಜವಾಬ್ದಾರಿಯನ್ನು ತೆಗೆದುಕೊಳ್ಳುವುದಿಲ್ಲ.

**ಮೊಸರು ಸೇವನೆ ಮಾಡಿ :** ಹಾಲು ಕುಡಿಯುವುದರಿಂದ ಮೂಳೆಗಳು ಬಲಗೊಳ್ಳುತ್ತವೆ ಎಂದು ಹೆಚ್ಚಿನ ಜನರು ಅಂದುಕೊಂಡಿದ್ದಾರೆ. ಆದರೆ ಮೊಸರಿನಲ್ಲಿ ಹಾಲಿಗಿಂತ ಹೆಚ್ಚಿನ ಕ್ಯಾಲ್ಸಿಯಂ ಇದೆ ಎಂದು ಬಹಳ ಕಡಿಮೆ ಜನರಿಗೆ ತಿಳಿದಿದೆ. ನೀವು ಹಾಲಿಗಿಂತ ಹೆಚ್ಚು ಮೊಸರು ಸೇವಿಸಿದರೆ, ಅದರಿಂದ ನಿಮಗೆ ಹೆಚ್ಚಿನ ಕ್ಯಾಲ್ಸಿಯಂ ಸಿಗುತ್ತದೆ.

**ನೆನೆಹಾಕಿದ ಬಾದಾಮಿ :** ವಿಟಮಿನ್ ಇ ಜೊತೆಗೆ, ಬಾದಾಮಿಯಲ್ಲಿ ಉತ್ತಮ ಪ್ರಮಾಣದ ಪ್ರೋಟೀನ್, ಸತು ಮತ್ತು ಕ್ಯಾಲ್ಸಿಯಂ ಕೂಡ ಕಂಡು ಬರುತ್ತದೆ. ಆರೋಗ್ಯ ತಜ್ಞರ ಪ್ರಕಾರ, ಬಾದಾಮಿ ಮೆದುಳನ್ನು ಚುರುಕುಗೊಳಿಸುವುದಲ್ಲದೆ ಮೂಳೆಗಳನ್ನು ಬಲಪಡಿಸುತ್ತದೆ. ಪ್ರತಿದಿನ ನೆನೆಸಿದ ಬಾದಾಮಿ ತಿನ್ನುವುದು ಮೂಳೆಗಳನ್ನು ಬಲಪಡಿಸುತ್ತದೆ.

**ಪಾಲಕ್ ಸೊಪ್ಪು :** ಆರೋಗ್ಯ ತಜ್ಞರ ಪ್ರಕಾರ, ಪಾಲಕ್‌ನಲ್ಲಿ ಉತ್ತಮ ಪ್ರಮಾಣದಲ್ಲಿ ಕ್ಯಾಲ್ಸಿಯಂ ಕಂಡು ಬರುವುದರಿಂದ, ದೇಹದ ಮೂಳೆಗಳನ್ನು ಬಲಪಡಿಸು ವಲ್ಲಿ ನೆರವಿಗೆ ಬರುತ್ತದೆ. ಆಹಾರ ಪದ್ಧತಿಯಲ್ಲಿ ಆಗಾಗ ಪಾಲಕ್ ಸೊಪ್ಪನ್ನು ಬಳಸುವುದರಿಂದ ಮೂಳೆಗಳಿಗೆ ಶೇಕಡಾ 25 ರಷ್ಟು ಕ್ಯಾಲ್ಸಿಯಂ ಅಂಶ ಸಿಕ್ಕಂತೆ ಆಗುತ್ತದೆ ಪ್ರಮುಖವಾಗಿ ಇದರಲ್ಲಿ ಫೈಬರ್ ಮತ್ತು ವಿಟಮಿನ್ ಎ ಅಂಶ ಅಧಿಕ ಪ್ರಮಾಣದಲ್ಲಿ ಕಂಡು ಬರುತ್ತದೆ.

**ಮೂಳೆಗಳನ್ನು ಬಲಪಡಿಸುವ ಆಹಾರಗಳಿವು:** ಮೂಳೆಗಳನ್ನು ಬಲಪಡಿಸಲು ಕ್ಯಾಲ್ಸಿಯಂ, ಖನಿಜಾಂಶಗಳು ಮತ್ತು ಫಾಸ್ಫೇಟ್ ಬಹಳ ಮುಖ್ಯ. ಹೀಗಾಗಿ ಮೂಳೆಗಳನ್ನು ಬಲಪಡಿಸಲು, ದೈನಂದಿನ ಆಹಾರ ಪದ್ಧತಿಯಲ್ಲಿ ಸ್ನಾಯುಗಳು ಮತ್ತು ಮೂಳೆಗಳನ್ನು ಬಲಪಡಿಸುವ ಆಹಾರವನ್ನು ಸೇವಿಸಬೇಕು. ಅಂತಹ ಕೆಲವೊಂದು ಬಗೆಯ ಆಹಾರಗಳು ಇಲ್ಲಿದೆ ನೋಡಿ....

**ಮೂಳೆಗಳ ಆರೋಗ್ಯಕ್ಕೆ ಒಳ್ಳೆಯದು:** ನಮ್ಮ ಮೂಳೆಗಳನ್ನು ಬಲಪಡಿಸುವುದರ ಜೊತೆಗೆ ಮುಂಬರುವ ದಿನಗಳಲ್ಲಿ ಎದುರಾಗುವ ಮೂಳೆಗಳ ಹಲವಾರು ತೊಂದರೆಗಳಿಂದ ನಮ್ಮನ್ನು ರಕ್ಷಿಸುತ್ತದೆ. ವಯಸ್ಸಾದ ನಂತರದಲ್ಲಿ ಮೂಳೆಗಳ ಸವೆಯುವಿಕೆ, ಮೂಳೆಗಳು ಸೀಳು ಬಿಟ್ಟಂತಾಗುವುದು, ಅರ್ಧಕ್ಕೆ ಮುರಿದುಕೊಳ್ಳುವುದು ಇಂತಹ ಸಮಸ್ಯೆಗಳಿಂದ ರಕ್ಷಿಸುವ ಕೆಲಸ ಮಾಡುತ್ತದೆ. ಏಕೆಂದರೆ ಇವುಗಳಲ್ಲಿ ಕ್ಯಾಲ್ಸಿಯಂ ಅಪಾರ ಪ್ರಮಾಣದಲ್ಲಿದೆ.



# ಉದ್ದಿನ ಬೇಳೆ ಬೇಡ, ಸಬ್ಬಕ್ಕಿ ಸಾಕು! ನೀವೊಮ್ಮೆ ರುಚಿ ನೋಡಲೇಬೇಕು ಈ ದೋಸೆ



ಯಾವಾಗಲೂ ಒಂದೇ ದೋಸೆ ಯಾಕೆ ಈ ಹೊಸ ಸಾಬೂದಾನ-ಹೆಸರುಬೇಳೆ ದೋಸೆ ಟ್ರೈ ಮಾಡಿ. ಬೆಳಗಿನ ಜಾವದ ಗಡಿಬಿಡಿಯಲ್ಲಿ ರುಚಿ ಆರೋಗ್ಯ ಎರಡನ್ನೂ ನೀಡುವಂತಹ ಉಪಹಾರವನ್ನು ಹುಡುಕುತ್ತಿದ್ದೀರಾ ಹಾಗಾದರೆ, ಸಾಬುದಾನ (ಸಬ್ಬಕ್ಕಿ) ಮೂಂಗ್ ದೋಸೆ ಉತ್ತಮ ಆಯ್ಕೆಯಾಗಿದೆ.

ಕೇವಲ 20 ನಿಮಿಷಗಳಲ್ಲಿ ತಯಾರಾಗುವ ಈ ದೋಸೆ, ಇಡೀ ಕುಟುಂಬಕ್ಕೆ ದಿನವಿಡೀ ಚೈತನ್ಯ ನೀಡುತ್ತದೆ. ಈ ದೋಸೆ ಸುಲಭವಾಗಿ ಜೀರ್ಣವಾಗುತ್ತದೆ ಮತ್ತು ದೇಹಕ್ಕೆ ಅಗತ್ಯವಾದ ಶಕ್ತಿಯನ್ನು ಒದಗಿಸುತ್ತದೆ. ಬನ್ನಿ, ಕೇವಲ ನಿಮಿಷಗಳಲ್ಲಿ ಸಿದ್ಧವಾಗುವ ಈ ರುಚಿಕರ ದೋಸೆಯನ್ನು ತಯಾರಿಸುವುದು ಹೇಗೆ ಎಂದು ತಿಳಿಯೋಣ. ಬೆಳಗಿನ ಉಪಹಾರವು ನಮ್ಮ ದಿನವನ್ನು ನಿರ್ಧರಿಸುತ್ತದೆ. ಸಮಯದ ಅಭಾವದಿಂದ ನಾವು ಬೇಗನೆ ಏನು ಸಿಕ್ಕರೂ ತಿನ್ನುವ ಅಭ್ಯಾಸ ಮಾಡಿಕೊಂಡಿದ್ದೇವೆ.

ಆದರೆ, ಇದರಿಂದ ತಾತ್ಕಾಲಿಕವಾಗಿ ಹೊಟ್ಟೆ ತುಂಬಿದರೂ ದೇಹಕ್ಕೆ ಬೇಕಾದ ಪೋಷಕಾಂಶಗಳು ಸಿಗುವುದಿಲ್ಲ. ಹೀಗಾಗಿ, ಆರೋಗ್ಯಕರ ಉಪಹಾರವು ದಿನದ ಆರಂಭಕ್ಕೆ ಅತ್ಯಗತ್ಯ. ತ್ವರಿತವಾಗಿ ತಯಾರಾಗುವ, ಆದರೆ ಆರೋಗ್ಯದೊಂದಿಗೆ ಯಾವುದೇ ರಾಜಿ ಮಾಡಿಕೊಳ್ಳಲು ಇಚ್ಛಿಸದವರಿಗೆ ಈ ಲೇಖನ ಉಪಯುಕ್ತವಾಗಿದೆ. ಸಾಬುದಾನ ಮೂಂಗ್ ದೋಸೆ ಹಗುರವಾಗಿದ್ದರೂ, ಪ್ರೋಟೀನ್ ಮತ್ತು ಫೈಬರ್ ಹೇರಳವಾಗಿ ಹೊಂದಿದೆ. ಇದು ರುಚಿಕರವಾಗಿದ್ದು, ದೀರ್ಘಕಾಲದವರೆಗೆ ಶಕ್ತಿಯನ್ನು ನೀಡುತ್ತದೆ.

**ಸಬ್ಬಕ್ಕಿ ಹೆಸರುಬೇಳೆ ದೋಸೆ ತಯಾರಿಸುವ ಸುಲಭ ವಿಧಾನ –** ಮೊದಲು, ಸಬ್ಬಕ್ಕಿ ಅಥವಾ ಸಾಬುದಾನವನ್ನು 3–4 ಗಂಟೆಗಳ ಕಾಲ ನೀರಿನಲ್ಲಿ ನೆನೆಸಿಟ್ಟು ಮೃದುಗೊಳಿಸಿ. ಅದೇ ರೀತಿ, ಹೆಸರುಬೇಳೆಯನ್ನು ಸಹ 3–4 ಗಂಟೆಗಳ ಕಾಲ ನೆನೆಸಿಡಿ. ಹೀಗೆ ಮಾಡುವುದರಿಂದ ದೋಸೆ ಹಗುರವಾಗಿ ಮತ್ತು ಚೆನ್ನಾಗಿ ಬೇಯುತ್ತದೆ.

ನಂತರ, ನೆನೆಸಿದ ಸಾಬುದಾನ ಮತ್ತು ಹೆಸರುಬೇಳೆಯನ್ನು ಮಿಕ್ಸರ್ ಜಾರ್‌ಗೆ ಹಾಕಿ. ಇದಕ್ಕೆ ಹಸಿ ಮೆಣಸಿನಕಾಯಿ, ಶುಂಠಿ ಮತ್ತು ಉಪ್ಪು ಸೇರಿಸಿ ನುಣ್ಣಗೆ ರುಬ್ಬಿಕೊಳ್ಳಿ. ಹಿಟ್ಟು ಗಟ್ಟಿಯಾಗಿದ್ದರೆ, ಸ್ವಲ್ಪ ನೀರು ಸೇರಿಸಿ ತೆಳ್ಳಗಿನ ಹದಕ್ಕೆ ತನ್ನಿ. ಕೊನೆಯಲ್ಲಿ, ಹೆಚ್ಚಿದ ಕೊತ್ತಂಬರಿ ಸೊಪ್ಪನ್ನು ಸೇರಿಸಿ ಚೆನ್ನಾಗಿ ಮಿಕ್ಸ್ ಮಾಡಿ.

ಈಗ, ದೋಸೆ ತವಾವನ್ನು ಬಿಸಿ ಮಾಡಿ, ಸ್ವಲ್ಪ ಎಣ್ಣೆ ಸವರಿ. ಒಂದು ಸೌಟು ಹಿಟ್ಟನ್ನು ತೆಗೆದುಕೊಂಡು ತವಾ ಮೇಲೆ ವೃತ್ತಾಕಾರವಾಗಿ ಹರಡಿ. ಮಧ್ಯಮ ಉರಿಯಲ್ಲಿ ಒಂದು ಬದಿಯು ಗೋಲ್ಡನ್ ಬ್ರೌನ್ ಆಗುವವರೆಗೆ ಬೇಯಿಸಿ. ನಂತರ ಮಗುಚಿ, ಇನ್ನೊಂದು ಬದಿಯೂ ಕಂದು ಬಣ್ಣ ಬರುವವರೆಗೆ ಬೇಯಿಸಿ. ರುಚಿಕರವಾದ ಸಬ್ಬಕ್ಕಿ ಹೆಸರುಬೇಳೆ ದೋಸೆಯನ್ನು ಹಸಿ ಚಟ್ನಿ, ತೆಂಗಿನಕಾಯಿ ಚಟ್ನಿ ಅಥವಾ ಟೊಮೆಟೊ ಸಾಸ್ ಜೊತೆ ಬಿಸಿಯಾಗಿ ಸವಿಯಹುದು. ಈ ದೋಸೆ ಹಗುರ, ರುಚಿಕರ ಮತ್ತು ಸುಲಭವಾಗಿ ಜೀರ್ಣವಾಗುವ ಆರೋಗ್ಯಕರ ಉಪಹಾರವಾಗಿದೆ. ಒಟ್ಟಾರೆಯಾಗಿ, ನಿಮ್ಮ ಮಕ್ಕಳು ಮತ್ತು ಕುಟುಂಬದವರಿಗೆ ತ್ವರಿತ ಹಾಗೂ ಆರೋಗ್ಯಕರ ಉಪಹಾರ ನೀಡಲು ಬಯಸಿದರೆ, ಸಾಬುದಾನಾ ಮೂಂಗ್ ದೋಸೆ ಉತ್ತಮ ಆಯ್ಕೆಯಾಗಿದೆ. ಈ ದೋಸೆ ಸುಲಭವಾಗಿ ಜೀರ್ಣವಾಗುತ್ತದೆ ಮತ್ತು ದೇಹಕ್ಕೆ ಅಗತ್ಯವಾದ ಶಕ್ತಿಯನ್ನು ಒದಗಿಸುತ್ತದೆ.

### ಸಬ್ಬಕ್ಕಿ ಹೆಸರುಬೇಳೆ ದೋಸೆಗೆ ಬೇಕಾಗುವ ಸಾಮಗ್ರಿಗಳು

- ಸಾಬುದಾನ (ಸಬ್ಬಕ್ಕಿ) – ಅರ್ಧ ಕಪ್
- ನೆನೆಸಿದ ಹೆಸರುಬೇಳೆ – ಅರ್ಧ ಕಪ್
- ಹಸಿ ಮೆಣಸಿನಕಾಯಿ – 1–2 (ರುಚಿಗೆ ತಕ್ಕಂತೆ)
- ಶುಂಠಿ – 1 ಇಂಚು
- ಉಪ್ಪು – ರುಚಿಗೆ ತಕ್ಕಷ್ಟು
- ಎಣ್ಣೆ – ದೋಸೆ ಬೇಯಿಸಲು
- ಕೊತ್ತಂಬರಿ ಸೊಪ್ಪು – 1 ಚಮಚ (ಸ್ವಲ್ಪ)

# ವಾರಕ್ಕೆರಡು ಬಾರಿ ತಲೆಗೆ ಹರಳೆಣ್ಣೆ ಹಚ್ಚಿದ್ರೆ ಕೂದಲು ಉದುರೋರು ನಿಲ್ಲುತ್ತಾ

ಹರಳೆಣ್ಣೆಯನ್ನು ನಿಯಮಿತವಾಗಿ ಬಳಸುವುದರಿಂದ ನಿಮ್ಮ ಕೂದಲ ರಕ್ಷಣೆಯ ದಿನಚರಿಗೆ ಸರಳವಾದ ಸೇರ್ಪಡೆಯಾಗಿದೆ. ಇದು ನಿಮ್ಮ ಕೂದಲಿನ ಶಕ್ತಿ, ಹೊಳಪು, ಆತ್ಮವಿಶ್ವಾಸವನ್ನು ಪುನಃಸ್ಥಾಪಿಸಲು ಸಹಾಯ ಮಾಡುತ್ತದೆ. ಕೂದಲು ಉದುರುವ ಸಮಸ್ಯೆ ಪ್ರತಿಯೊಬ್ಬರನ್ನೂ ಕಾಡುವ ಸಮಸ್ಯೆಯಾಗಿದೆ. ಕೂದಲು ಚೆನ್ನಾಗಿ ಬೆಳೆಯಬೇಕಾದರೆ, ಕೂದಲು ಉದುರುವುದು ನಿಲ್ಲಬೇಕಾದರೆ ನಾನಾ ರೀತಿಯ ಎಣ್ಣೆಗಳನ್ನು ಹಚ್ಚುತ್ತಾರೆ.

ಅಂತಹ ಎಣ್ಣೆಗಳಲ್ಲಿ ಹರಳೆಣ್ಣೆಯೂ ಒಂದು. ಇದರ ದಪ್ಪ ವಿನ್ಯಾಸ, ಪೋಷಣೆಯ ಗುಣಲಕ್ಷಣಗಳು ಕೂದಲನ್ನು ಬಲವಾಗಿಸುವುದಲ್ಲದೆ ಕೂದಲಿನ ಬೆಳವಣಿಗೆಯನ್ನೂ ಉತ್ತೇಜಿಸುತ್ತದೆ. ನಿಮ್ಮ ನೆತ್ತಿಯ ಆರೋಗ್ಯವನ್ನು ಕಾಪಾಡಲು ಮತ್ತು ಕೂದಲು ಉದುರುವಿಕೆಯನ್ನು ಕಡಿಮೆ ಮಾಡಲು ನೀವು ಸರಳ ಮತ್ತು ನೈಸರ್ಗಿಕ ಮಾರ್ಗವನ್ನು ಹುಡುಕುತ್ತಿದ್ದರೆ ಹರಳೆಣ್ಣೆ ಬಳಸುವುದು ಉತ್ತಮ ಆಯ್ಕೆಯಾಗಿದೆ.

**ಕೂದಲಿಗೆ ಹರಳೆಣ್ಣೆಯನ್ನು ಏಕೆ ಬಳಸಬೇಕು:** ಹರಳೆಣ್ಣೆಯಿಂದ ಸಾಕಷ್ಟು ಪ್ರಯೋಜನಗಳಿವೆ, ವಿಶೇಷವಾಗಿ ಕೂದಲು ಮತ್ತು ಚರ್ಮದ ಆರೈಕೆಯಲ್ಲಿ. ಸೆಪ್ಟೆಂಬರ್ 2008 ರ ಸಂಶೋಧನೆಯ ಪ್ರಕಾರ, ಕ್ಯಾಸ್ಟರ್ ಆಯಿಲ್ (ರಿಸಿನಿ ಓಲಿಯಮ್) ಅನ್ನು ಬಾಹ್ಯ ಬಳಕೆಗಾಗಿ ಲೋಷನ್ ಆಗಿ ಬಳಸಲಾಗುತ್ತದೆ, ಇದು ಕೂದಲಿನ ಮೇಲೆ ಉತ್ತೇಜಕ ಮತ್ತು ಪುನರುತ್ಪಾದಕ ಪರಿಣಾಮವನ್ನು ಬೀರುತ್ತದೆ. ಕೂದಲು ಕಡಿಮೆ ಇರುವ ಜಾಗದಲ್ಲಿ ಈ ಎಣ್ಣೆಯನ್ನು ಹಚ್ಚುವುದರಿಂದ ಕೂದಲು ಬೆಳವಣಿಗೆಯಾಗುತ್ತದೆ.

**ಕೂದಲಿಗೆ ಹರಳೆಣ್ಣೆಯ ಪ್ರಯೋಜನಗಳು:** ನೈಸರ್ಗಿಕ ಬೆಳವಣಿಗೆ: ರಕ್ತಪರಿಚಲನೆ ಮತ್ತು ಜಲಸಂಚಯನವನ್ನು ಸುಧಾರಿಸುವ ಮೂಲಕ, ಕೂದಲು ಬಲವಾಗಿ ಮತ್ತು ದಪ್ಪವಾಗಿ ಬೆಳೆಯಲು ಇದು ಆರೋಗ್ಯಕರ ವಾತಾವರಣವನ್ನು ಸೃಷ್ಟಿಸುತ್ತದೆ.

**ಹೊಳಪು, ಮೃದುತ್ವವನ್ನು ನೀಡುತ್ತದೆ:** ಹರಳೆಣ್ಣೆಯ ನಿಯಮಿತ ಬಳಕೆಯು ನಿಮ್ಮ ಕೂದಲನ್ನು ಸುಗಮವಾಗಿ ಮತ್ತು ಹೆಚ್ಚು ಪೋಷಣೆಯೊಂದಿಗೆ ಕಾಣುವಂತೆ ಮಾಡುತ್ತದೆ.

**ಹಕ್ಕು ನಿರಾಕರಣೆ:** ಈ ಲೇಖನವು ಕೇವಲ ಮಾಹಿತಿಗಾಗಿ ಮಾತ್ರ.



ಇದು ಯಾವುದೇ ರೀತಿಯಲ್ಲೂ ಯಾವುದೇ ಔಷಧಿ ಅಥವಾ ಚಿಕಿತ್ಸೆಗೆ ಪರ್ಯಾಯವಲ್ಲ. ಇದರ ಸತ್ಯತೆ, ನಿಖರತೆ, ಪರಿಣಾಮದ ಜವಾಬ್ದಾರಿಯನ್ನು ತೆಗೆದುಕೊಳ್ಳುವುದಿಲ್ಲ.

**ಕೂದಲು ತುಂಡಾಗುವಿಕೆಯನ್ನು ಕಡಿಮೆ ಮಾಡುತ್ತದೆ:** ಕ್ಯಾಸ್ಟರ್ ಆಯಿಲ್‌ನಲ್ಲಿರುವ ಕೊಬ್ಬಿನಾಮ್ಲಗಳು ಕೂದಲಿನ ಪ್ರತಿಯೊಂದು ಎಳೆಯನ್ನು ಬಲಪಡಿಸುತ್ತವೆ, ಇದು ಸೀಳಿದ ತುದಿಗಳು ಮತ್ತು ಬಿರುಕು ಬಿಡುವುದನ್ನು ತಡೆಯಲು ಸಹಾಯ ಮಾಡುತ್ತದೆ.

**ನೆತ್ತಿಯ ಆರೋಗ್ಯವನ್ನು ಸುಧಾರಿಸುತ್ತದೆ:** ಅದರ ಆಂಟಿಮೈಕ್ರೊಬಿಯಲ್ ಮತ್ತು ಉರಿಯೂತದ ಗುಣಲಕ್ಷಣಗಳೊಂದಿಗೆ, ಕ್ಯಾಸ್ಟರ್ ಆಯಿಲ್ ನೆತ್ತಿಯ ಮೇಲಿನ ಶುಷ್ಕತೆ ಮತ್ತು ಕಿರಿಕಿರಿಯನ್ನು ಶಮನಗೊಳಿಸಲು ಸಹಾಯ ಮಾಡುತ್ತದೆ. ತಲೆಹೊಟ್ಟು, ನೆತ್ತಿಯ ಸೋಂಕನ್ನೂ ನಿವಾರಿಸುತ್ತದೆ

ಇದು ರಿಕಿನೋಲಿಕ್ ಆಮ್ಲದಲ್ಲಿ ಸಮೃದ್ಧವಾಗಿದೆ, ಇದು ನೆತ್ತಿ ಮತ್ತು ಕೂದಲನ್ನು ಆಳವಾಗಿ ತೇವಗೊಳಿಸುತ್ತದೆ, ಶುಷ್ಕತೆಯನ್ನು ಎದುರಿಸುತ್ತದೆ. ಇದರ ಉರಿಯೂತ ನಿವಾರಕ, ಆಂಟಿಮೈಕ್ರೊಬಿಯಲ್ ಗುಣಲಕ್ಷಣಗಳು ಕಿರಿಕಿರಿಯನ್ನು ಶಮನಗೊಳಿಸಲು, ತಲೆಹೊಟ್ಟು ಮತ್ತು ನೆತ್ತಿಯ ಸೋಂಕಿನಂತಹ ಸಾಮಾನ್ಯ ಸಮಸ್ಯೆಗಳ ವಿರುದ್ಧ ಹೋರಾಡಲು ಸಹಾಯ ಮಾಡುತ್ತದೆ, ಆರೋಗ್ಯಕರ ಕೂದಲಿನ ಬೆಳವಣಿಗೆಯನ್ನು ಉತ್ತೇಜಿಸುತ್ತದೆ.

**ಕೂದಲು ಉದುರುವಿಕೆಯನ್ನು ನಿಲ್ಲಿಸಲು ಹರಳೆಣ್ಣೆಯನ್ನು ಹೇಗೆ ಬಳಸುವುದು:** ಮಿಶ್ರಣ ಮಾಡಿ ಮತ್ತು ಹಚ್ಚಿ: ಕ್ಯಾಸ್ಟರ್ ಆಯಿಲ್ ಸಾಕಷ್ಟು ದಪ್ಪವಾಗಿರುವುದರಿಂದ, ತೆಂಗಿನ ಎಣ್ಣೆ, ಬಾದಾಮಿ ಎಣ್ಣೆ ಅಥವಾ ಜೊಜೊಬಾ ಎಣ್ಣೆಯಂತಹ ಹಗುರವಾದ ಎಣ್ಣೆಯೊಂದಿಗೆ ಒಂದು ಚಮಚ ಹರಳೆಣ್ಣೆಯನ್ನು ಮಿಶ್ರಣ ಮಾಡಿ. ಇದು ಅದನ್ನು ಹೆಚ್ಚು ಸಮವಾಗಿ ಹರಡಲು ಸಹಾಯ ಮಾಡುತ್ತದೆ. ಬೆಚ್ಚಗಾಗಿಸಿ, ಮಸಾಜ್ ಮಾಡಿ ಮಿಶ್ರಣವನ್ನು ಸ್ವಲ್ಪ ಬೆಚ್ಚಗಾಗಿಸಿ ಮತ್ತು ನಿಮ್ಮ ಬೆರಳ ತುದಿಯನ್ನು ಬಳಸಿ ನಿಮ್ಮ ನೆತ್ತಿಗೆ ನಿಧಾನವಾಗಿ ಮಸಾಜ್ ಮಾಡಿ. ಇದು ರಕ್ತ ಪರಿಚಲನೆಯನ್ನು ಹೆಚ್ಚಿಸುತ್ತದೆ ಮತ್ತು ಆರೋಗ್ಯಕರ ಕಿರುಚೀಲಗಳನ್ನು ಉತ್ತೇಜಿಸುತ್ತದೆ.

**ಒಂದೆರಡು ಗಂಟೆ ಬಿಡಿ:** ನಿಮ್ಮ ಕೂದಲನ್ನು ಶವರ್ ಕ್ಯಾಪ್‌ನಿಂದ ಮುಚ್ಚಿ ಮತ್ತು ಆಳವಾದ ಕಂಡೀಷನಿಂಗ್‌ಗಾಗಿ ಎಣ್ಣೆಯನ್ನು ಕನಿಷ್ಠ ಒಂದರಿಂದ ಎರಡು ಗಂಟೆಗಳ ಕಾಲ ಬಿಡಿ.

**ಚೆನ್ನಾಗಿ ತೊಳೆಯಿರಿ:** ಕೂದಲಿನಿಂದ ಎಣ್ಣೆಯನ್ನು ತೆಗೆದುಹಾಕಲು ಸೌಮ್ಯವಾದ ಶಾಂಪೂ ಬಳಸಿ ಕೂದಲನ್ನು ತೊಳೆಯಿರಿ.

**ವಾರಕ್ಕೊಮ್ಮೆ ಪುನರಾವರ್ತಿಸಿ:** ಉತ್ತಮ ಫಲಿತಾಂಶಗಳಿಗಾಗಿ ವಾರಕ್ಕೆ ಒಂದು ಅಥವಾ ಎರಡು ಬಾರಿ ಹೆರಳೆಣ್ಣೆಯನ್ನು ಕೂದಲಿಗೆ ಹಚ್ಚಿ.

ಗುತ್ತಿಗೆದಾರರು ನಮ್ಮಲ್ಲಿ ಕ್ರೇನ್ ವ್ಯವಸ್ಥೆ ಇಲ್ಲ, ಕೆಟ್ಟಿರುವ ಬೀದಿ ದೀಪಗಳನ್ನು ಬದಲಿಸಲಾಗುತ್ತಿಲ್ಲ ಎಂಬ ಸಬೂಬು ಹೇಳುತ್ತಿದ್ದಾರೆ


# ನಗರದಲ್ಲಿ ಬೀದಿ ದೀಪಗಳಿಲ್ಲದ ಕತ್ತಲೆ ಸಾಮ್ರಾಜ್ಯ: ನಿರ್ವಹಣೆ ಕೊರತೆ

• ಉದಯವಾಹಿನಿ, ಹರಿಹರ

ನಗರದ ಪ್ರಮುಖ ರಸ್ತೆಗಳಲ್ಲಿ ಬೀದಿ ದೀಪಗಳಿಲ್ಲದೇ ಕತ್ತಲೆ ಸಾಮ್ರಾಜ್ಯದ ದರ್ಶನವಾಗುತ್ತದೆ. ನಗರಸಭೆಯಿಂದ ಬೀದಿ ದೀಪಗಳ ನಿರ್ವಹಣೆ ಕೊರತೆ ಎದ್ದು ಕಾಣುತ್ತಿದೆ ಎಂದು ಜನರು ಬೇಸರ ವ್ಯಕ್ತಪಡಿಸುವಂತಾಗಿದೆ.

ನಗರಕ್ಕೆ ಅಂಟಿಕೊಂಡಿರುವ ತುಂಗಭದ್ರಾ ನದಿಯ ಹೊಸ ಸೇತುವೆಯಾಗಲಿ ಪಕ್ಕದಲ್ಲಿರುವ ಹಳೆ ಸೇತುವೆ ಮೇಲಾಗಲಿ ಇರುವ ದೀಪಗಳಲ್ಲಿ ಒಂದೂ ಬೆಳಗುತ್ತಿಲ್ಲ. ಹೊಸ ಸೇತುವೆ ಮೇಲೆ ಸಂಚಾರ ಆರಂಭವಾದಾಗ 2 ವರ್ಷ ದೀಪಗಳು ಬೆಳಗುತ್ತಿದ್ದವು. ಆದರೆ, 1 ವರ್ಷದಿಂದ ಈ ಎರಡೂ ಸೇತುವೆಗಳ ಮೇಲಿನ ಅಂದಾಜು 50ಕ್ಕೂ ಹೆಚ್ಚು ದೀಪಗಳು ಉರಿಯುತ್ತಿಲ್ಲ, ವಾಹನಗಳು ಬಂದಾಗ ಬಂದ ಬೆಳಕು ಮಿಂಚಿನಂತೆ ಮಾಯವಾಗುತ್ತದೆ. ಹೀಗಾಗಿ ರಾತ್ರಿಯಾದೊಡನೆಯೇ ಎರಡೂ ಸೇತುವೆಗಳು ಕಗ್ಗತ್ತಲಲ್ಲಿ ಮುಳುಗುತ್ತವೆ.

ದಾವಣಗೆರೆ ಮಾರ್ಗದ ಅಮರಾವತಿ ಬಳಿಯ ರೈಲ್ವೆ ಮೇಲ್ಸೇತುವೆ ಹಾಗೂ ಅದರ ಇಕ್ಕೆಲಗಳಲ್ಲಿರುವ ಸರ್ವಿಸ್ ರಸ್ತೆಗಳು ಕೂಡ ಕತ್ತಲುಮಯವಾಗಿವೆ. ಹಳೆ ಪಿ.ಬಿ.ರಸ್ತೆ ಮತ್ತು ಹೊಸಪೇಟೆ-ಶಿವಮೊಗ್ಗ ರಾಜ್ಯ ಹೆದ್ದಾರಿಗಳು ಕೂಡುವ ನಗರದ ಮಧ್ಯಭಾಗದ ಗಾಂಧಿ ವೃತ್ತದಲ್ಲೂ ಬೀದಿ ದೀಪಗಳ ಕೊರತೆ ಇದೆ. ಈ ವೃತ್ತದ ಒಂದು ಬದಿಯಲ್ಲಿ ಹೈಮಾಸ್ಟ್ ದೀಪದ ವ್ಯವಸ್ಥೆ ಇದೆ. ಆದರೆ ಆದರ





☛ ಉದಯವಾಹಿನಿ ಚಿತ್ರ

**ಬೆಳಕು ಮಿಂಚಿನಂತೆ ಮಾಯ**

ಬೆಳಕು ಸರ್ಕಲ್‌ನ ಒಂದು ಮೂಲೆಗೆ ಸೀಮಿತವಾಗಿದ್ದು, ಉಳಿದ 3 ಮೂಲೆಗಳು ಕತ್ತಲಲ್ಲಿವೆ. ನಗರದ ಹೊರವಲಯದ ಕೆ.ಎಚ್.ಬಿ. ಕಾಲೊನಿ, ಅಮರಾವತಿ ಕಾಲೊನಿ, ಜೈಭೀಮ ನಗರ, ಅಮರಾವತಿ, ಚಿಂತಾಮಣಿ ನಗರ, ಹರ್ಲಾಪುರ, ಆಶ್ರಯ ಕಾಲೊನಿ, ಗುತ್ತೂರು ಕಾಲೊನಿ, ಗುತ್ತೂರು, ದಾವಣಗೆರೆ ಮಾರ್ಗದ ಹಳೆ ಪಿ.ಬಿ.ರಸ್ತೆ, ಹೊಸ ಜೋಡಿ ರಸ್ತೆ, ವಿದ್ಯಾನಗರ ಸೇರಿದಂತೆ ನಗರದೊಳಗಿನ ಹಲವು ಬಡಾವಣೆಗಳಲ್ಲೂ ಬೀದಿದೀಪಗಳ ನಿರ್ವಹಣೆ ಹಳಿ ತಪ್ಪಿದೆ.

**ಭಯದ ಸ್ಥಿತಿ:** ಬೆಳಗಿನ ಜಾವ , ಸಂಜೆ ವಾಯು ವಿಹಾರಿಗಳು ನದಿಯ ಕಡೆಗೆ ಅಥವಾ ಹೊರ ವಲಯಕ್ಕೆ ಹೊರಟರೆ ಕತ್ತಲೆ ಸಾಮ್ರಾಜ್ಯ ಕಾಡುತ್ತದೆ. ಹೋಟೆಲ್, ಅಂಗಡಿಗಳಲ್ಲಿನ ಕಾರ್ಮಿಕರು ತಮ್ಮ ಮನೆಗೆ ತೆರಳಲು ಸೈಕಲ್ ಅಥವಾ ನಡೆದುಕೊಂಡು ಹೋಗುತ್ತಾರೆ. ಮನೆ ಸಮೀಪಿಸುವವರೆಗೂ ಭಯದಲ್ಲಿ ಹೋಗುವಂತಾಗಿದೆ ಎಂದು ತಮಗಾದ ಸಮಸ್ಯೆಯನ್ನು ಹೇಳಿಕೊಳ್ಳುತ್ತಾರೆ. ಎಸ್‌ಎಸ್‌ಎಲ್‌ಸಿ, ಪಿಯುಸಿ, ಸಿಇಟಿ, ನೀಟ್ ವಿದ್ಯಾರ್ಥಿಗಳು ಹಾಗೂ ಪದವಿ ವಿದ್ಯಾರ್ಥಿಗಳು ಮನೆ ಪಾಠಕ್ಕೆ ಬೆಳಗಿನ ಜಾವ ಅಥವಾ ಸಂಜೆಯ ನಂತರ ಹೋಗಿ ಬರಲು ಕತ್ತಲೆಯಲ್ಲಿ ಸಮಸ್ಯೆಯಾಗುತ್ತಿದೆ. ಕನಿಷ್ಠ ಬೈಕ್ ಇರುವವರು ಮಾತ್ರ ಇಲ್ಲಿ ಸಂಚರಿಸಬಹುದು. ಉಳಿದವರ ಸಮಸ್ಯೆ ಹೇಳಿದರೂ ಕೇಳುವವರಿಲ್ಲದಾಗಿದೆ. ಹೆಚ್ಚು ವಿದ್ಯುತ್ ಬೇಡುವ ಬೀದಿ ದೀಪಗಳನ್ನು ಎಲ್.ಇ.ಡಿ. ದೀಪಗಳಾಗಿ ಪರಿವರ್ತಿಸುವ ಕಾರ್ಯ ಸಿಸಿಎಂಎಸ್ ಎಂಬ ಸಂಸ್ಥೆಗೆ ವಹಿಸಲಾಗಿದೆ. ಆದರೆ ಆ ಕಾರ್ಯ ಪರಿಪೂರ್ಣವಾಗಿ ಜಾರಿಯಾಗಿಲ್ಲ, ಉಳಿದಂತೆ ವಾರ್ಷಿಕ ನಿರ್ವಹಣೆ ಮಾಡುವ ಗುತ್ತಿಗೆದಾರರು ನಮ್ಮಲ್ಲಿ ಕ್ರೇನ್ ವ್ಯವಸ್ಥೆ ಇಲ್ಲ. ಕೆಟ್ಟಿರುವ ಬೀದಿ ದೀಪಗಳನ್ನು ಬದಲಿಸಲಾಗುತ್ತಿಲ್ಲ ಎಂಬ ಸಬೂಬು ಹೇಳುತ್ತಿದ್ದು ಸಮಸ್ಯೆ ಉಲ್ಬಣಿಸುವಂತಾಗಿದೆ ಎಂದು ನಗರಸಭೆಯ ಮೂಲಗಳು ತಿಳಿಸಿವೆ.

> ಬೀದಿ ದೀಪ ಸಮಸ್ಯೆ ಹೇಳಲು ಸಹಾಯವಾಣಿಯೇ ಇಲ್ಲ, ನಗರಸಭೆ ಅಧ್ಯಕ್ಷರು ಹಾಗೂ ಪೌರಾಯುಕ್ತರು ಸಂಜೆ ಆದ ಮೇಲೆ ನಗರದೊಳಗೆ ಹಾಗೂ ಹೊರವಲಯದಲ್ಲಿ ನಡೆದು ಸಾಗಿದರೆ ಜನಸಾಮಾನ್ಯರ ಸಂಕಷ್ಟ ಅರಿವಿಗೆ ಬರುತ್ತದೆ -ಟಿ.ಎಸ್.ನಾಗರಾಜ್, ನಗರನಿವಾಸಿ

> ನಗರದೊಳಗೆ ಬೀದಿ ದೀಪಗಳ ಅಳವಡಿಕೆಗೆ ಅನುದಾನ ಕೋರಿ ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಲಾಗಿದೆ. ದೀಪಗಳ ಪರಿವರ್ತನೆಗೆ ಸಿಸಿಎಂಎಸ್ ಸಂಸ್ಥೆಗೂ ಸೂಚಿಸಿದೆ 2 ತಿಂಗಳಲ್ಲಿ ಸಮಸ್ಯೆಗೆ ಪರಿಹಾರ ಸಿಗಲಿದೆ -ವಿನಯ್ ಕುಮಾರ್, ಎಇಇ ನಗರಸಭೆ

# ಮದ್ಯ ಸೇವನೆಯಿಂದ ದೂರವಿದ್ದು, ಗೌರವಯುತ ಜೀವನ ಸಾಗಿಸಿ



☛ ಉದಯವಾಹಿನಿ ಚಿತ್ರ

• ಉದಯವಾಹಿನಿ, ಅಫಜಲಪುರ

ಮದ್ಯಪಾನ ಸೇವಿಸುವುದರಿಂದ ಅನಾರೋಗ್ಯ ಜತೆಗೆ ಸಮಾಜದಲ್ಲಿ ನಮ್ಮ ಗೌರವಕ್ಕೂ ಧಕ್ಕೆ ಬರುತ್ತದೆ. ಆದ್ದರಿಂದ ಮದ್ಯಪಾನ ತ್ಯಜಿಸುವ ಮೂಲಕ ಗೌರವಯುತ ಬದುಕು ಸಾಗಿಸಲು ಮುಂದಾಗಬೇಕು ಎಂದು ಕರ್ನಾಟಕ ರಾಜ್ಯ ಮದ್ಯಪಾನ ಸಂಯಮ ಮಂಡಳಿ ಅಧ್ಯಕ್ಷ ಶರಣಪ್ಪ ಸಲದಾಪುರ ಸಲಹೆ ನೀಡಿದರು. ಪಟ್ಟಣದ ಶ್ರೀಗುರು ಮಳೇಂದ್ರ ಶಿವಾಚಾರ್ಯರ ಕಲ್ಯಾಣ ಮಂಟಪದಲ್ಲಿ ಧರ್ಮಸ್ಥಳ ಸಂಸ್ಥೆಯಿಂದ ಮದ್ಯ ವರ್ಜನ ಶಿಬಿರದ ಸಮಾರೋಪ ಸಮಾರಂಭ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದರು. ನಗರ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ಸಿಗುವ ಮದ್ಯಗಳಲ್ಲಿ ಯಾವುದು ಅಸಲಿ ಯಾವುದು ನಕಲಿ ಎಂದು ಗುರುತಿಸಲು ಆಗದಷ್ಟು ಪರಿಸ್ಥಿತಿ ನಿರ್ಮಾಣವಾಗಿದೆ. ತಮ್ಮ ಸ್ವಾರ್ಥ ಸಾಧನೆಗಾಗಿ ಕೆಲ ಮದ್ಯ ಮಾರಾಟಗಾರರು ನಕಲಿ ಮದ್ಯ ಸರಬರಾಜು ಮಾಡುತ್ತಿರುವ ಶಂಕೆ ಇದೆ. ನಕಲಿ ಮದ್ಯ ಸೇವಿಸಿದ ವ್ಯಕ್ತಿ ಕೆಲವೇ ವರ್ಷಗಳಲ್ಲಿ ಜೀವ ಬಿಡಬೇಕಾಗುತ್ತದೆ. ಕುಡಿತಕ್ಕೆ ಬಲಿಯಾಗುವ ವ್ಯಕ್ತಿಯ ಕುಟುಂಬ ಬೀದಿಗೆ ಬರುತ್ತದೆ. ಆದ್ದರಿಂದ ನಂಬಿದವರನ್ನು ಸಂಕಷ್ಟಕ್ಕೆ ತಳ್ಳದೇ ಮದ್ಯವನ್ನು ತ್ಯಜಿಸಿ ನೆಮ್ಮದಿಯಾಗಿ ಬಾಳಲು ಮುಂದಾಗಬೇಕು ಎಂದು ತಿಳಿಸಿದರು. ಮನುಷ್ಯನಿಗೆ ಸಂಸ್ಕಾರ ಅತಿ ಎತ್ತರಕ್ಕೆ ಕೊಂಡೊಯ್ಯುತ್ತದೆ. ಧರ್ಮಸ್ಥಳ ಸಂಸ್ಥೆ ಸಂಸ್ಕಾರ ಎಂಬ ಆಸ್ತಿ ನಮಗೆ ಕಲಿಸುತ್ತದೆ. ಇದರ ಸದುಪಯೋಗ ನಾವು ಪಡೆದುಕೊಳ್ಳಬೇಕು ಎಂದು ಹೇಳಿದರು. ಧರ್ಮಸ್ಥಳ ಸಂಸ್ಥೆದು ಪ್ರಾದೇಶಿಕ ನಿರ್ದೇಶಕರಾದ ದಿನೇಶ ಪ್ರಾಚಾರಿ ಮಾತನಾಡಿ, ಧರ್ಮಸ್ಥಳ ಸಂಸ್ಥೆಯಿಂದ ಪ್ರತಿದಿನವೂ ಸಾಮಾಜಿಕ ಒಳಿತನ್ನು ಬಯಸುವ ಏಕೈಕ ಸಂಸ್ಥೆಯಾಗಿದೆ ಎಂದರು.

> ನಾನು ಮದ್ಯಪಾನ ನಿಷೇಧಕ್ಕಾಗಿ ಬಹಳಷ್ಟು ಹೋರಾಟಗಳನ್ನು ಮಾಡುತ್ತ ಬಂದಿದ್ದೇನೆ. ಇಂದು ನಾನು ಈ ಕಾರ್ಯಕ್ರಮದಲ್ಲಿ ಭಾಗಿಯಾಗುವುದರ ಉದ್ದೇಶ ಧರ್ಮಸ್ಥಳ ಸಂಸ್ಥೆಯವರು ಮದ್ಯ ವರ್ಜನ ಶಿಬಿರ ಮಾಡಿ ಸುಮಾರು 40 ಜನರ ಬದುಕನ್ನು ಹಸನು ಮಾಡಿದ್ದಾರೆ ಎನ್ನುವ ಖುಷಿಗಾಗಿ ಭಾಗಿದ್ದೇನೆ. -ಶರಣಪ್ಪ ಸಲದಾಪುರ

# ಅಧ್ಯಕ್ಷರಾಗಿ ಚಿತ್ರಶೇಖರ ಪಾಟೀಲ ಅವಿರೋಧ ಆಯ್ಕೆ





☛ ಉದಯವಾಹಿನಿ ಚಿತ್ರ

• ಉದಯವಾಹಿನಿ, ಚಿಂಚೋಳಿ

ತಾಲ್ಲೂಕಿನ ಐನೋಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಉಪಾಧ್ಯಕ್ಷರ ನಡೆದ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಚಿತ್ರಶೇಖರ ಪಾಟೀಲ ಉಪಾಧ್ಯಕ್ಷ ಸ್ಥಾನಕ್ಕೆ ದೇಸುರಾವ ಹೇಮ್ಲಾ ತಲಾ ಒಂದೊಂದು ನಾಮಪತ್ರ ಸಲ್ಲಿಕೆ ಮಾಡಲಾಗಿತ್ತು ಬೇರೆ ಯಾವುದೇ ನಾಮಪತ್ರ ಸಲ್ಲಿಕೆ ಆಗದೆ ಇರುವುದರಿಂದ ಅಧ್ಯಕ್ಷರಾಗಿ ಚಿತ್ರಶೇಖರ ಪಾಟೀಲ ಉಪಾಧ್ಯಕ್ಷರಾಗಿ ದೇಸುರಾವ ಹೇಮ್ಲಾ ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ಚುನಾವಣಾಧಿಕಾರಿ ಬಸವರಾಜ ಪೋಲಾರಿ,ಸಹಾಯಕ ಚುನಾವಣಾಧಿಕಾರಿ ಮನ್ಮಥ ಕರುಣಸಾಗರ್ ತಿಳಿಸಿದ್ದಾರೆ.

**ಐನೋಳ್ಳಿ ಪಿಕೆಪಿಎಸ್‌ಎಸ್ ಆಡಳಿತ ಮಂಡಳಿ ನಿರ್ದೇಶಕರು:**- ಶರಣಪ್ಪ ಶಿವಲಿಂಗಪ್ಪ,ಶಶಿಧರ ಬಕ್ಕಪ್ಪ, ನಾಗಶೆಟ್ಟಿ ನಿರಂಜಪ್ಪ,ಬಸವರಾಜ ಶಾಮರಾವ,ಅಶ್ವಿನಿ ಸತೀಶಕುಮಾರ,ಚಂದ್ರಕಲಾ ಜಗನ್ನಾಥರೆಡ್ಡಿ,ಶಕುಂತಲಾ ಸುಭಾಶ್ಚಂದ್ರ,ಬಸವರಾಜ ನರಸಿಂಗರಾವ,ಚಂದ್ರಕಾಂತ ಸುಭಾಶ್ಚಂದ್ರ,ಪವನಕುಮಾರ ಕಾಶಿನಾಥ,ಸಹಕಾರ ಸಂಘದ ತಾಲ್ಲೂಕಾ ಸಿಡಿಒ ಜೀವನ್ ಧನಕರ್,ಐನೋಳ್ಳಿ ಸಂಘದ ಸಿಇಓ ಸಂತೋಷ ಓಂಕಾರ,ಚುನಾವಣೆ ಪ್ರಕ್ರಿಯೆಯಲ್ಲಿ ಭಾಗಿಯಾಗಿದ್ದರು. ಚುನಾವಣೆ ಮುಕ್ತಾಯ ನಂತರ ಜಿಪಂ. ಮಾಜಿ ಸದಸ್ಯ ಗೌತಮ್ ವೈಜನಾಥ ಪಾಟೀಲ,ಸತೀಶಕುಮಾರ ಇಟಗಿ,ಗೋಪಾಲರೆಡ್ಡಿ,ಭವಾನಿ,ಫತ್ತೇಪೂರ,ದೀಲೀಪ ಪಾಟೀಲ, ರಘು ದೇಸಾಯಿ,ವಿವೇಕ ಪಾಟೀಲ,ಪರ್ವತಕುಮಾರ ದೇಸಾಯಿ,ಸೇರಿದಂತೆ ಸಿಹಿ ಹಂಚಿ ಸಂಭ್ರಮಿಸಿದರು.

# ನಗರದಲ್ಲಿ ವಿಶ್ವದರ್ಜೆಯ ಚಿಕಿತ್ಸಾ ಸೌಲಭ್ಯ: ಜೋಶಿ

• ಉದಯವಾಹಿನಿ, ಹುಬ್ಬಳ್ಳಿ




☛ ಉದಯವಾಹಿನಿ ಚಿತ್ರ

ಉತ್ತರ ಕರ್ನಾಟಕ ಭಾಗದ ಜನತೆಗೆ ಅತ್ಯಾಧುನಿಕ ತಂತ್ರಜ್ಞಾನದ ವಿಶ್ವದರ್ಜೆಯ ಚಿಕಿತ್ಸೆಯನ್ನು ನೀಡುವ ಸೌಲಭ್ಯಗಳನ್ನು ಒದಗಿಸಲಾಗುವುದು ಎಂದು ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ ತಿಳಿಸಿದ್ದಾರೆ.

ನಗರದಲ್ಲಿ ಉತ್ತರ ಕರ್ನಾಟಕದ ಪ್ರಥಮ ಹೆಚ್‌ಸಿಜಿ ಕ್ಯಾನ್ಸರ್ ಸೆಂಟರ್‌ನ ಅತ್ಯಾಧುನಿಕ ಎಲೆಕ್ಟಾ ವರ್ಸಾ ಎಚ್‌ಡಿ ವಿಕಿರಣ ಚಿಕಿತ್ಸಾ ಯಂತ್ರವನ್ನು ಅನಾವರಣಗೊಳಿಸಿ ಮಾತನಾಡಿದ ಸಚಿವರು ನೂತನ ಚಿಕಿತ್ಸಾ ವ್ಯವಸ್ಥೆಯಿಂದ ಇಲ್ಲಿನ ಜನತೆಗೆ ಪ್ರಯಾಣ ಮತ್ತು ವೆಚ್ಚಗಳೆರಡನ್ನೂ ಕಡಿಮೆ ಮಾಡುತ್ತದೆ ಎಂದು ಹೇಳಿದರು. ಇದು ಅಸಂಖ್ಯಾತ ರೋಗಿಗಳಿಗೆ ಪ್ರಯೋಜನ ನೀಡುತ್ತದೆ ಮತ್ತು ನಮ್ಮ ಪ್ರದೇಶದಲ್ಲಿ ಆರೋಗ್ಯ ಸೇವೆಯನ್ನು ಬಲಪಡಿಸುತ್ತದೆ.

ಈ ಮಹತ್ವದ ಉಪಕ್ರಮಕ್ಕಾಗಿ ನಾನು ಹೆಚ್‌ಸಿಜಿಯನ್ನು ಅಭಿನಂದಿಸುತ್ತೇನೆ ಎಂದರು. ಹುಬ್ಬಳ್ಳಿ-ಧಾರವಾಡವನ್ನು ಕರ್ನಾಟಕದಲ್ಲಿ ಸುಧಾರಿತ ಕ್ಯಾನ್ಸರ್ ಚಿಕಿತ್ಸೆಯ ಪ್ರಮುಖ ಕೇಂದ್ರವಾಗಿರಲಿದೆ. ಈ ಮಾದರಿಯು ದಕ್ಷಿಣ ಮಹಾರಾಷ್ಟ್ರ, ಗೋವಾ, ಉತ್ತರ ಕರ್ನಾಟಕದಾದ್ಯಂತ ಇದೇ ಮೊದಲನೆಯದಾಗಿದೆ.

ವಿಶ್ವದರ್ಜೆಯ ವಿಕಿರಣ ಚಿಕಿತ್ಸೆಯು ಈಗ ರೋಗಿಗಳ ಮನೆಗೆ ಸಮೀಪದಲ್ಲಿಯೇ ಲಭ್ಯವಾಗಲಿದ್ದು, ಅವರ ಮತ್ತು ಅವರ ಕುಟುಂಬದ ಆರ್ಥಿಕ ಮತ್ತು ಪ್ರಯಾಣದ ಹೊರೆಯನ್ನು ಕಡಿಮೆ ಮಾಡಲಿದೆ.

ಶಾಸಕ ಮಹೇಶ್ ಟೆಂಗಿನಕಾಯಿ,ಹೆಲ್ತ್ ಕೇರ್ ಗ್ಲೋಬಲ್‌ನ ಕಾರ್ಯನಿರ್ವಾಹಕ ನಿರ್ದೇಶಕ ಡಾ. ಮನೀಶ್ ಮಟ್ಟು ಹಿರಿಯ ಅಧಿಕಾರಿಗಳಾದ ಮನಿಷಾ ಕುಮಾರ್, ಡಾ. ಅಬ್ದುಲ್ ರಹೀಮ್ ಉಪಸ್ಥಿತರಿದ್ದರು.

# ರಾಜ್ಯೋತ್ಸವವನ್ನು ಅದ್ದೂರಿಯಾಗಿ ಆಚರಿಸಲು ಅಗತ್ಯ ಸಿದ್ಧತೆ

• ಉದಯವಾಹಿನಿ ಮಂಗಳೂರು



☛ ಉದಯವಾಹಿನಿ ಚಿತ್ರ

ಪ್ರಸಕ್ತ ಸಾಲಿನ ಕರ್ನಾಟಕ ರಾಜ್ಯೋತ್ಸವವನ್ನು ಅದ್ದೂರಿಯಾಗಿ ಮತ್ತು ಅರ್ಥಪೂರ್ಣವಾಗಿ ಆಚರಿಸಲು ನಿರ್ಧರಿಸಲಾಗಿದ್ದು, ಅಧಿಕಾರಿಗಳು ಅಗತ್ಯ ಸಿದ್ಧತೆ ಮಾಡಿಕೊಳ್ಳುವಂತೆ ಅಪರ ಜಿಲ್ಲಾಧಿಕಾರಿ ರಾಜು ಸೂಚಿಸಿದರು. ಅವರು ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಜರುಗಿದ ಪ್ರಸಕ್ತ ಸಾಲಿನ ಕರ್ನಾಟಕ ರಾಜ್ಯೋತ್ಸವದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ, ಮಾತನಾಡಿದರು.

ಕನ್ನಡ ನಾಡು, ನುಡಿಯ ಬಗ್ಗೆ ಜಾಗೃತಿ ಮೂಡಿಸುವಲ್ಲಿ ರಾಜ್ಯೋತ್ಸವ ಕಾರ್ಯಕ್ರಮಗಳು ರೂಪಗೊಳ್ಳಬೇಕು. ಕರ್ನಾಟಕ ರಾಜ್ಯೋತ್ಸವ ಕಾರ್ಯಕ್ರಮವು, ಜಿಲ್ಲೆಯಲ್ಲಿ ಜರುಗಿರುವ ಕನ್ನಡ ಹೋರಾಟ, ನಾಡಿನ ಏಕೀಕರಣ ಚಳುವಳಿಗಳ ಹಿನ್ನಲೆಯಲ್ಲಿ ವಿದ್ಯಾರ್ಥಿಗಳಿಗೆ ಮತ್ತು ಸಾರ್ವಜನಿಕರಿಗೆ ಇತಿಹಾಸ ತಿಳಿಸುವ ಕೆಲಸವಾಗಬೇಕು. ಈ ನಿಟ್ಟಿನಲ್ಲಿ ಸಾಂಸ್ಕೃತಿಕವಾಗಿ ಕಾರ್ಯಕ್ರಮಗಳನ್ನು ಆಯೋಜಿಸಬೇಕು. ಶಾಲಾ ಶಿಕ್ಷಣ ಇಲಾಖೆ ಮತ್ತು ಪದವಿ ಪೂರ್ವ ಶಿಕ್ಷಣ ಇಲಾಖೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಂಯುಕ್ತವಾಗಿ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು ಎಂದು ಅವರು ತಿಳಿಸಿದರು.

ರಾಜ್ಯೋತ್ಸವದ ಮುನ್ನ ದಿನ ಪ್ರಮುಖ ಸರ್ಕಾರಿ ಕಟ್ಟಡಗಳನ್ನು ದೀಪಾಲಂಕಾರ ಮಾಡಬೇಕು. ಮಹಾನಗರಪಾಲಿಕೆ ವತಿಯಿಂದ ವೇದಿಕೆ ಹಾಗೂ ಇತರೆ ಸಿದ್ಧತೆಗಳನ್ನು ಏರ್ಪಡಿಸಲು ಅಪರ ಜಿಲ್ಲಾಧಿಕಾರಿ ಹೇಳಿದರು. ಸಭೆಯಲ್ಲಿ ಉಪ ಪೊಲೀಸ್ ಆಯುಕ್ತ ಉಮೇಶ್ ಪಿ., ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ರಾಜೇಶ್ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಭಾಗವಹಿಸಿದ್ದರು.

> ಪ್ರತಿ ವರ್ಷದಂತೆ ರಾಜ್ಯೋತ್ಸವವನ್ನು ನೆಹರು ಮೈದಾನದಲ್ಲಿ ಆಯೋಜಿಸಲಾಗುತ್ತದೆ. ಎಲ್ಲಾ ಇಲಾಖೆಯ ಅಧಿಕಾರಿ ಮತ್ತು ಸಿಬ್ಬಂದಿಗಳು ಕಡ್ಡಾಯವಾಗಿ ಕಾರ್ಯಕ್ರಮದಲ್ಲಿ ಭಾಗವಹಿಸಬೇಕು. ಪೊಲೀಸ್ ಪಡೆ, ಜಿಲ್ಲಾ ಮೀಸಲು ಪೊಲೀಸ್ ಪಡೆ, ಜಿಲ್ಲಾ ಗೃಹರಕ್ಷಕ ದಳ, ಅರಣ್ಯ ಇಲಾಖೆ, ಅಗ್ನಿಶಾಮಕ ದಳ, ಎನ್. ಸಿ. ಸಿ. ವಿದ್ಯಾರ್ಥಿಗಳು, ಭಾರತ ಸೇವಾದಳ ಮತ್ತು ಸ್ಕೌಟ್ಸ್ ಮತ್ತು ಗೈಡ್ಸ್ ವಿದ್ಯಾರ್ಥಿಗಳು ಕವಾಯತ್‌ನಲ್ಲಿ ಪಾಲ್ಗೊಂಡು ಉತ್ತಮ ರೀತಿಯಲ್ಲಿ ಪ್ರದರ್ಶನ ನೀಡುವಂತೆ ಅವರು ಹೇಳಿದರು. -ಅಪರ ಜಿಲ್ಲಾಧಿಕಾರಿ

# ಸಚಿವ ಪ್ರಿಯಾಂಕ್ ಖರ್ಗೆಗೆ ಝಡ್ ಪ್ಲಸ್ ಭದ್ರತೆ ಒದಗಿಸಿ

• ಉದಯವಾಹಿನಿ, ಚಿಂಚೋಳಿ




☛ ಉದಯವಾಹಿನಿ ಚಿತ್ರ

ಜಿಲ್ಲಾ ಉಸ್ತುವಾರಿ ಸಚಿವ ಪ್ರೀಯಾಂಕ್ ಖರ್ಗೆಯವರಿಗೆ ಸಂಘ ಪರಿವಾರದವರು ಕರೆ ಮಾಡಿ ಬೆದರಿಕೆ ಹಾಗೂ ಅಪಮಾನ ಮಾಡುತ್ತಿರುವುದನ್ನು ಖಂಡಿಸಿ ತಾಲ್ಲೂಕಾ ಬ್ಲಾಕ್ ಕಾಂಗ್ರೇಸ್ ಸಮಿತಿಯಿಂದ ತಹಶೀಲ್ ಕಛೇರಿ ಎದುರು ಪ್ರತಿಭಟನೆ ನಡೆಸಿ ತಹಶೀಲ್ದಾರ್ ಮೂಲಕ ಮುಖ್ಯಮಂತ್ರಿಗಳಿಗೆ ಮನವಿಪತ್ರ ಸಲ್ಲಿಸಿದರು.

ಪ್ರತಿಭಟನೆ ಉದ್ದೇಶಿಸಿ ಕೆಪಿಸಿಸಿ ಉಪಾಧ್ಯಕ್ಷ ಸುಭಾಷ್ ರಾಠೋಡ್ ಮಾತನಾಡಿ ಆರ್‌ಎಸ್‌ಎಸ್ ಸಂಘ ಪರಿವಾರದವರು ರಾಷ್ಟ್ರ ರಕ್ಷಣೆ, ಧರ್ಮರಕ್ಷಣೆ, ಗೋರಕ್ಷಣೆ ಎಂಬ ಹೆಸರಿನಲ್ಲಿ ಗಣವೇಷದಾರಿಗಳ ಮೂಲಕ ಕೈಯಲ್ಲಿ ಲಾಟಿ ಹಿಡಿದುಕೊಂಡು ಪಥಸಂಚಲನ ನಡೆಸಿ,ಬೈಠಕ ಮಾಡುವ ಹೆಸರಿನಲ್ಲಿ ವಿಷಬೀಜ ಬಿತ್ತುವ ಮೂಲಕ ಒಳಜಗಳ ರಾಷ್ಟ್ರ ಮತ್ತು ರಾಜ್ಯದಲ್ಲಿ ಕೋಮವಾದಿ ಹೆಚ್ಚುಸುತ್ತಿದ್ದಾರೆ. ಕಲಬುರಗಿ ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆಯವರು ಇಂಥಹ ಕೋಮುವಾದಿ ಸಂಘದ ವಿರುದ್ಧ ಮಾತನಾಡಿದ್ದಕ್ಕೆ ಹಾಗೂ ಮುಖ್ಯಮಂತ್ರಿ ಸಿದ್ಧರಾಮಯ್ಯ ಅವರಿಗೆ ಪತ್ರ ಬರೆದಿರುವುದು ಸಹಿಸಲಾರದೆ ಸಂಘಪರಿವಾರದ ಅಪರಿಚಿತರು ಸಚಿವ ಖರ್ಗೆಯವರಿಗೆ ಕರೆಮಾಡಿ ಅವಾಚ್ಯ ಶಬ್ದಗಳಿಂದ ಬೈಯ್ದು ಜೀವ ಬೆದರಿಕೆ ಹಾಕಿ ಮತ್ತು ಅಪಮಾನ ಮಾಡಿರುತ್ತಾರೆ. ಸಮಾಜದಲ್ಲಿ ಒಡಕು ಮೂಡಿಸುವ ಶಕ್ತಿಗಳಿಗೆ ಕಡಿವಾಣ ಹಾಕಬೇಕು, ಸಚಿವ ಖರ್ಗೆಯವರಿಗೆ ಝಡ್ ಪ್ಲಸ್ ಭದ್ರತೆಯನ್ನು ಒದಗಿಸಬೇಕು ಎಂದರು.

ಕಾಂಗ್ರೇಸ್ ಪಕ್ಷದ ಅಧ್ಯಕ್ಷ ಬಸವರಾಜ ಮಾಲಿ,ಪುರಸಭೆ ಅಧ್ಯಕ್ಷ ಆನಂದ ಟೈಗರ್, ಬಾಬುರಾವ ಪಾಟೀಲ,ಲಿಂಗಶೆಟ್ಟಿ ತಟ್ಟೆಪಳ್ಳಿ, ಅಬ್ದುಲ್ ಬಾಷೀದ್, ಪ್ರವೀಣ ಟಿಟಿ, ಅನ್ವರ್ ಖತೀಬ್ , ನರಸಿಂಹ ಕುಂಬಾರ್, ಅರ್.ಗಣಪತರಾವ, ವಿಶ್ವ ಹೋಡೆಬೀರನಳ್ಳಿ, ಸಂತೋಷ ಮಾಳಪನೋರ, ರೇವಣಸಿದ್ದಪ್ಪ ಅಣಕಲ್,ನಾಗೇಶ ಗುಣಾಜಿ, ಲಕ್ಷ್ಮಿದೇವಿ,ರಾಮಶೆಟ್ಟಿ ಪವ್ಹಾರ, ಖಲೀಲ್ ಪಟೇಲ, ಮಹೇಮೂದ್ ಪಟಫುಲ,ಮಹ್ಮದ್ ಹಾದಿಸಾಬ, ರಾಘವೇಂದ್ರ ಗುತ್ತೇದ್ದಾರ,ಮಸ್ತಾನ ಪಟೇಲ, ಲೋಕೇಶ,ಆನಂದ,ಹಣಮಂತ ಇದ್ದರು.

# ಕುಖ್ಯಾತ ರೌಡಿ ಯುನಸ್ ಎನ್‌ಕೌಂಟರ್‌ಗೆ ಬಲಿ

• ಉದಯವಾಹಿನಿ ವಿಜಯಪುರ

ಬಂಧನಕ್ಕೆ ತೆರಳಿದ್ದ ವೇಳೆ ಪೊಲೀಸರ ಮೇಲೆ ಹಲ್ಲೆ ನಡೆಸಿ ಪರಾರಿಯಾಗಲು ಯತ್ನಿಸಿದ ಕುಖ್ಯಾತ ರೌಡಿ ಯುನಸ್ ಪಟೇಲ್ ಎನ್‌ಕೌಂಟರ್ ಗೆ ಬಲಿಯಾಗಿರುವ ಸಿಂದಗಿ ತಾಲ್ಲೂಕಿನ ರಾಂಪೂರ ಗ್ರಾಮದಲ್ಲಿ ಹೊರ ಭಾಗದಲ್ಲಿ ನಡೆದಿದೆ. ನಟೋರಿಯಸ್ ರೌಡಿ ಯುನಸ್ ಪಟೇಲ್ (35) ಪೊಲೀಸರು ಆತ್ಮರಕ್ಷಣೆಗೆ ಹಾರಿಸಿದ ಗುಂಡೇಟಿಗೆ ಬಲಿಯಾಗಿದ್ದಾನೆ.



ನಗರದ ಗಾಂಧಿ ಚೌಕ್ ವ್ಯಾಪ್ತಿಯಲ್ಲಿ ಅ.17 ರಂದು ಓರ್ವನಿಗೆ ಚಾಕು ತೋರಿಸಿ 25 ಸಾವಿರ ಹಣ ಸುಲಿಗೆ ಮಾಡಿ, ಆತನ ಸ್ಕೂಟಿಯನ್ನೇ ದೋಚಿ ರೌಡಿ ಯುನಸ್ ಪಟೇಲ್ ಪರಾರಿಯಾಗಿದ್ದು, ಈ ಸಂಬಂಧ ಗಾಂಧಿಚೌಕ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು.ಆರೋಪಿ ಆಲಮೇಲ ತಾಲ್ಲೂಕಿನ ದೇವಣಗಾಂವ್ ಗ್ರಾಮದತ್ತ ತೆರಳುತ್ತಿರುವ ಖಚಿತವಾದ ಮಾಹಿತಿಯನ್ನು ಇಂದು ಬೆಳಿಗ್ಗೆ ಆಧರಿಸಿ ಬಂಧಿಸಲು ಕಾರ್ಯಾಚರಣೆ ಕೈಗೊಂಡಿದ್ದಾರೆ. ಸಿಂದಗಿ ತಾಲ್ಲೂಕಿನ ರಾಂಪುರ್ ಬಳಿ ಆರೋಪಿ ಯುನಸ್‌ನನ್ನು ಬೆನ್ನತ್ತಿ ಬಂಧಿಸಲು ಮುಂದಾದಾಗ ಇಬ್ಬರು ಕಾನ್ಸ್‌ಟೇಬಲ್ ಹಾಗೂ ಇನ್ಸ್‌ಪೆಕ್ಟರ್ ಮೇಲೆ ಆರೋಪಿ ದಾಳಿ ನಡೆಸಿ ಪರಾರಿಯಾಗಲು ಯತ್ನಿಸಿದ್ದಾನೆ.

ಆಗ ಆಯತಪ್ಪಿ ಇನ್ಸ್‌ಪೆಕ್ಟರ್ ಪ್ರದೀಪ್ ತಳಕೇರಿ ಬಿದ್ದಿದ್ದು, ಗಾಳಿಯಲ್ಲಿ ಗುಂಡು ಹಾರಿಸಿ ಶರಣಾಗುವಂತೆ ಇನ್ಸ್‌ಪೆಕ್ಟರ್ ಎಚ್ಚರಿಕೆ ನೀಡಿದ್ದಾರೆ.


ಆದರೂ ಯುನಸ್ ಹಲ್ಲೆಗೆ ಯತ್ನಿಸಿದಾಗ ಆತ್ಮರಕ್ಷಣೆಗಾಗಿ ಆರೋಪಿ ಯುನಸ್ ನತ್ತ ಇನ್ಸ್ ಪೆಕ್ಟರ್ ಗುಂಡು ಹಾರಿಸಿದಾಗ ಗುಂಡೇಟು ತಗುಲಿ ಕುಸಿದು ಬಿದ್ದಿದ್ದಾನೆ. ಗಂಭೀರವಾಗಿ ಗಾಯಗೊಂಡ ಆತನನ್ನು ಸಿಂದಗಿ ತಾಲ್ಲೂಕು ಅಸ್ಪತ್ರೆಯಲ್ಲಿ ಪ್ರಾಥಮಿಕ ಚಿಕಿತ್ಸೆ ನೀಡಿ ನಂತರ ಜಿಲ್ಲಾ ಆಸ್ಪತ್ರೆಗೆ ರವಾನಿಸಲಾಗಿದೆ. ಜಿಲ್ಲಾಸ್ಪತ್ರೆಯ ವೈದ್ಯರು ಆರೋಪಿ ಮೃತಪಟ್ಟಿದ್ದಾಗಿ ತಿಳಿಸಿದ್ದಾರೆ ಎಂದು ಎಸ್ ಪಿ ಲಕ್ಷ್ಮಣ ನಿಂಬರಗಿ ತಿಳಿಸಿದ್ದಾರೆ.

ಯುನಸ್ ಮೇಲೆ ಎರಡು ಕೊಲೆ ಪ್ರಕರಣ, ಒಂದು ಕೊಲೆ ಯತ್ನ, ಸೇರಿದಂತೆ ಒಟ್ಟು 12 ಪ್ರಕರಣಗಳಿವೆ. ಈ ಕುರಿತು ತನಿಖೆ ಮುಂದುವರಿಯುತ್ತಿದೆ.

# ಸಾಮೂಹಿಕ ಅತ್ಯಾಚಾರ ಕೊಲೆಗೈದ ದುಷ್ಕರ್ಮಿಗಳನ್ನು ಗಲ್ಲಿಗೆ ಹಾಕಿ

## ತಾಲ್ಲೂಕು ತಹಶೀಲ್ದಾರ್ ಮೂಲಕ ಮಾನ್ಯ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮನವಿ ಪತ್ರ ಸಲ್ಲಿಕೆ

• ಉದಯವಾಹಿನಿ ಸಿಂಧನೂರು



☛ ಉದಯವಾಹಿನಿ ಚಿತ್ರ

**ವೀರೇಶ್ ಹಂಚಿನಾಳ ಆಗ್ರಹ**

ವಿಜಾಪೂರ ಜಿಲ್ಲೆಯ ಮುದ್ದೇಬಿಹಾಳ ಗ್ರಾಮದ ಛಲವಾದಿ ಸಮುದಾಯದ ಬಾಲಕಿಯ ಮೇಲೆ ಸಾಮೂಹಿಕ ಅತ್ಯಾಚಾರ ಮಾಡಿ ಕೊಲೆಗೈದ ದುಷ್ಕರ್ಮಿಗಳನ್ನು ಕೂಡಲೇ ಬಂಧಿಸಬೇಕು ಮತ್ತು ಕುಟುಂಬಕ್ಕೆ ಭದ್ರತೆ ಹಾಗೂ ಪರಿಹಾರ ಒದಗಿಸಬೇಕೆಂದು ಆಗ್ರಹಿಸಿ ಕರ್ನಾಟಕ ಛಲವಾದಿ ಮಹಾಸಭಾದ ಸಿಂಧನೂರು ತಾಲ್ಲೂಕು ಸಮಿತಿ ವತಿಯಿಂದ ತಾಲ್ಲೂಕು ತಹಶೀಲ್ದಾರ್ ಮೂಲಕ ಮಾನ್ಯ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮನವಿ ಪತ್ರ ಸಲ್ಲಿಸಿದರು.

ನಂತರ ಮಾತನಾಡಿದ ಉಪಾಧ್ಯಕ್ಷ ವೀರೇಶ ಹಂಚಿನಾಳ ಅವರು ಈಗ ತಾನೇ 15 ವರುಷದ ಬಾಲಕಿ ಬಸಮ್ಮ ಛಲವಾದಿ ಎನ್ನುವ ಬಾಲಕಿ ಮೇಲೆ ಸಾಮೂಹಿಕ ಅತ್ಯಾಚಾರ ಮಾಡಿ ಕೊಲೆ ಮಾಡಿದ ಅಮಾನವೀಯ ಘಟನೆ ವಿಜಯಪೂರ ಜಿಲ್ಲೆಯ ಮುದ್ದೇಬಿಹಾಳ ತಾಲ್ಲೂಕಿನ ಬನೋಶಿ ಗ್ರಾಮದಲ್ಲಿ ದಿನಾಂಕ 14-10-2025 ರಂದು ನಡೆದುಹೋಗಿದ್ದು, ಇದನ್ನು ನಮ್ಮ ಸಮಿತಿ ತೀವ್ರವಾಗಿ ಖಂಡಿಸುತ್ತದೆ. ಅಲ್ಲದೆ ಇಂತಹ ವಿಕೃತ ಕಾಮುಕರಿಗೆ ಗಲ್ಲು ಶಿಕ್ಷೆ ವಿಧಿಸಿದಾಗ ಮಾತ್ರ ಇಂತಹ ಘಟನೆಗಳು ಪುನರಾವರ್ತನೆಯಾಗುವದಿಲ್ಲ. ಪದೇ ಪದೇ ರಾಜ್ಯದಲ್ಲಿ ಇಂತಹ ಘಟನೆಗಳು ನಡೆಯುತ್ತಿದ್ದರೂ ಈ ವರೆಗೂ ಇಂತಹ ಪ್ರಕರಣಕ್ಕೆ ಶಿಕ್ಷೆಯಾಗಿರುವದು ಕಂಡು ಬರುತ್ತಿಲ್ಲ ಇದರಿಂದ ಇಂತಹ ಕಾಮುಕರಿಗೆ ಇದೊಂದು ಚಟವಾಗಿದ್ದು, ಅಂತಹವರಿಗೆ ಗಲ್ಲು ಮಾತ್ರ, ಪಾಠ ಕಲಿಸುವುದು.

ಬದುಕಿ ಬಾಳಬೇಕಾದ ಬಸಮ್ಮ ಇಂತಹ ವಿಕೃತ ಕಾಮುಕರ ಕೈಯಲ್ಲಿ ಸಿಕ್ಕು ನಿರಂತರ 12 ತಾಸು ಚಿತ್ರಹಿಂಸೆ ಅನುಭವಿಸಿ ನಂತರದಲ್ಲಿ ಅವರ ವಿಕಟ ಕಾಮುಕತನಕ್ಕೆ ಬಲಿಯಾಗಿರುವದು ನಿಜವಾಗಿ ತಲೆ ತಗ್ಗಿಸುವಂತಹ ವಿಷಯವಾಗಿದೆ. ದೇಶಕ್ಕೆ ಸ್ವಾತಂತ್ರ್ಯದ ಅರ್ಥ ಬಿಡಿಸಿದ ಮಹಾತ್ಮಾ ಗಾಂಧಿಜಿಯವರು ನಮ್ಮ ದೇಶದ ಮಹಿಳೆ ರಾತ್ರಿ ವೇಳೆಯಲ್ಲಿ ನಿರ್ಭಯವಾಗಿ ತಿರುಗಾಡಿದಾಗ ಮಾತ್ರ ನಮಗೆ ಸ್ವಾತಂತ್ರ್ಯ ಸಿಕ್ಕ ಹಾಗೆ ಎಂದು ಹೇಳಿದ್ದು, ಇಂದು ಅವರು ಜೀವಂತ ಇದ್ದಲ್ಲಿ ಎದೆ ಒಡೆದುಕೊಂಡು ಮರಣ ಹೊಂದುತ್ತಿದ್ದರು. ಈ ಗ್ರಾಮದಲ್ಲಿ ಕೇವಲ ಎರಡು ಛಲವಾದಿ ಕುಟುಂಬಗಳಿದ್ದು ಈ ಘಟನೆಯಿಂದ ಅವರು ನಲುಗಿ ಹೋಗಿದ್ದಾರೆ. ಮತ್ತು ಭಯದ ನೆರಳಿನಲ್ಲಿ ಬದುಕುತ್ತಿದ್ದಾರೆ. ತಮ್ಮ ಬದುಕು ಹೇಗೆ ಎಂಬ ಪ್ರಶ್ನೆ ಅವರ ಮುಂದೆ ನಿಂತಿದೆ. ಇಂತಹ ಕಠಿಣ ಸಮಯದಲ್ಲಿ ಸರಕಾರ ಅವರ ನೆರವಿಗೆ ಧಾವಿಸಿ ಅವರಿಗೆ ಸಂತ್ವಾನ ಹೇಳುವದರ ಜೊತೆಯಲ್ಲಿ ಹೆಚ್ಚಿನ ಭದ್ರತೆ ಕಲ್ಪಿಸುವದು, ಮತ್ತು ಪರಿಹಾರ ಮೊತ್ತ ನೀಡಿ ಅವರ ಕುಟುಂಬದಲ್ಲಿ ಒಬ್ಬರಿಗಾದರೂ ಸರಕಾರಿ ಹುದ್ದೆಯಲ್ಲಿ ನೇಮಕ ಮಾಡಿಕೊಳ್ಳುವದು ಸರಿತಾಗುತ್ತದೆ. ಈ ಹಿನ್ನಲೆಯಲ್ಲಿ ನಮ್ಮ ಸಮಿತಿ ಈ ಕೆಳಗಿನ ಹಕ್ಕೊತ್ತಾಯಗಳನ್ನು ಕೂಡಲೇ ಈ ಕುಟುಂಬದವರಿಗೆ ಈಡೇರಿಸಲು ಒತ್ತಾಯಿಸಲಾಗಿದೆ. ಈ ಸಂದರ್ಭದಲ್ಲಿ . ಸಮಾಜದ ಹಿರಿಯ ಮುಖಂಡ ನರಸಪ್ಪ ಕಟ್ಟಿಮನಿ. ಅಂಬಣ್ಣ . ಕುಬೇರಪ್ಪ. ಮರಿಯಪ್ಪ. ನಿರುಪಾದಿ ಸೇರಿದಂತೆ ಇತರರು ಉಪಸ್ಥಿತರಿದ್ದರು.

> ನಮ್ಮ ಭಾರತ ದೇಶದಲ್ಲಿ ಮಹಿಳೆಯರನ್ನು ದೈವಕ್ಕೆ ಹೋಲಿಕೆ ಮಾಡುತ್ತಾರೆ. ಎಲ್ಲಿ ಮಹಿಳೆಯರಿಗೆ ಪೂಜನೀಯ ಸ್ಥಾನ ಸಿಗುವದು ಅಲ್ಲಿ ಲಕ್ಷ್ಮೀ ಆವಾಸ ಇರುತ್ತದೆ ಎಂಬ ನಂಬಿಕೆ ನಮ್ಮಲ್ಲಿದ್ದು ಆದಾಗ್ಯೂ ದಲಿತರ ಮಹಿಳೆ, ಬಾಲಕಿಯರ ಮೇಲೆ ಇಂತಹ ಘನ ಘೋರ ಅತ್ಯಚಾರ ಅವರನ್ನು ಕೊಲೆ ಮಾಡುವದು ನಿರಂತರವಾಗಿ ನಡೆಯುತ್ತಿದೆ. ಮಾನವೀಯತೆ, ಧರ್ಮವನ್ನು ಮೈಗೂಡಿಸಿಕೊಂಡಿರುವ ನಮ್ಮ ಸಂವಿಧಾನದಲ್ಲಿ ಇವರಿಗೆ ಗಲ್ಲು ಶಿಕ್ಷೆ ವಿಧಿಸಬಹುದು ಎಂಬುದು ನಮ್ಮ ಆಶಯವಾಗಿದೆ. ಅದು ಆಗದಿದ್ದಲ್ಲಿ ನಮ್ಮ ದೇಶದಿಂದ ಗಡಿಪಾರು ಮಾಡುವದು ಸರಿಯಾದ ಕ್ರಮವಾಗುತ್ತದೆ. -ನರಸಪ್ಪ ಕಟ್ಟಿಮನಿ, ಸಮುದಾಯದ ಹಿರಿಯ ಮುಖಂಡ

> ನಮ್ಮ ರಾಜ್ಯದ ಗೃಹ ಇಲಾಖೆಯವರು ಇಂತಹ ಘಟನೆಗಳ ವಿಷಯ ತಿಳಿದ ಕೂಡಲೇ ಕಾರ್ಯರೂಪಕ್ಕೆ ಇಳಿದು ಕಾಮುಕರನ್ನು ಬಂಧಿಸುವ ಕೆಲಸ ಮೊದಲು ಆಗಬೇಕು, ಇಲ್ಲಿ ಯಾವುದೇ ರಾಜಕೀಯ ಮಾಡದೇ ಯಾರಿಗಾದರೂ ಸರಿ ಅವರ ರಕ್ಷಣೆಗೆ ಧಾವಿಸಬೇಕು. ಆದರೆ ಗೃಹ ಇಲಾಖೆ ಇಲ್ಲಿ ಕೆಲಸ ಮಾಡುತ್ತಿಲ್ಲ ಎಂಬುದು ಮಾತ್ರ ನೋವಿನ ಸಂಗತಿಯಾಗಿದೆ. -ವೀರೇಶ ಹಂಚಿನಾಳ



## ಮಿನಿ ನ್ಯೂಸ್

# ಅಂಬಿಗರ ಚೌಡಯ್ಯ ಮೂರ್ತಿ ವಿರೂಪ: ಮೂವರು ಆರೋಪಿಗಳ ಬಂಧನ

• ಉದಯವಾಹಿನಿ ಕಲಬುರಗಿ

ಶಹಾಬಾದ ತಾಲ್ಲೂಕಿನ ಮುತ್ತಗಾ ಗ್ರಾಮದಲ್ಲಿ ನಿಜಶರಣ ಅಂಬಿಗರ ಚೌಡಯ್ಯನವರ ಮೂರ್ತಿ ವಿರೂಪಗೊಳಿಸಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಮೂವರು ಆರೋಪಿಗಳನ್ನು ಬಂಧಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ ಎಂದು ಎಸ್‌ಪಿ ಅಡ್ಡೂರು ಶ್ರೀನಿವಾಸಲು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅ.10 ರಂದು ಬೆಳಗಿನಜಾವ ಮುತ್ತಗಾ ಗ್ರಾಮದಲ್ಲಿ ಶರಣ ಅಂಬಿಗರ ಚೌಡಯ್ಯನವರ ಮೂರ್ತಿಯನ್ನು ದುಷ್ಕರ್ಮಿಗಳು ವಿರೂಪಗೊಳಿಸಿದ್ದರು. ಈ ಬಗ್ಗೆ ಶಹಾಬಾದ ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಬಂಧಿತ ಮೂವರು ಆರೋಪಿಗಳನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ. ಆರೋಪಿಗಳನ್ನು ಪತ್ತೆ ಹಚ್ಚುವಲ್ಲಿ ಯಶಸ್ವಿಯಾದ ಪೊಲೀಸ್ ಅಧಿಕಾರಿಗಳು ಮತ್ತು ಸಿಬ್ಬಂದಿ ಕಾರ್ಯವನ್ನು ಅವರು ಶ್ಲಾಘಿಸಿದರು.

# ವಿದ್ಯಾರ್ಥಿಗಳ ಭವಿಷ್ಯಕ್ಕೆ ಶಿಕ್ಷಣವೇ ಭದ್ರಬುನಾದಿ: ಶಾಸಕ ಬೇಳೂರು

• ಉದಯವಾಹಿನಿ ಹೊಸನಗರ

ಕಾಲೇಜು ಶಿಕ್ಷಣ ವಿದ್ಯಾರ್ಥಿಗಳ ಭವಿಷ್ಯಕ್ಕೆ ಭದ್ರ ಬುನಾದಿ ಎಂದು ಶಾಸಕ ಗೋಪಾಲಕೃಷ್ಣ ಬೇಳೂರು ಅಭಿಪ್ರಾಯಪಟ್ಟರು. ಇಲ್ಲಿನ ಕೊಡಚಾದ್ರಿ, ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ 2025-26ನೇ ಸಾಲಿನ ಸಾಂಸ್ಕೃತಿಕ, ಕ್ರೀಡಾ, ಎನ್‌ಎಸ್‌ಎಸ್, ರೋವರ್ಸ್, ರೇಂಜರ್ಸ್, ಯುವ ರೆಡ್ ಕ್ರಾಸ್, ಮಹಿಳಾ ಸಬಲೀಕರಣ ಮತ್ತು ಎನ್‌ಸಿಸಿ ಘಟಕಗಳ ಉದ್ಘಾಟನೆ ನೆರವೇರಿಸಿ ಮಾತನಾಡಿದರು.

'ಯುವಕರೇ ದೇಶದ ಶಕ್ತಿಯಾಗಿದ್ದು, ಶಿಕ್ಷಣದಿಂದ ಸಮಗ್ರ ಅಭಿವೃದ್ಧಿ ಸಾಧ್ಯ. ವಿದ್ಯಾರ್ಥಿಗಳಲ್ಲಿ ನಾಯಕತ್ವ ಗುಣ ಬೆಳೆಯಲೂ ಶಿಕ್ಷಣ ಅತಿಮುಖ್ಯ. ಕಾಲೇಜಿನ ಹಳೆ ವಿದ್ಯಾರ್ಥಿಗಳು ತಾವು ಕಲಿತ ಶಾಲೆಗೆ ದೇಣಿಗೆ ನೀಡಿದಲ್ಲಿ ಗುಣಮಟ್ಟದ ಶಿಕ್ಷಣ ನೀಡಲು ಸಹಕಾರಿ ಆಗಲಿದೆ' ಎಂದರು. ತಾಲ್ಲೂಕಿನ ನಿಟ್ಟೂರು ಭಾಗದಿಂದ ಕಾಲೇಜಿಗೆ ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಆಗಮಿಸುತ್ತಿದ್ದು, ಬಸ್ ಸೌಲಭ್ಯ ಕಲ್ಪಿಸುವಂತೆ ಸಿಡಿಸಿ ಅಧ್ಯಕ್ಷ ಮಾಸ್ತಿಕಟ್ಟೆ ಸುಬ್ರಹ್ಮಣ್ಯ ಶಾಸಕರಿಗೆ ಮನವಿ ಮಾಡಿದರು.

# ಮಳೆಗೆ ಬೆಳೆ ನಾಶ: ರೈತ ಕಂಗಾಲು

• ಉದಯವಾಹಿನಿ ಪಡುಬಿದ್ರಿ

ಕಳೆದ ಕೆಲವು ದಿನಗಳಿಂದ ಸುರಿಯುತ್ತಿರುವ ಅಕಾಲಿಕ ಮಳೆ, ಕಿಂಡಿ ಅಣೆಕಟ್ಟು ಮುಚ್ಚಿರುವ ಪರಿಣಾಮ ಹೆಜಮಾಡಿ ಗ್ರಾಮದ ಶಿವನಗರ ಪ್ರದೇಶದಲ್ಲಿ ಬೆಳೆ ಹಾನಿಯಾಗಿದೆ. ಇಲ್ಲಿನ ಮಹಾಲಿಂಗೇಶ್ವರ ದೇವಸ್ಥಾನದ ಬಳಿಯ ನಿವಾಸಿ ಜಯಲಕ್ಷ್ಮೀ ಶೆಟ್ಟಿ ಅವರ ಎರಡೂವರೆ ಎಕರೆ ಜಮೀನಿನಲ್ಲಿ ಸುದೀಶ್ ಶೆಟ್ಟಿ ಅವರು 3 ತಿಂಗಳ ಹಿಂದೆ ಭತ್ತ ಬೆಳೆದಿದ್ದರು. ಕಟಾವಿಗೆ ಇನ್ನೇನು ಕೆಲವೇ ದಿನ ಬಾಕಿ ಇರುವಾಗ ನಿರಂತರ ಮಳೆಯಿಂದ ಗದ್ದೆಯಲ್ಲಿ ನೀರು ಹರಿಯುತ್ತಿದೆ. ಇಲ್ಲಿ ಪಕ್ಕದಲ್ಲಿ ಇರುವ ಕಿಂಡಿ ಅಣೆಕಟ್ಟುವಿಗೆ ಹಲಗೆ ಇಟ್ಟು ಮುಚ್ಚಿರುವುದರಿಂದ ಈ ಭಾಗದ ರೈತರಿಗೆ ಸಮಸ್ಯೆಯಾಗುತ್ತಿದ್ದು, ಬೆಳೆ ಸಂಪೂರ್ಣ ಹಾನಿಗೊಳಗಾಗಿದೆ ಎನ್ನುತ್ತಾರೆ ಈ ಭಾಗದ ಕೃಷಿಕರು.

ನನಗೆ 82 ವರ್ಷ ವಯಸ್ಸು. ಹಿಂದೆ ನಾವೇ ನಾಟಿ ಮಾಡುತ್ತಿದ್ದೆವು. ಈಗ ಸಾಧ್ಯವಾಗದ ಕಾರಣ ಸುದೀಶ್ ಶೆಟ್ಟಿ ಅವರಿಗೆ ಗದ್ದೆ ನೀಡಿದ್ದೆ. ಕಿಂಡಿ ಅಣೆಕಟ್ಟು ಮುಚ್ಚಿರುವುದರಿಂದ ನೀರು ನಿಂತು ಬೆಳೆ ನಾಶವಾಗಿದೆ. ಪಂಚಾಯಿತಿಗೆ ವಿಷಯ ತಿಳಿಸಿದ್ದೇವೆ. ಮನೆಯ ಸುತ್ತಮುತ್ತಲೂ ನೀರು ತುಂಬಿಕೊಂಡಿದೆ ಎಂದು ಜಯಲಕ್ಷ್ಮೀ ಶೆಟ್ಟಿ ಕಣ್ಣೀರಿಟ್ಟರು.

ಮೂರು ತಿಂಗಳ ಹಿಂದೆ ಲಕ್ಷಾಂತರ ರೂಪಾಯಿ ವೆಚ್ಚ ಮಾಡಿ ಏಳು ಎಕರೆ ಪ್ರದೇಶದಲ್ಲಿ ಬೆಳೆ ಬೆಳೆದಿದ್ದೆ. ಕಟಾವಿನ ಸನ್ನಿಹಿತ ಸಮಯದಲ್ಲಿ ಮಳೆ ಬಂದು ಹಾನಿಯಾಗಿದೆ. ಕಿಂಡಿ ಅಣೆಕಟ್ಟು ತೆರೆಯದ ಕಾರಣ ನೀರು ಹೊರಹೋಗದಿರುವುದು ಪ್ರಮುಖ ಸಮಸ್ಯೆ. ಈ ಬಗ್ಗೆ ಗ್ರಾಮ ಪಂಚಾಯಿತಿ ಗಮನಕ್ಕೆ ತಂದರೂ ಸ್ಪಂದನೆ ದೊರೆತಿಲ್ಲ. ಶೀಘ್ರ ಈ ಬಗ್ಗೆ ಕ್ರಮ ಕೈಗೊಂಡು ಕಿಂಡಿ ಅಣೆಕಟ್ಟು ತೆರವುಗೊಳಿಸಬೇಕು' ಎಂದು ಸುದೀಶ್ ಶೆಟ್ಟಿ ಆಗ್ರಹಿಸಿದ್ದಾರೆ.

# ಡಿಜಿಟಲ್ ಅರೆಸ್ಟ್ : ಪೊಲೀಸ್ ಅಧಿಕಾರಿ ಹೆಸರಲ್ಲಿ 55 ಲಕ್ಷ ವಂಚನೆ

• ಉದಯವಾಹಿನಿ ಹುಬ್ಬಳ್ಳಿ

ಇಲ್ಲಿನ ಭವಾನಿ ನಗರದ ವ್ಯಕ್ತಿಯೊಬ್ಬರಿಗೆ ಮುಂಬೈ ಪೊಲೀಸ್ ಹೆಸರಲ್ಲಿ ವಾಟ್ಸ್‌ಆ್ಯಪ್ ಕರೆ ಮಾಡಿದ ಅಪರಿಚಿತ ವ್ಯಕ್ತಿಯೊಬ್ಬ, ಅಕ್ರಮ ಹಣ ವರ್ಗಾವಣೆಯ ಆರೋಪದಲ್ಲಿ ಡಿಜಿಟಲ್ ಅರೆಸ್ಟ್ ಮಾಡುವುದಾಗಿ ಬೆದರಿಸಿ ವಿವಿಧ ಖಾತೆಗಳಿಂದ ರೂ.55,39,950 ವರ್ಗಾಯಿಸಿಕೊಂಡು ವಂಚಿಸಿದ್ದಾನೆ.

ಎಸ್.ಎಸ್. ಪೂಜಾರ ವಂಚನೆಗೊಳದವರು. ಇವರ ಮೊಬೈಲ್ ಸಂಖ್ಯೆಗೆ ಕರೆ ಮಾಡಿದ ವ್ಯಕ್ತಿ, ಅಕ್ರಮ ಹಣ ವರ್ಗಾವಣೆಯಲ್ಲಿ ನಿಮ್ಮ ಹೆಸರು ಕೇಳಿಬಂದಿದ್ದು, ಖಾತೆಯಿಂದ ದೇಶದ್ರೋಹಿಗಳಿಗೆ ಹಣ ಸಂದಾಯವಾಗಿದೆ ಎಂದು ಹೇಳಿ ನಕಲಿ ದಾಖಲೆ ತೋರಿಸಿ ಬೆದರಿಸಿದ್ದಾರೆ. ಈಗಾಗಲೇ 135 ಜನರ ಬಂಧಿಸಿದ್ದು. ನಿಮ್ಮನ್ನು ಹಾಗೂ ನಿಮ್ಮ ಕುಟುಂಬದವರನ್ನು ಬಂಧಿಸಲು ಸಿಬಿಐ ವಾರೆಂಟ್ ಇದ್ದು. ಡಿಜಿಟಲ್ ಅರೆಸ್ಟ್ ಮಾಡುವುದಾಗಿ ಹೆದರಿಸಿ ಮೊದಲು ರೂ. 39,950 ವರ್ಗಾಯಿಸಿಕೊಂಡಿದ್ದಾನೆ. ಬಳಿಕ ವಿವಿಧ ಬ್ಯಾಂಕ್‌ನಲ್ಲಿದ್ದ ರೂ.55,39,950 ವರ್ಗಾಯಿಸಿಕೊಂಡು ವಂಚಿಸಲಾಗಿದೆ.

# ಓವರ್ ಲೋಡ್: ಮರಳು ಸಾಗಣೆ ನಾಲ್ಕು ಲಾರಿಗಳ ವಶ

• ಉದಯವಾಹಿನಿ ಹೂವಿನಹಡಗಲಿ

ತಾಲ್ಲೂಕಿನ ಹಡಗಲಿ-ಇಟ್ಟಿಗಿ ರಸ್ತೆಯಲ್ಲಿ ನಿಯಮ ಉಲ್ಲಂಘಿಸಿ ಮರಳು ಸಾಗಣೆ ಮಾಡುತ್ತಿದ್ದ ನಾಲ್ಕು ಟಿಪ್ಪರ್ ಲಾರಿಗಳನ್ನು ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ವಶಪಡಿಸಿಕೊಂಡಿದ್ದಾರೆ.



☛ ಉದಯವಾಹಿನಿ ಚಿತ್ರ

ಅಲಬೂರು ಸ್ಟಾಕ್ ಯಾರ್ಡ್‌ನಿಂದ ಮರಳು ಸಾಗಣೆ ಮಾಡುತ್ತಿದ್ದ ಟಿಪ್ಪರ್‌ಗಳನ್ನು ಅಧಿಕಾರಿಗಳು ತಡೆದು ಪರಿಶೀಲಿಸಿದಾಗ ಸಾಮರ್ಥ್ಯ ಮೀರಿ ಮರಳು ಸಾಗಣೆ ಮಾಡುತ್ತಿದ್ದುದು ಕಂಡು ಬಂದಿದೆ.

ಹಾವೇರಿ, ಗದಗ, ಹುಬ್ಬಳ್ಳಿಗೆ ಮರಳು ಸಾಗಣೆಯ ಪರ್ಮಿಟ್ ಇರುವ ನಾಲ್ಕು ಲಾರಿಗಳನ್ನು ಜಪ್ತಿ ಮಾಡಿ ಪಟ್ಟಣ ಪೊಲೀಸ್ ಠಾಣೆ ವಶಕ್ಕೆ ಒಪ್ಪಿಸಲಾಗಿದೆ. ಖಚಿತ ಮಾಹಿತಿ ಆಧರಿಸಿ ಪ್ರಾದೇಶಿಕ ಸಾರಿಗೆ ಅಧಿಕಾರಿ ದಾಮೋದರ ಮಾರ್ಗದರ್ಶನದಲ್ಲಿ ದಾಳಿ ನಡೆಸಲಾಗಿದೆ ಎಂದು ಮೋಟಾರು ವಾಹನ ನಿರೀಕ್ಷಕ ಮಹ್ಮದ್ ಷರೀಫ್ ಶೇಖ್ ಹೇಳಿದರು. ಸಿಬ್ಬಂದಿ ಡಿ.ಪ್ರಭು ಇದ್ದರು.

## ದಿನ ಭವಿಷ್ಯ

| | | |
|---|---|---|
| ರಾಹುಕಾಲ | ಸಾಯಂಕಾಲ | 04:30 ರಿಂದ 06:00 |
| ಗುಳಿಕ ಕಾಲ | ಮಧ್ಯಾಹ್ನ | 03:00 ರಿಂದ 04:30 |
| ಯಮಗಂಡ ಕಾಲ | ಮಧ್ಯಾಹ್ನ | 12:00 ರಿಂದ 01:30 |

**ಮೇಷ** ಕೆಲಸದ ಒತ್ತಡ ನಿಮ್ಮ ಮನಸ್ಸನ್ನು ಆಕ್ರಮಿಸಿದ್ದರೂ ಸಹ ಪ್ರೀತಿಪಾತ್ರರು ನಿಮಗೆ ಪ್ರಣಯದ ಅಪಾರ ಸಂತೋಷವನ್ನು ತರುತ್ತಾರೆ ಜನರೊಂದಿಗೆ ಮಾತನಾಡುವಲ್ಲಿ ಅಮೂಲ್ಯವಾದ ಸಮಯವನ್ನು ಹಾಳುಮಾಡಬಹುದು.

**ವೃಷಭ** ನಿಮ್ಮ ಪ್ರೇಮ ಜೀವನ ಒಂದು ಸುಂದರ ತಿರುವನ್ನು ತೆಗೆದುಕೊಳ್ಳುತ್ತದೆ. ನೀವು ಪ್ರೀತಿಯಲ್ಲಿರುವ ಅದ್ಭುತ ಭಾವನೆ ಹೊಂದುತ್ತೀರಿ. ಧಾರ್ಮಿಕ ಕೆಲಸಗಳ್ಳಿ ನಿಮ್ಮ ಸಮಯವನ್ನು ಕಳೆಯಲು ಪರಿಗಣಿಸುತ್ತೀರಿ.

**ಮಿಥುನ** ಮೋಜಿಗಾಗಿ ಹೊರಹೋಗುವವರಿಗೆ ಸಂತೋಷ ಮತ್ತು ಆನಂದವನ್ನು ಹಂಚಿಕೊಳ್ಳಿ. ಕುಟುಂಬದ ಯಾವುದೇ ಸದಸ್ಯರ ಕಾಯಿಲೆ ಬೀಳುವ ಕಾರಣದಿಂದಾಗಿ ನೀವು ಆರ್ಥಿಕ ತೊಂದರೆಗೊಳಗಾಗಬಹುದು.

**ಕರ್ಕಾಟಕ** ನಿಮ್ಮ ಶಕ್ತಿಯ ಮಟ್ಟ ಹೆಚ್ಚಿರುತ್ತದೆ. ರಿಯಲ್ ಎಸ್ಟೇಟ್ ನಲ್ಲಿ ಹೂಡಿಕೆ ಲಾಭದಾಯಕವಾಗಬಹುದು. ನಿಮ್ಮ ಸಂಗಾತಿ ಬೆಂಬಲ ನೀಡುತ್ತಾರೆ ಹಾಗೂ ಸಹಾಯ ಮಾಡುತ್ತಾರೆ.

**ಸಿಂಹ** ಮನೋಬಲದ ನಿಮ್ಮ ಕೊರತೆ ನಿಮ್ಮನ್ನು ಭಾವನಾತ್ಮಕ ಮತ್ತು ಮಾನಸಿಕ ವರ್ತನೆಯ ಬಲಿಪಶುವಾಗಿ ಮಾಡಬಹುದು. ತಾತ್ಕಾಲಿಕ ಸಾಲಕ್ಕಾಗಿ ನಿಮ್ಮ ಬಳಿ ಬರುವವರನ್ನು ನಿರ್ಲಕ್ಷಿಸಿ.

**ಕನ್ಯಾ** ಆರೋಗ್ಯ ಪರಿಪೂರ್ಣವಾಗಿರುತ್ತದೆ. ಹಣವನ್ನು ಯೋಚಿಸದೆ ಮತ್ತು ಪರಿಗಣಿಸದೆ ಖರ್ಚುಮಾಡುವುದು, ನಿಮಗೆ ಎಷ್ಟು ನಷ್ಟ ಮಾಡಬಹುದು ಎಂಬುದು ಇಂದು ನಿಮಗೆ ಅರ್ಥವಾಗಬಹುದು.

**ತುಲಾ** ಅನಗತ್ಯ ಆಲೋಚನೆಗಳು ನಿಮ್ಮ ಮನಸ್ಸನ್ನು ಆವರಿಸಬಹುದು. ಖಾಲಿ ಮೆದುಳು ದೆವ್ವಗಳ ಕಾರ್ಖಾನೆಯಾದ್ದರಿಂದ ದೈಹಿಕ ವ್ಯಾಯಾಮದಲ್ಲಿ ನಿಮ್ಮನ್ನು ತೊಡಗಿಸಿಕೊಳ್ಳಲು ಪ್ರಯತ್ನಿಸಿ.

**ವೃಶ್ಚಿಕ** ಇಂದಿನ ಮನರಂಜನೆ ಕ್ರೀಡಾ ಚಟುವಟಿಕೆಗಳು ಮತ್ತು ಹೊರಾಂಗಣ ಕಾರ್ಯಕ್ರಮಗಳನ್ನು ಒಳಗೊಂಡಿರಬೇಕು. ಹಣಕಾಸು ಸ್ಥಿತಿ ಊಹಾ ಪೋಹ ಅಥವಾ ಅನಿರೀಕ್ಷಿತ ಲಾಭದ ಮೂಲಕ ಸುಧಾರಿಸುತ್ತವೆ.

**ಧನಸ್ಸು** ನಿಮ್ಮ ದೈಹಿಕ ರಚನೆಯನ್ನು ಕಾಯ್ದುಕೊಳ್ಳಲು ನೆರವಾಗುವ ಕೆಲವು ಕ್ರೀಡಾ ಚಟುವಟಿಕೆಗಳನ್ನು ನೀವು ಆನಂದಿಸಬಹುದು. ಆಲೋಚಿಸದೆ ನೀವು ಯಾರಿಗೂ ತಮ್ಮ ಹಣವನ್ನು ಕೊಡಬಾರದು.

**ಮಕರ** ಆರೋಗ್ಯ ಪರಿಪೂರ್ಣವಾಗಿರುತ್ತದೆ. ಇಂದು ನೀವು ನಿಮ್ಮ ಮಕ್ಕಳ ಕಾರಣದಿಂದ ಆರ್ಥಿಕ ಲಬಹವನ್ನು ಪಡೆಯುವ ಸಾಧ್ಯತೆ ಕಂಡು ಬರುತ್ತಿದೆ. ಇದರಿಂದ ನೀವು ತುಂಬಾ ಸಂತೋಷಪಡುತ್ತೀರಿ.

**ಕುಂಭ** ಬೆಂಬಲ ನೀಡುವ ಸ್ನೇಹಿತರು ನಿಮ್ಮನ್ನು ಸಂತೋಷವಾಗಿರಿಸುತ್ತಾರೆ. ಈ ರಾಶಿಚಕ್ರದ ಕೆಲವರು ಭೂಮಿಗೆ ಸಂಬಂಧಿಸಿದ ಯಾವುದೇ ವಿಷಯಕ್ಕೆ ಹಣವನ್ನು ಖರ್ಚು ಮಾಡಬೇಕಾಗಬಹುದು.

**ಮೀನ** ಮದುವೆ ಮೊದಲೆಂದೂ ಇಂದಿಗಿಂತ ಹೆಚ್ಚು ಅದ್ಭುತವಾಗಿರಲಿಲ್ಲ. ಹೃದಯದ ಮಾತುಗಳು ಬಾಯಿಯಲ್ಲಿ ಬರುವುದು ಸಹ ಅಗತ್ಯ, ಇದರಿಂದ ಪ್ರೀತಿಯಲ್ಲಿ ಆಳ ಬರುತ್ತದೆ.

### ನಗರವು ಪ್ರವಾಸಿ ತಾಣಗಳಿಗೆ ಹೆಸರುವಾಸಿಯಾಗಿದೆ, ಆದರೆ ದಿನದಿಂದ ದಿನಕ್ಕೆ ತನ್ನ ಸೌಂದರ್ಯ ಕಳೆದುಕೊಳ್ಳುತ್ತಿದೆ

# ಬೀದಿ ಬದಿ ಸ್ವಚ್ಛತೆಗೆ ಆದ್ಯತೆ ನೀಡಿ: ಸಾರ್ವಜನಿಕರ ಆಕ್ರೋಶ

• ಉದಯವಾಹಿನಿ ರಾಣೆಬೆನ್ನೂರು

ನಗರವು ಪ್ರವಾಸಿ ತಾಣಗಳಿಗೆ ಹೆಸರುವಾಸಿಯಾಗಿದೆ. ಆದರೆ ದಿನದಿಂದ ದಿನಕ್ಕೆ ತನ್ನ ಸೌಂದರ್ಯ ಕಳೆದುಕೊಳ್ಳುತ್ತಿದೆ. ಇದಕ್ಕೆ ಪ್ರಮುಖ ಕಾರಣ ಯುಜಿಡಿ ಮತ್ತು 24/7 ಕಾಮಗಾರಿಯಿಂದ ಹದಗೆಟ್ಟ ರಸ್ತೆಗಳು, ಸ್ವಚ್ಛತೆ ಕಾಣದ ಚರಂಡಿಗಳು, ಬೀದಿ ದೀಪ, ಎಲ್ಲೆಂದರಲ್ಲಿ ಕಸ, ಅವ್ಯವಸ್ಥೆಯ ಆಗರವಾಗಿದೆ.

ಕೆಲವೆಡೆ ಸರಿಯಾದ ಬೀದಿ ದೀಪದ ವ್ಯವಸ್ಥೆ ಇಲ್ಲ. ಶಾಂತಿ ನಗರ, ಕೊಪ್ಪದ ಲೇಔಟ್ ಕ್ರಾಸ್, ಸಿದ್ದಾರೂಢನಗರ, ಶಿವಾಜಿನಗರ, ಶ್ರೀರಾಮನಗರ ಅಂಬೇಡ್ಕರ್ ಭವನದ ಹತ್ತಿರ, ಕಂಬಳಿ ಲೇ ಔಟ್, ಬಸವಾ ಪಾರ್ಕ್, ಅಂಜನೇಯ ಬಡಾವಣೆ, ಮಾರುತಿ ನಗರ ಹೀಗೆ ಹಲವೆಡೆ ಸರಿಯಾದ ವ್ಯವಸ್ಥೆ ಇಲ್ಲದಿರುವುದು ಕಂಡು ಬಂದಿದೆ. ಆದರೆ ಚುನಾಯಿತ ಪ್ರತಿನಿಧಿಗಳು ತಮಗೂ ಅದಕ್ಕೂ ಸಂಬಂಧವಿಲ್ಲ ಎಂಬಂತೆ ಇರುವುದು ಸಾರ್ವಜನಿಕರ ಆಕ್ರೋಶಕ್ಕೆ ಕಾರಣವಾಗಿದೆ.

ನಗರಸಭೆಯು ಅಮೃತ ಸಿಟಿ ಯೋಜನೆಗೆ ಒಳಪಟ್ಟರೂ ಸ್ವಚ್ಛತೆ ಕಾಪಾಡುವಲ್ಲಿ ಎಲ್ಲೆಂದರಲ್ಲಿ ಕಸ ಎಸೆಯುವುದನ್ನು ತಡೆಗಟ್ಟಲು ನಗರಸಭೆ ದಂಡಾಸ್ತ್ರ ಪ್ರಯೋಗಿಸುತ್ತಿದೆ. ಆದರೆ, ರಸ್ತೆ ಬದಿ, ಚರಂಡಿ, ದೊಡ್ಡ ಹಳೇ ಗುಂಡಿಗಳಲ್ಲಿ ಕಸ ಎಸೆಯುವುದಕ್ಕೆ ಮಾತ್ರ ಕಡಿವಾಣ ಬಿದ್ದಿಲ್ಲ. ನಗರದ ಪ್ರಮುಖ ರಸ್ತೆಗಳ ಬದಿ, ಕುರುಬಗೇರಿ, ಸಿದ್ದೇಶ್ವರ ನಗರ, ಖಾಲಿ ನಿವೇಶನ, ಹಲಗೇರಿ ಬೈಪಾಸ್ ರಸ್ತೆ, ಗಣೇಶ ನಗರ ಸಾಮಿಲ್ ಬಳಿ, ರಸ್ತೆ, ಕೋರ್ಟ್ ಹಿಂಭಾಗ ಕುರಿ ಉಣ್ಣೆ ಕಚೇರಿ, ಹುಣಸೀಕಟ್ಟಿ ರಸ್ತೆ, ಹಳೇ ಪಿ.ಬಿ.ರಸ್ತೆ ಎಂಜಿನಿಯರಿಂಗ್ ಕಾಲೇಜು ಸಮೀಪ, ಸಾರ್ವಜನಿಕ ಆಸ್ಪತ್ರೆ ಸಮೀಪದ ಹಾಳು ಬಾವಿ, ಜಾನುವಾರು ಮಾರುಕಟ್ಟೆ ಬಳಿ ಹೆದ್ದಾರಿ ಬದಿಗೆ ಸೇರಿದಂತೆ ಹಲವೆಡೆ ಕಸದ ರಾಶಿ ಕಣ್ಣಿಗೆ ರಾಚುತ್ತಿದೆ.

ಹೌಸಿಂಗ್ ಕಾಲೋನಿ ಮೊದಲ ಹಂತದ ರಸ್ತೆಗಳು ಹದಗೆಟ್ಟಿವೆ. ರಸ್ತೆಯ ಕಲ್ಲು ಕಿತ್ತು ಅಡ್ಡಾಡಲು ಅನಾನುಕೂಲವಾಗಿದೆ. ಖಾಲಿ ನಿವೇಶನಗಳಲ್ಲಿ ಜಾಲಿ ಮುಳ್ಳಿನ ಕಂಟಿಗಳು ಬೆಳೆದಿವೆ. ಬೀದಿ ದೀಪ ಹಾಳಾಗಿವೆ. ಡಿವೈಡರ್ ರಸ್ತೆಯಲ್ಲಿನ ಬೀದಿ ದೀಪ ಮುರಿದು ಬಿದ್ದಿವೆ. ಈ ಬಗ್ಗೆ ನಗರಸಭೆಗೆ ಮನವಿ ಮಾಡಿದರೂ ಏನೂ ಪ್ರಯೋಜನವಾಗಿಲ್ಲ ಎನ್ನುತ್ತಾರೆ ಬಸವರಾಜ ಬಡಿಗೇರ,

ಹಳೇ ಮಾಗೋಡ ಡಿವೈಡರ್ ರಸ್ತೆ ಹಾಳಾಗಿ ಅನೇಕ ವರ್ಷಗಳು ಗತಿಸಿದೆ. ಗಡಾದ ಆಸ್ಪತ್ರೆಯಿಂದ ಬೆಳವಿಗಿ ಆಸ್ಪತ್ರೆವರೆಗೆ, ಪ್ಲೇಯರ್ಸ್ ಪಾರ್ಕ್‌ವರೆಗೆ ದೊಡ್ಡ ದೊಡ್ಡ ಗುಂಡಿಗಳು ಬಿದ್ದಿವೆ. ನಗರಸಭೆಯಿಂದ ರಾಷ್ಟ್ರೋತ್ಥಾನ ಯೋಜನೆ ಅಡಿಯಲ್ಲಿ ಕಾಮಗಾರಿ ಕೈಗೊಂಡಿದ್ದು, ಗುತ್ತಿಗೆದಾರ ರಸ್ತೆ ಕಿತ್ತೆಸೆದು ಹೋಗಿ ಕೆಲಸ ನಿಂತು ಒಂದು ವರ್ಷ ಕಳೆದರೂ ಇತ್ತ ಕಡೆ ಗಮನ ಹರಿಸುತ್ತಿಲ್ಲ. ದಿನಾಲು ಬೈಕ್, ಸೈಕಲ್ ದುರಸ್ತಿಗೆ ಬರುತ್ತವೆ. ವಾಹನ ಟೈರ್‌ಗಳಿಗೆ ಚೂಪಾದ ಜಲ್ಲಿ ಕಲ್ಲುಗಳು ಚುಚ್ಚಿ ಟೈರ್ ಒಡೆದು ಹಾಳಾಗಿದ್ದರಿಂದ ಸಾರ್ವಜನಿಕರು ನಗರಸಭೆಗೆ ಹಿಡಿಶಾಪ ಹಾಕುವಂತಾಗಿದೆ. ನಸುಕಿನ ಜಾವ ಪತ್ರಿಕೆ, ಹಾಲು ಹಾಕಲು ಹುಡುಗರು ಈ ಏರಿಯಾಕ್ಕೆ ಹೋಗಲು ಮುಂದಾಗುತ್ತಿಲ್ಲ. ಈಗಲಾದರೂ ನಗರ ಸಭೆಯ ಅಧಿಕಾರಿಗಳು ಈ ಕಡೆ ಗಮನಹರಿಸುತ್ತಾರೆಯೇ ಎಂಬುದನ್ನು ಕಾದು ನೋಡಬೇಕಾಗಿದೆ. ಇದೇ ರಸ್ತೆಯಲ್ಲಿ ಶಾಲೆ, ಆಸ್ಪತ್ರೆ, ಬಿಇಒ ಕಚೇರಿ, ಅಯ್ಯಪ್ಪ ಸ್ವಾಮಿ ದೇವಸ್ಥಾನದ ಕಡೆ ಏರಿಯಾಕ್ಕೆ ಹೋಗುವವರು ನಗರಸಭೆಗೆ ಹಿಡಿ ಶಾಪ ಹಾಕುತ್ತಿದ್ದಾರೆ. ರಾತ್ರಿ ಹೊತ್ತು ಬೈಕ್ ಸವಾರರು ಬಿದ್ದು ಕೈಕಾಲು ಗಾಯಮಾಡಿಕೊಂಡಿದ್ದಾರೆ. ಅನೇಕ ಇಲ್ಲಿನ ಮೆಡ್ ಪ್ಲಸ್ ಕ್ರಾಸ್‌ನಿಂದ ಗೌರಿಶಂಕರದ ದೇವಸ್ಥಾನದ ವರೆಗಿನ ರಸ್ತೆಯಲ್ಲಿ ನಲ್ಲಿ ಹಾಕಲು ರಸ್ತೆ ಅಗೆದ ತೆಗ್ಗುಗಳು ಬಿದ್ದಿದ್ದು ಅದರಲ್ಲಿಯೇ ಅಡ್ಡಾಡುವಂತಾಗಿದೆ ಎನ್ನುತ್ತಾರೆ ಸಂಕಪ್ಪ ಮಾರನಾಳ.

ಮಾಗೋಡ ಡಿವೈಡರ್ ರಸ್ತೆ, ವಿಕಾಸ ನಗರದ ಶರಣ ಬಸವೇಶ್ವರ ದೇವಸ್ಥಾನ, ವಿನಾಯಕ ನಗರದ ಪೂರ್ವ ಬಡಾವಣೆಯ ಶಾಸಕ ಮಾದರಿ ಶಾಲೆ ಸೇರಿದಂತೆ ಅಲ್ಲಲ್ಲಿ ಜಲ್ಲಿಕಲ್ಲುಗಳನ್ನು ಹಾಕಿ ಸರಿಪಡಿಸುವ ವ್ಯವಸ್ಥೆ ಮಾಡಿದರೂ ಮಳೆಗೆ ಎಲ್ಲಾ ಕೊಚ್ಚಿಕೊಂಡು ಹೋಗಿದೆ.





ಉದಯವಾಹಿನಿ ಚಿತ್ರ

**ರಸ್ತೆ ಬದಿ ಕಸ ಹಾಕುವದನ್ನು ನಿಯಂತ್ರಿಸಲು ದಂಡ**

ಕಂಡ ಕಂಡ ಕಡೆಗೆ ಕಸ ಹಾಕುವದನ್ನು ತಡೆಯಲು ಪೌರಾಯುಕ್ತರು, ಪರಿಸರ ಎಂಜಿನಿಯರ್ ಹಾಗೂ ಆರೋಗ್ಯ ನಿರೀಕ್ಷಕರು ನಗರದಲ್ಲಿ ಕಸ ಎಸೆಯುವವರ ಮೇಲೆ ನಿಗಾವಹಿಸುತ್ತಿದ್ದು, ಸ್ಥಳದಲ್ಲಿಯೇ ದಂಡ ವಿಧಿಸುತ್ತಿದ್ದಾರೆ. ರಸ್ತೆ ಬದಿ ಕಸ ಹಾಕುವದನ್ನು ನಿಯಂತ್ರಿಸಲು ನಗರಸಭೆ ದಂಡ ವಿಧಿಸುತ್ತಿರುವುದು ಸ್ವಾಗತಾರ್ಹ. ಆದರೆ, ಕಸದ ಗಾಡಿ ಎರಡು ಮೂರು ದಿನಕ್ಕೊಮ್ಮೆ ಬರುತ್ತದೆ. ಹಸಿ ಕಸ ಎರಡು ದಿನ ಇಟ್ಟರೆ ಕೊಳೆತು ವಾಸನೆ ಬರುತ್ತದೆ ಎಂದು ಸಾರ್ವಜನಿಕರು ಖಾಲಿ ನಿವೇಶನಗಳಲ್ಲಿ ಕಸ ಹಾಕುತ್ತಿದ್ದಾರೆ. ನಗರಸಭೆಯಿಂದ ಮನೆ ಮನೆ ಕಸ ಸಂಗ್ರಹ ಕಾರ್ಯ ಸಮರ್ಪಕವಾಗಿ ಆಗುತ್ತಿಲ್ಲ. ಅದನ್ನು ಸರಿಪಡಿಸದೇ ದಂಡ ವಿಧಿಸುವುದು ಎಷ್ಟರ ಮಟ್ಟಿಗೆ ಸರಿ ಎಂಬುದು ಸಾರ್ವಜನಿಕರ ಪ್ರಶ್ನೆ.

**ಚರಂಡಿ ತುಂಬಿ ಮಳೆ ನೀರು, ತ್ಯಾಜ್ಯ ರಸ್ತೆ ಮೇಲೆ ಹರಿಯುತ್ತದೆ**

ರಸ್ತೆ ಬದಿಗೆ ಆಳೆತ್ತರ ಪೊದೆ, ಜಾಲಿ ಬೆಳೆದು ನಿಂತಿದೆ. ಹಳೇ ಅಂತರವಳ್ಳಿ ರಸ್ತೆಯ ದೇವಿಕಾ ಸ್ಕೂಲ್ ಸಮೀಪದ ರಸ್ತೆಯಲ್ಲಿ ಚರಂಡಿ ತುಂಬಿ ಮಳೆ ನೀರು, ತ್ಯಾಜ್ಯ ರಸ್ತೆ ಮೇಲೆ ಹರಿಯುತ್ತದೆ. ಚರಂಡಿಯ ಪ್ಲಾಸ್ಟಿಕ್ ಚೀಲ, ಕುಡಿದು ಬಿಸಾಕಿದ ನೀರಿನ ಬಾಟಲ್, ಸುತ್ತ ಮನೆಯವರು ಹಾಕಿದ ಕಸ ರಸ್ತೆ ಮೇಲೆ ಬಿದ್ದಿರುತ್ತದೆ. ಮಳೆ ನಿಂತ ಮೇಲೆ ಶಾಲಾ ಮಕ್ಕಳು ಕಸದಲ್ಲಿಯೇ ಅಡ್ಡಾಡುವಂತಾಗಿದೆ. ಕಲುಷಿತ ಚರಂಡಿ ವ್ಯವಸ್ಥೆಯಿಂದ ಎಲ್ಲಿ ನೋಡಿದರೂ ಡೆಂಗಿ, ಚಿಕುನ್ ಗುನ್ಯಾ, ಮಲೇರಿಯಾ ಹೀಗೆ ಹತ್ತು ಹಲವು ಕಾಯಿಲೆ ಹರಡುವ ಭೀತಿ ಉಂಟಾಗಿದೆ ಎನ್ನುತ್ತಾರೆ ಸುರೇಶ ಎ.

**ಸ್ವಚ್ಛತೆ ಕಾಣದ ಚರಂಡಿಗಳು**

## ಬೇಡಿಕೆ ಈಡೇರಿಸದಿದ್ದರೆ ಅಧಿವೇಶನದಲ್ಲಿ ಉಪವಾಸ ಸತ್ಯಾಗ್ರಹ

• ಉದಯವಾಹಿನಿ ಬೀದರ್

ನಮ್ಮ ಬೇಡಿಕೆ ಈಡೇರಿಸದಿದ್ದರೆ ಬೆಳಗಾವಿ ಚಳಿಗಾಲ ಅಧಿವೇಶನದಲ್ಲಿ ಅನಿರ್ದಿಷ್ಟಾವಧಿ ಉಪವಾಸ ಸತ್ಯಾಗ್ರಹ ಹಮ್ಮಿಕೊಳ್ಳಲಾಗುತ್ತದೆ ಎಂದು ಅತಿಥಿ ಶಿಕ್ಷಕ ಹಾಗೂ ಉಪನ್ಯಾಸಕರ ಸಂಘದ ರಾಜ್ಯಾಧ್ಯಕ್ಷ ಸಂಗಮೇಶ ಚಿದ್ರೆ ತಿಳಿಸಿದರು.

ಸಮಾಜ ಕಲ್ಯಾಣ ಇಲಾಖೆಯ ಅಂಗ ಸಂಸ್ಥೆಯಾದ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆ ಸಂಘದ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ವಸತಿ ಶಾಲೆಗಳಾದ ಮೊರಾರ್ಜಿ ದೇಸಾಯಿ, ಕಿತ್ತೂರು ರಾಣಿ ಚೆನ್ನಮ್ಮ, ಡಾ.ಬಿ.ಆರ್.ಅಂಬೇಡ್ಕರ್, ಆಟಲ ಬಿಹಾರಿ ವಾಜಪೇಯಿ, ಇಂದಿರಾಗಾಂಧಿ ಇತ್ಯಾದಿ ವಸತಿ ಶಾಲೆಗಳಲ್ಲಿ ಹಲವು ವರ್ಷಗಳಿಂದ ದುಡಿಯುತ್ತಿರುವ ಅತಿಥಿ ಶಿಕ್ಷಕರ ಹಾಗೂ ಉಪನ್ಯಾಸಕರುಗಳ ಜೀವನ ಬಹಳ ಸಂಕಷ್ಟದಲ್ಲಿದೆ. 6 ರಿಂದ 10 ನೇ ತರಗತಿಯ ವರೆಗೆ ಪ್ರತಿ ದಿನ ಐದು ತರಗತಿಗಳಿಗೆ ಪಾಠ ಮಾಡುವುದಲ್ಲದೆ, ವಿಶೇಷ ತರಗತಿಗಳು ಹಾಗೂ ಶಾಲಾ ಮುಕ್ತಾಯದ ನಂತರವೂ ಪಾಠ ಮಾಡಲಾಗುತ್ತಿದೆ. ಖಾಯಂ ಶಿಕ್ಷಕರಿಗೆ 2% ತುಟ್ಟಿ ಭತ್ಯೆ ಹೆಚ್ಚಳ ಮಾಡಿದರೆ ವ್ಯತಿರಿಕ್ತವಾಗಿ ಅತಿಥಿ ಶಿಕ್ಷಕರಿಗೆ ದಸರಾ ರಜೆಯ ಸಂಬಳ ಕಡಿತಗೊಳಿಸುತ್ತಿದೆ, ನಮಗೆ ಕುಟುಂಬವಿಲ್ಲವೆ. ನಾವುಗಳು ಹಬ್ಬ ಆಚರಣೆ ಮಾಡುವುದು ಹೇಗೆ? ರಜೆಯಲ್ಲಿ ಅತಿಥಿ ಶಿಕ್ಷಕರನ್ನು ಕೈ ಬಿಡಲಾಗುತ್ತದೆ. ಬೇಸಿಗೆ ರಜೆ ಸಂದರ್ಭದಲ್ಲಿ ಕುಟುಂಬ ನಿರ್ವಹಣೆ ಕಷ್ಟಕರವಾಗಿದೆ. ಅತಿಥಿ ಶಿಕ್ಷಕಮ ಕೂಲಿ ಕೆಲಸಕ್ಕೆ ಹೋಗಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ ಎಂದರು. ಹಲವು ಸಾರಿ ಸಂಬಂಧಪಟ್ಟ ಸಚಿವರಿಗೆ ಅಧಿಕಾರಿಗಳಿಗೆ ಮನವಿ ಮಾಡಿದರೂ ಇಲ್ಲಿಯವರೆಗೆ ಯಾರು ಸಹ ನಮ್ಮ ಸಮಸ್ಯೆಗೆ ಸ್ಪಂದಿಸಿಲ್ಲಾ, ಚರ್ಚಿಸುತ್ತೆವೆ. ಗಮನಿಸುತ್ತೆವೆ, ಆದೇಶ ಹೊರಡಿಸುತ್ತೆವೆ ಎಂಬ ಮೌಖಿಕ ಆದೇಶಗಳು ಬಿಟ್ಟು ಏನನ್ನು ಕಾರ್ಯರೂಪಕ್ಕೆ ಬಂದಿಲ್ಲ ಎಂದರು.



ಉದಯವಾಹಿನಿ ಚಿತ್ರ


> ಹಲವು ವರ್ಷಗಳಿಂದ ನಾವು ಸೇವೆ ಸಲ್ಲಿಸುತ್ತಿದ್ದರೂ ಸಹ ಕನಿಷ್ಠ ಯಾವುದೇ ಆರೋಗ್ಯ ವಿಮೆ, ಭವಿಷ್ಯ ನಿಧಿ, ಸೇವೆ ವಿಮೆ ನೀಡುತ್ತಿಲ್ಲಾ, ಅತಿಥಿ ಶಿಕ್ಷಕರು ಶಾಲಾ ಕರ್ತವ್ಯದಲ್ಲಿ ಮರಣ ಹೊಂದಿದರೆ ಅತಿಥಿ ಶಿಕ್ಷಕರ ಕುಟುಂಬ ಬೀದಿಗೆ ಬರಬೇಕಾಗುತ್ತದೆ, ಇದು ನಿಜಕ್ಕೂ ಮಾನವ ಹಕ್ಕುಗಳ ಉಲ್ಲಂಘನೆ ಸ್ವತಃ ಸರಕಾರವೇ ಮಾಡುತ್ತಿದೆ. -ಸಂಗಮೇಶ ಚಿದ್ರೆ

## ಟಿಎಪಿಸಿಎಂಎಸ್ ಗೆ ಅಧ್ಯಕ್ಷರಾಗಿ ಸಂಜೀವನ್ ಯಾಕಾಪೂರ ಅವಿರೋಧ ಆಯ್ಕೆ

• ಉದಯವಾಹಿನಿ, ಚಿಂಚೋಳಿ

ತಾಲ್ಲೂಕಾ ಒಕ್ಕಲುತನ ಹುಟ್ಟುವಳಿ ಮಾರಾಟ ಸಹಕಾರ ಸಂಘಕ್ಕೆ ಅಧ್ಯಕ್ಷರ ಉಪಾಧ್ಯಕ್ಷರ ನಡೆದ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಸಂಜೀವನ್ ರಮೇಶ ಯಾಕಾಪೂರ ಉಪಾಧ್ಯಕ್ಷ ಸ್ಥಾನಕ್ಕೆ ಅಬ್ದುಲ್ ಬಾಷೀದ್ ತಲಾ ಒಂದೊಂದು ನಾಮಪತ್ರ ಸಲ್ಲಿಕೆ ಆಗಿರುವುದರಿಂದ ಅಧ್ಯಕ್ಷರಾಗಿ ಸಂಜೀವನ್ ರಮೇಶ ಯಾಕಾಪೂರ ಉಪಾಧ್ಯಕ್ಷರಾಗಿ ಅಬ್ದುಲ್ ಬಾಷೀದ್ ಅವರನ್ನು ಮುಂದಿನ ಐದು ವರ್ಷಗಳ ಅವಧಿಗೆ ಅವಿರೋಧವಾಗಿ ಆಯ್ಕೆಗೊಳಿಸಲಾಗಿದೆ ಎಂದು ಚುನಾವಣಾಧಿಕಾರಿ ಜೀವನ್ ಧನಕರ್ ಸಹಾಯಕ ಚುನಾವಣಾಧಿಕಾರಿ ಬಸವರಾಜ ಪೋಲಾರಿ ತಿಳಿಸಿದ್ದಾರೆ.

**ಆಡಳಿತ ಮಂಡಳಿ ನಿರ್ದೇಶಕರು:-** ರಮೇಶ ಯಾಕಾಪೂರ, ಗುಂಡಮ್ಮ ಗುಂಡಪ್ಪ,ಬಲಭೀಮ ಸಿದ್ದಪ್ಪ,ಮುಕುಂದರಾವ ದೇಶಪಾಂಡೆ,ಪೀರಪ್ಪ ಶಿವರಾಯ,ಪ್ರಭುಲಿಂಗ ಲೇವಡಿ,ಬಕ್ಕಮ್ಮ ಬಸಪ್ಪ, ರಜೀಯಾಬೇಗಂ,ವೀರಶೇಟ್ಟಿ ಪಾಟೀಲ,ಕಾಶಿನಾಥ ರಾಯಪ್ಪ, ಸಂಘದ ಸಿಇಓ ಅತೀಕ್ ಪಾಷ ಚುನಾವಣಾ ಪ್ರಕ್ರಿಯೆಯಲ್ಲಿ ಭಾಗಿಯಾಗಿದ್ದರು. ಚುನಾವಣಾ ಪ್ರಕ್ರಿಯೆ ಮುಕ್ತಾಯ ನಂತರ ಅಭಿಮಾನಿಗಳು ಕಾರ್ಯಕರ್ತರು ಹೂಮಾಲೆ ಹಾಕಿ,ಗೂಗಲ್ ಹಚ್ಚಿ, ಪಟಾಕಿ ಸಿಡಿಸಿ ಸಂಭ್ರಮಿಸಿದರು.



ಉದಯವಾಹಿನಿ ಚಿತ್ರ

## ಮಹಿಳಾ ಪಿಎಸ್‌ಐಗೆ ಜೀವಬೆದರಿಕೆ ಹಾಕಿದ ವ್ಯಕ್ತಿಗೆ ಶಿಕ್ಷೆ

• ಉದಯವಾಹಿನಿ ಕಲಬುರಗಿ

ವ್ಯಕ್ತಿಯೊಬ್ಬ ಮಹಿಳಾ ಪಿಎಸ್‌ಐಗೆ ನಿಂದಿಸಿ ಜೀವ ಬೆದರಿಕೆ ಹಾಕಿದ ಆರೋಪ ಸಾಬೀತಾದ್ದರಿಂದ ಚಿಂಚೋಳಿಯ ಪ್ರಧಾನ ಸಿವಿಲ್ ನ್ಯಾಯಾಲಯ ಮತ್ತು ಜೆಎಂಎಫ್‌ಸಿ ನ್ಯಾಯಾಲಯದ ನ್ಯಾಯಾಧೀಶ ದತ್ತಕುಮಾರ ಜವಳಕರ್ ಅವರು ಅಪರಾಧಿಗೆ 15 ದಿನ ಸಾದಾ ಜೈಲು ಶಿಕ್ಷೆ ಮತ್ತು ಒಟ್ಟು 14,500 ರೂ ದಂಡ ವಿಧಿಸಿದ್ದಾರೆ ತೀರ್ಪು ನೀಡಿದ್ದಾರೆ. ಚಿಂಚೋಳಿಯ ಮಂಜುನಾಥ ಬಸವರಾಜ ಕೊರವಿ ಶಿಕ್ಷೆಗೆ ಗುರಿಯಾದ ವ್ಯಕ್ತಿ. ಕಳೆದ 2017 ರ ಜನವರಿ 22 ರಂದು ರಟಕಲ್ ಠಾಣೆ ಪಿಎಸ್‌ಐ ಅಕ್ಕಮಹಾದೇವಿ ಅವರು ಸರಕಾರಿ ಜೀಪಿನಲ್ಲಿ ಕರ್ತವ್ಯದ ಮೇಲೆ ಮಹಾಗಾಂವ ಕಡೆಗೆ ತೆರಳುತ್ತಿದ್ದಾಗ, ಜೀಪು ತಡೆದ ಮಂಜುನಾಥ ವಾಹನ ಅಪಘಾತವೊಂದರ ವಿಷಯದಲ್ಲಿ ವಾಗ್ವಾದಕ್ಕಿಳಿದು ಪಿಎಸ್ ಐ ಅವರನ್ನು ನಿಂದಿಸಿದ್ದರು. ಅಪಘಾತವಾದ ವಾಹನ ನನ್ನದಿದ್ದು,ನಾನು ವಾಹನ ನಿರೀಕ್ಷಕನಿದ್ದು, ನಿನಗೆ ಕಾನೂನು ಗೊತ್ತಿಲ್ಲ ಮುಂತಾಗಿ ನಿಂದಿಸಿ ಜೀವ ಬೆದರಿಕೆ ಹಾಕಿದ್ದರು ಎಂದು ಪ್ರಕರಣ ದಾಖಲಾಗಿತ್ತು. ಪ್ರಕರಣದ ವಾದ ವಿವಾದ ಆಲಿಸಿದ ನ್ಯಾಯಾಧೀಶರು ಶಿಕ್ಷೆಯ ಪ್ರಮಾಣ ಪ್ರಕಟಿಸಿ ಆದೇಶಿಸಿದ್ದಾರೆ. ಸರಕಾರದ ಪರವಾಗಿ ಸಹಾಯಕ ಸರಕಾರಿ ಅಭಿಯೋಜಕ ಶಾಂತಕುಮಾರ ಪಾಟೀಲ ಅವರು ವಾದ ಮಂಡಿಸಿದ್ದರು.

## ಯಾವುದೇ ಸಂಘ-ಸಂಸ್ಥೆ ನಿಷೇಧಿಸುವ ಚಿಂತನೆ ಇಲ್ಲ: ಎಚ್.ಕೆ.ಪಾಟೀಲ

• ಉದಯವಾಹಿನಿ ಬೆಳಗಾವಿ

ರಾಜ್ಯದಲ್ಲಿ ರಾಷ್ಟ್ರೀಯ ಸ್ವಯಂಸೇವಕ ಸಂಘ(ಆರ್‌ಎಸ್‌ಎಸ್) ಸೇರಿದಂತೆ ಯಾವುದೇ ಸಂಘ-ಸಂಸ್ಥೆ ಮತ್ತು ಸಂಘಟನೆಗಳನ್ನು ನಿಷೇಧಿಸುವ ಪ್ರಸ್ತಾವ, ಚಿಂತನೆ ಸರ್ಕಾರದ ಮುಂದೆ ಇಲ್ಲ ಎಂದು ಸಚಿವ ಎಚ್.ಕೆ.ಪಾಟೀಲ ಹೇಳಿದರು. ರಾಜ್ಯದಲ್ಲಿ ಆರ್ ಎಸ್ ಎಸ್ ನಿಷೇಧಿಸಲಾಗುತ್ತದೆಯೇ ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿದರು. ಬೆಳಗಾವಿಯಲ್ಲಿ ಈ ಬಾರಿಯೂ ಬದ್ಧತೆಯಿಂದ ವಿಧಾನಮಂಡಲ ಚಳಿಗಾಲದ ಅಧಿವೇಶನ ನಡೆಸುತ್ತೇವೆ. ಅದಕ್ಕೆ ಇನ್ನೂ ದಿನಾಂಕ ನಿಗದಿಯಾಗಿಲ್ಲ ಎಂದರು. ಬೆಳಗಾವಿಯಲ್ಲಿ ವಾಸಿಸುವ ಎಲ್ಲ ಭಾಷಿಕರೂ ನ.1ರಂದು ವೈಭವದಿಂದ ಕರ್ನಾಟಕ ರಾಜ್ಯೋತ್ಸವ ಆಚರಿಸಬೇಕು. ರಾಜ್ಯೋತ್ಸವಕ್ಕೆ ಪರ್ಯಾಯವಾಗಿ ಕರಾಳ ದಿನ ಆಚರಿಸುವವರ ವಿರುದ್ಧ ಜಿಲ್ಲಾಡಳಿತ ಸೂಕ್ತ ಕ್ರಮ ಕೈಗೊಳ್ಳಲಿದೆ ಎಂದರು.

## ತುರ್ತು ಪರಿಸ್ಥಿತಿಯಲ್ಲಿ ಸಿಪಿಆರ್ ಜೀವರಕ್ಷಕ: ವಿಜಯರೆಡ್ಡಿ

• ಉದಯವಾಹಿನಿ ಕಲಬುರಗಿ

ಮನುಷ್ಯನಿಗೆ ಹೃದಯ ಸಂಬಂಧಿ ಆರೋಗ್ಯ ಸಮಸ್ಯೆ ಎದುರಾದಾಗ ಸಿಪಿಆರ್ ಜೀವರಕ್ಷಕ ತುಂಬಾ ಅವಶ್ಯಕವಾಗಿದೆ ಎಂದು ಗೋಪಾಲ್ ಜಾವದ ನಸಿರ್‌ಂಗ್ ಕಾಲೇಜಿನ ಪ್ರಾಂಶುಪಾಲರಾದ ಡಾ. ವಿಜಯರೆಡ್ಡಿ ತಿಳಿಸಿದರು. ನಗರದಲ್ಲಿರುವ ಶ್ರೀ ಗೋಪಾಲ ಜಾಧವ್ ಕಾಲೇಜ ಆಫ್ ನಸಿರ್‌ಂಗ್ ನಲ್ಲಿ ಏರ್ಪಡಿಸಿದ ಕಾರ್ಡಿಯಾ ಪಲ್ಮನರಿ ಪುನರುಜ್ಜೀವನ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಪ್ರತಿಯೊಬ್ಬ ವ್ಯಕ್ತಿಗೂ ಎದೆ ನೋವು ಕಾಣಿಸಿಕೊಂಡಾಗ ಪ್ರಥಮ ಚಿಕಿತ್ಸೆ ಸಿ.ಪಿ.ಆರ್. ಜೀವ ರಕ್ಷಕವಾಗಿದೆ ಎಂದು ವಿದ್ಯಾರ್ಥಿಗಳಿಗೆ ತಾವೇ ಖುದ್ದಾಗಿ ಪ್ರಾಯೋಗಿಕವಾಗಿ ಮಾಡುವ ಮೂಲಕ ಹೇಳಿಕೊಟ್ಟರು.

ಈ ಸಂದರ್ಭದಲ್ಲಿ ಕಾಲೇಜಿನ ಕಾರ್ಯದರ್ಶಿಗಳು, ಬಿಎಸ್.ಸಿ. ನರ್ಸಿಂಗ್ ವಿದ್ಯಾರ್ಥಿಗಳು, ಕಾಲೇಜಿನ ಭೋಧಕ ಮತ್ತು ಭೋಧಕೇತರ ಸಿಬ್ಬಂದಿಗಳು ಹಾಜರಿದ್ದರು.

## ಸರ್ಕಾರಿ ಜಾಗದ ಅಕ್ರಮಕ್ಕೆ ಕಂದಾಯ ಇಲಾಖೆ ಬೇಲಿ

• ಉದಯವಾಹಿನಿ ಪುತ್ತೂರು

ಸರ್ಕಾರಿ ಜಮೀನಿನಲ್ಲಿ ಅಕ್ರಮವಾಗಿ ಶೆಡ್ ನಿರ್ಮಾಣ ಮಾಡಿ ಜಾಗವನ್ನು ಮಾರಾಟ ಮಾಡಲು ಪ್ರಯತ್ನಿಸಿದ ವ್ಯಕ್ತಿಗಳಿಬ್ಬರ ವ್ಯವಹಾರಕ್ಕೆ ಕಂದಾಯ ಇಲಾಖೆ ತಾತ್ಕಾಲಿಕ ಶೆಡ್ ತೆರವು ಮಾಡುವ ಮೂಲಕ ಅಕ್ರಮ ವ್ಯವಹಾರಕ್ಕೆ ಬೇಲಿ ಹಾಕಿದ ಘಟನೆ ನಡೆದಿದೆ.

ಪುತ್ತೂರಿನ ಚಿಕ್ಕಮುಡ್ನೂರು ಗ್ರಾಮ ವ್ಯಾಪ್ತಿಯ ನೆಕ್ಕರೆ ಎಂಬಲ್ಲಿ ಸರ್ವೆ ನಂ.101ರಲ್ಲಿ ಒಂದು ಎಕರೆ ಸ್ಥಳವನ್ನು ರವೂಫ್ ಹಾಗೂ ರಶೀದ್ ಎಂಬವರು ಒತ್ತುವರಿ ಮಾಡಿಕೊಂಡಿದ್ದರು. ಈ ಜಾಗದಲ್ಲಿ ತಾತ್ಕಾಲಿಕ ಶೆಡ್ ನಿರ್ಮಿಸಿ ನಕಲಿ ದಾಖಲೆ ಸೃಷ್ಟಿಸಿ ಸ್ಥಳವನ್ನು ಮಾರಾಟ ನಡೆಸಲು ಮುಂದಾಗಿದ್ದರು. ಈ ಬಗ್ಗೆ ಸ್ಥಳೀಯರೊಬ್ಬರ ದೂರಿನಂತೆ ತಹಶೀಲ್ದಾರ್ ಸ್ಥಳ ಪರಿಶೀಲನೆ ನಡೆಸಲು ನೋಟೀಸು ನೀಡಲಾಗಿತ್ತು. ಆದರೆ ಸ್ಥಳ ತನಿಖೆಗೆ ಅಧಿಕಾರಿಗಳು ಹೋದ ಸಂದರ್ಭದಲ್ಲಿ ಗ್ರಾಮ ಆಡಳಿತಾಧಿಕಾರಿ ಹಾಗೂ ಕಂದಾಯ ನಿರೀಕ್ಷಕರ ಮೇಲೆ ಹಲ್ಲೆ ನಡೆಸಲು ಅವರಿಬ್ಬರು ಮುಂದಾಗಿದ್ದರು. ದೂರು ನೀಡಿದ್ದ ಮಹಿಳೆಗೆ ಜಾತಿ ನಿಂದನೆ ಮಾಡಿದ್ದರು. ಈ ಹಿನ್ನಲೆಯಲ್ಲಿ ಪೊಲೀಸ್ ಇಲಾಖೆಯ ಸಹಕಾರದೊಂದಿಗೆ ಶುಕ್ರವಾರ ಸ್ಥಳಕ್ಕೆ ಬಂದ ಕಂದಾಯ ಇಲಾಖೆಯ ಅಧಿಕಾರಿಗಳು ಅಕ್ರಮವಾಗಿ ನಿರ್ಮಿಸಿದ್ದ ಶೆಡ್‌ನ್ನು ತೆರವುಗೊಳಿಸಿದ್ದಲ್ಲದೆ ಸರ್ಕಾರಿ ಜಾಗವನ್ನು ವಶಕ್ಕೆ ಪಡೆದುಕೊಂಡಿದ್ದಾರೆ. ಅಕ್ರಮ ಶೆಡ್ ತೆರವು ಹಾಗೂ ಸರ್ಕಾರಿ ಜಮೀನಿನ ವಶ ಕಾರ್ಯಾಚರಣೆಯ ನೇತೃತ್ವವನ್ನು ತಹಶೀಲ್ದಾರ್ ಆದೇಶದ ಮೇರೆಗೆ ಉಪ್ಪಿನಂಗಡಿ ಕಂದಾಯ ನಿರೀಕ್ಷಕ ಚಂದ್ರನಾಯಕ್ ವಹಿಸಿದ್ದರು. ಗ್ರಾಮ ಆಡಳಿತಾಧಿಕಾರಿ ಕವಿತಾ, ಗ್ರಾಮ ಸಹಾಯಕರಾದ ವೀರಪ್ಪ ಗೌಡ, ಮನೋಹರ್, ಪುರುಷೋತ್ತಮ, ಪುಷ್ಪರಾಜ್ ಹಾಗೂ ಪುತ್ತೂರು ನಗರಠಾಣೆಯ ಪೊಲೀಸ್ ಇದ್ದರು.



ಉದಯವಾಹಿನಿ ಚಿತ್ರ

**ಜಾತಿನಿಂದನೆ ಕೇಸ್**


ಸರ್ಕಾರಿ ಜಾಗವನ್ನು ಅತಿಕ್ರಮಿಸಿಕೊಂಡು ಅದನ್ನು ನಿವೇಶನಗಳನ್ನಾಗಿ ಮಾಡಿ ಮಾರಾಟ ಮಾಡಲು ಹುನ್ನಾರ ನಡೆಸಿರುವುದನ್ನು ಕಂದಾಯ ಇಲಾಖೆಗೆ ದೂರು ನೀಡುವ ಮೂಲಕ ಮಮತಾ ರಾಗಿಕುಮೇರು ಎಂಬವರು ಬೆಳಕಿಗೆ ತಂದಿದ್ದರು. ಸ್ಥಳ ಪರಿಶೀಲನೆ ವೇಳೆ ಹಾಗೂ ಅಕ್ರಮ ಶೆಡ್ ತೆರವು ಸಂದರ್ಭದಲ್ಲಿ ಮಮತಾ ರಾಗಿಕುಮೇರು ಎಂಬವರಿಗೆ ರವೂಫ್ ಹಾಗೂ ಈತನ ತಮ್ಮ ರಶೀದ್ ಸೇರಿಕೊಂಡು ಜಾತಿ ನಿಂದನೆ ಮಾಡಿದ್ದು, ಇವರಿಬ್ಬರ ವಿರುದ್ಧ ಜಾತಿನಿಂದನೆಯ ಪ್ರಕರಣ ದಾಖಲಿಸಲಾಗಿದೆ.

## ಸರ್ಕಾರಿ ವೈದ್ಯಕೀಯ ಕಾಲೇಜ್: ಸಿಎಂಗೆ ಮನವರಿಕೆ ಮಾಡಿದ್ದೇನೆ: ಸಚಿವ ಶಿವಾನಂದ ಪಾಟೀಲ

• ಉದಯವಾಹಿನಿ, ವಿಜಯಪುರ

ಜಿಲ್ಲೆಯಲ್ಲಿ ಖಾಸಗಿ ಸಹಭಾಗಿತ್ವದ ಬದಲಾಗಿ ಸರ್ಕಾರಿ ವೈದ್ಯಕೀಯ ಕಾಲೇಜು ಸ್ಥಾಪನೆ ಕುರಿತು ಮುಖ್ಯಮಂತ್ರಿಗಳಿಗೆ ಮನವರಿಕೆ ಮಾಡಿಕೊಡಲಾಗಿದೆ ಎಂದು ಜವಳಿ, ಕಬ್ಬು ಅಭಿವೃದ್ಧಿ, ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರಾದ ಶಿವಾನಂದ ಪಾಟೀಲ ಹೇಳಿದರು.

ಬೆಂಗಳೂರಿನಲ್ಲಿ ಮುಖ್ಯಮಂತ್ರಿಗಳು ಮೊನ್ನೆ ಕರೆದಿದ್ದ ಸಚಿವರ ಸಭೆಯಲ್ಲಿ ನಮ್ಮ ಜಿಲ್ಲೆಗೆ ಸರ್ಕಾರಿ ವೈದ್ಯಕೀಯ ಕಾಲೇಜು ಸ್ಥಾಪನೆ ಕುರಿತು ಮಾತನಾಡಿದ್ದೇನೆ. ಸಿದ್ಧರಾಮಯ್ಯ ಅವರು ಈ ಹಿಂದೆ ಮುಖ್ಯಮತ್ರಿಗಳಾಗಿದ್ದಾಗ ನಾನೇ ಮೂರು ಬಾರಿ ಸದನದಲ್ಲಿ ಪ್ರಶ್ನೆ ಮಾಡಿದ್ದೇನೆ ಎಂಬುದನ್ನು ಮುಖ್ಯಮಂತ್ರಿಗಳಿಗೆ ವಿವರಿಸಿದ್ದೇನೆ ಎಂದರು. 400 ಕೋಟಿ ರೂ. ಖರ್ಚಾಗುತ್ತದೆ ಎಂದು ಮುಖ್ಯಮಂತ್ರಿಗಳು ಹೇಳಿದಾಗ ಬೇರೆಯವರು 500 ಕೋಟಿ ರೂ. ಖರ್ಚು ಮಾಡಿದರೂ, ನಮ್ಮ ಜಿಲ್ಲೆಯಲ್ಲಿ ಅದರ ಅರ್ಧಕ್ಕಿಂತ ಕಡಿಮೆ ಖರ್ಚಿನಲ್ಲಿ ಸರ್ಕಾರಿ ವೈದ್ಯಕೀಯ ಕಾಲೇಜು ಆಗಲಿದೆ ಎಂದು ಮನವರಿಕೆ ಮಾಡಿದ್ದೇನೆ. ವೈದ್ಯಕೀಯ ಶಿಕ್ಷಣ ಸಚಿವರಿಗೂ ಹೇಳಿದ್ದು, ಅವರೂ ಒಪ್ಪಿದ್ದಾರೆ. ಸಚಿವ ಸಂಪುಟ ಸಭೆಯಲ್ಲೂ ಈ ವಿಷಯವನ್ನು ಚರ್ಚೆ ಮಾಡಿದಾಗ ಜಿಲ್ಲಾ ಉಸ್ತುವಾರಿ ಮಂತ್ರಿಗಳೂ ಸರ್ಕಾರಿ ವೈದ್ಯಕೀಯ ಕಾಲೇಜು ಸ್ಥಾಪನೆ ಕುರಿತು ಮಾತನಾಡಿದ್ದಾರೆ ಎಂದರು. ವಿಜಯಪುರ ವೈದ್ಯಕೀಯ ಕಾಲೇಜು ಸ್ಥಾಪನೆ ಕುರಿತು ಸ್ವಯಂ ಪ್ರೇರಿತ ಹೋರಾಟ ನಡೆಯುತ್ತಿದೆ. ಯಾವುದೇ ಪ್ರತಿಭಟನೆ ಒಂದು ಬೇಡಿಕೆ ಇಟ್ಟುಕೊಂಡು ನಡೆಯುತ್ತದೆ. ಧರಣಿ ಕುಳಿತವರು ಅಪರಾಧಿ-ನಿರಪರಾಧಿ ಎಂದು ಸಂಬೋಧಿಸುವುದು ಸರಿಯಲ್ಲ. ಯಾರದೋ ಕುಮ್ಮಕ್ಕಿನಿಂದ ಹೋರಾಟ ನಡೆಯುತ್ತಿದೆ ಎಂದು ಜಿಲ್ಲಾ ಉಸ್ತುವಾರಿ ಮಂತ್ರಿಗಳು ಹೇಳಿದ್ದಾರೆ ಎಂದು ಪತ್ರಕರ್ತರು ಪ್ರಶ್ನಿಸಿದಾಗ, ಯಾವ ದೃಷ್ಟಿಕೋನದಲ್ಲಿ ಹೇಳಿದ್ದಾರೋ ನನಗೆ ಗೊತ್ತಿಲ್ಲ, ಅವರನ್ನೇ ಕೇಳಿ ಎಂದರು. ಖಾಸಗಿ ಸಹಭಾಗಿತ್ವದ ವೈದ್ಯಕೀಯ ಕಾಲೇಜು ಸ್ಥಾಪನೆ ಕುರಿತು ನಿರ್ಧರಿಸಿದ್ದು ಬಿಜೆಪಿ ಸರ್ಕಾರದ ಅವಧಿಯಲ್ಲಿ. ನಮ್ಮ ಸರ್ಕಾರದ ಅವಧಿಯಲ್ಲಾಗಿಲ್ಲ. ಈ ಕುರಿತು ಮರು ಪರಿಶೀಲನೆ ಪ್ರಸ್ತಾವನೆ ಸಲ್ಲಿಸಬೇಕಿದ್ದು, ಕಾನೂನು ಪ್ರಕ್ರಿಯೆ ಮುಗಿದ ಮೇಲೆ ಸರಳವಾಗಿ ಕಾಲೇಜು ಸ್ಥಾಪನೆಗೆ ಅವಕಾಶ ಸಿಗಲಿದೆ ಎಂದರು.



## ದೂರು ದಾಖಲಾದರೆ ಭವಿಷ್ಯಕ್ಕೆ ಕುತ್ತು: ವಿದ್ಯಾರ್ಥಿಗಳಿಗೆ ಪೊಲೀಸರ ಕಿವಿ ಮಾತು

• ಉದಯವಾಹಿನಿ ಮಂಗಳೂರು

ಮಂಗಳೂರಿನ ಸಂತ ಜೋಸೆಫ್ ಎಂಜಿನಿಯರಿಂಗ್ ಕಾಲೇಜು (ಎಸ್‌ಜೆಇಸಿ) ಆಂಟಿ-ಡ್ರಗ್ ಸೆಲ್, ರಸಾಯನಶಾಸ್ತ್ರವಿಭಾಗ ಮತ್ತು ವಿದ್ಯಾರ್ಥಿ ಕಲ್ಯಾಣ ಘಟಕ ಮಂಗಳೂರು ನಗರ ಪೊಲೀಸ್ ಇಲಾಖೆಯ ಸಹಯೋಗದಲ್ಲಿ ಕಲಾಂ ಸಭಾಂಗಣದಲ್ಲಿ ಎಸ್‌ಜೆಇಸಿ ಎರಡನೇ ವರ್ಷದ ಬಿಇ ವಿದ್ಯಾರ್ಥಿಗಳಿಗಾಗಿ ನಶೆ ವಿರೋಧಿ ಜಾಗೃತಿ ಕಾರ್ಯಕ್ರಮವನ್ನು ಆಯೋಜಿಸಿತು.

ಮಂಗಳೂರು ನಗರ ಕಾನೂನು ಮತ್ತು ಸುವ್ಯವಸ್ಥೆ ಉಪ ಪೊಲೀಸ್ ಆಯುಕ್ತ ಮಿಥುನ್ ಎಚ್.ಎನ್. ಭಾಗವಹಿಸಿದರು. ಮಂಗಳೂರು ಗ್ರಾಮಾಂತರ ಪೊಲೀಸ್ ಠಾಣೆಯ ಪಿಎಸ್‌ಐ ಅರುಣ್ ಕುಮಾರ್, ಪೊಲೀಸ್ ಕಾನ್ಸ್‌ಟೇಬಲ್ ಪ್ರದೀಪ್, ವಿದ್ಯಾರ್ಥಿ ಕಲ್ಯಾಣ ಡೀನ್ ಡಾ. ಕೆ. ಜ್ಯೋತಿ ಹಾಗೂ ರಸಾಯನಶಾಸ್ತ್ರ ವಿಭಾಗದ ಮುಖ್ಯಸ್ಥೆ ಡಾ. ಪ್ರಮೀಳಾ ರೀಟಾ ಡಿಸೋಜಾ ಇದ್ದರು.

ಒಮ್ಮೆ ಪೊಲೀಸ್ ದೂರು ನಿಮ್ಮ ಹೆಸರಲ್ಲಿ ದಾಖಲಾದರೆ, ಭವಿಷ್ಯದಲ್ಲಿ ಸರ್ಕಾರಿ ಉದ್ಯೋಗ, ಪಾಸ್‌ಪೋರ್ಟ್ ಅಥವಾ ವೀಸಾ ಪಡೆಯುವುದು ಕಷ್ಟವಾಗಬಹುದು. ಆದ್ದರಿಂದ ವಿದ್ಯಾರ್ಥಿಗಳು ಜವಾಬ್ದಾರಿಯಾಗಿ ವರ್ತಿಸಬೇಕು, ತಮ್ಮ ಡೇಟಾವನ್ನು ರಕ್ಷಿಸಬೇಕು ಹಾಗೂ ಯಾವುದೇ ಅನುಮಾನಾಸ್ಪದ ಚಟುವಟಿಕೆ ಕಂಡುಬಂದರೆ ತಕ್ಷಣ ಪೊಲೀಸರಿಗೆ ಮಾಹಿತಿ ನೀಡಬೇಕು ಎಂದು ಸಂಪನ್ಮೂಲ ವ್ಯಕ್ತಿಗಳು ಸಲಹೆ ಮಾಡಿದರು.



ಉದಯವಾಹಿನಿ ಚಿತ್ರ

# ಅಧಿಕಾರಾವಧಿಯಲ್ಲಿ ಏನು ಮಾಡಿದ್ದೇವೆಂಬುದು ಮುಖ್ಯ

### ವೀರ ಜಡಗಣ್ಣ ಮತ್ತು ಬಾಲಣ್ಣ ಅವರ ಕಂಚಿನ ಮೂರ್ತಿ ಅನಾವರಣ ಹಾಗೂ ಮಹರ್ಷಿ ವಾಲ್ಮೀಕಿ ಜಯಂತಿ

• ಉದಯವಾಹಿನಿ ಮುಧೋಳ

ಬ್ರಿಟಿಷರ ವಿರುದ್ಧ ತಮ್ಮ ಸ್ವಾಭಿಮಾನಕ್ಕಾಗಿ ಹೋರಾಡಿ ಹುತಾತ್ಮರಾದ ಕರ್ನಾಟಕದ ವೀರ ಜಡಗಣ್ಣ ಮತ್ತು ಬಾಲಣ್ಣ ಅವರ ಚರಿತ್ರೆ ದೇಶದ ಜನಕ್ಕೆ ಮುಟ್ಟಬೇಕಿತ್ತು. ಇತಿಹಾಸವನ್ನು ಮುಚ್ಚಿ ಹಾಕುವ ಕೆಲಸವು ಮೊದಲಿನಿಂದಲೂ ಇದೆ' ಎಂದು ಲೋಕೋಪಯೋಗಿ ಇಲಾಖೆ ಸಚಿವ ಸತೀಶ ಜಾರಕಿಹೊಳಿ ಹೇಳಿದರು.

ವೀರ ಜಡಗಣ್ಣ ಮತ್ತು ಬಾಲಣ್ಣ ಅವರ ಕಂಚಿನ ಮೂರ್ತಿ ಅನಾವರಣ ಹಾಗೂ ಮಹರ್ಷಿ ವಾಲ್ಮೀಕಿ ಜಯಂತಿಯನ್ನು ನಗರದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಉದ್ಘಾಟಿಸಿ ಅವರು ಮಾತನಾಡಿದರು. 'ನಾವು ಎಷ್ಟು ದಿನ ಅಧಿಕಾರದಲ್ಲಿದ್ದೇವೆ ಎಂಬುದು ಮುಖ್ಯವಲ್ಲ ಸಮಾಜದ ಒಳತಿಗಾಗಿ ನಾವೇನು ಮಾಡಿದ್ದೇವೆ ಎನ್ನುವುದು ಮುಖ್ಯ ಎಂದು ಹೇಳಿದರು. ಮಾಜಿ ಸಚಿವ ರಾಜುಗೌಡ ನಾಯಕ ಮಾತನಾಡಿ, 'ಹಲಗಲಿ ಬೇಡರು ಶೂರರು. ಶಸ್ತ್ರವನ್ನು ತ್ಯಜಿಸದೇ ಬಲಿದಾನವಾದರು. ಅವರು ನಮ್ಮ ಸಮಾಜದ ಕಿರೀಟಪ್ರಾಯರು. ಸಮ್ಮ ಸಮಾಜವನ್ನು ಎಲ್ಲರೂ ಉಪಯೋಗಿಸುತ್ತಿದ್ದಾರೆ. ಸತೀಶ ಜಾರಕಿಹೊಳಿ ಅವರು ಮಾತನಾಡದೇ ಕಾರ್ಯಸಾಧಿಸುವುವವರು. ಅವರು ಹಾಕಿದ ಪ್ಲಾನ್ ಎಂದೂ ಹುಸಿ ಹೋಗಿಲ್ಲ ಅವರು ಶಸ್ತ್ರವನ್ನು ಕೆಳಗಿಡದೇ ಇದೇ ಅವಧಿಯಲ್ಲಿ ಮುಖ್ಯಮಂತ್ರಿಗಳಾಗಬೇಕು ಎಂಬುದು ರಾಜ್ಯದ ಜನತೆಯ ಆಶಯವಾಗಿದೆ. 2028ಕ್ಕೆ ನಾವೇ ಅಧಿಕಾರಕ್ಕೆ ಬರುತ್ತೇವೆ' ಎಂದರು. ಜಿಲ್ಲಾ ಉಸ್ತುವಾರಿ ಸಚಿವ ಆರ್.ಬಿ. ತಿಮ್ಮಾಪುರ ಮಾತನಾಡಿ, 'ಮಹರ್ಷಿ ವಾಲ್ಮೀಕಿ ರಾಮಾಯಣ ರಚಿಸಿದರು. ರಾಮಾಯಣದಲ್ಲಿ ಬದುಕಿನ ಆದರ್ಶ ಅಡಗಿದೆ. ಶೂರ ಜಡಗಣ್ಣ ಬಾಲಣ್ಣ ನಮ್ಮ ಮುಧೋಳ ತಾಲ್ಲೂಕಿನವರು ಎಂಬ ಹೆಮ್ಮೆ ಇದೆ. ಸಮಾಜದವರು ತಮ್ಮ ಮಕ್ಕಳಿಗೆ ಉನ್ನತ ಶಿಕ್ಷಣ ನೀಡಬೇಕು' ಎಂದು ಹೇಳಿದರು.

ಚಿತ್ರದುರ್ಗದ ಸಂಸದ ಗೋವಿಂದ ಕಾರಜೋಳ ಮಾತನಾಡಿ, ದೇಶದಲ್ಲಿ ಸ್ವಾತಂತ್ರ್ಯದ ಕಿಡಿ ಹತ್ತಿದ್ದೇ ಹಲಗಲಿ ಬೇಡರಿಂದ. 1857ರಲ್ಲಿ ಬ್ರಿಟಿಷರಿಗೆ ಸೆಡ್ಡು ಹೊಡೆದು ನಿಂತವರು ಜಡಗಣ್ಣ ಬಾಲಣ್ಣ. ಅವರ ಹೆಸರು ಶಾಶ್ವತವಾಗಿಸಲು ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿಯಲ್ಲಿ ರಾಜ್ಯದ ಎಲ್ಲಾ ಜಿಲ್ಲಾವಾರು ಜಿಲ್ಲೆಗೆ ಪ್ರಥಮ ಹಾಗೂ ದ್ವಿತೀಯ ಸ್ಥಾನ ಪಡೆದವರಿಗೆ ಜಡಗಣ್ಣ ಬಾಲಣ್ಣ ಹೆಸರಿನಲ್ಲಿ ರೂ.1 ಲಕ್ಷ ಬಹುಮಾನ ನೀಡಲಾಗಿತ್ತು. ಜಡಗಣ್ಣ ಬಾಲಣ್ಣ ಅವರ ಕುರಿತು ಪಠ್ಯ ಮಾಡಬೇಕು' ಎಂದು ಸಚಿವ ಜಾರಕಿಹೊಳಿ ಅವರಲ್ಲಿ ಮನವಿ ಮಾಡಿದರು. ರಾಜನಹಳ್ಳಿ ವಾಲ್ಮೀಕಿ ಗುರುಪೀಠದ ಪ್ರಸನ್ನಾನಂದ ಸ್ವಾಮೀಜಿ ಹಾಗೂ ಜ್ಞಾನೇಶ್ವರ ಮಠದ ಪೀಠಾಧಿಕಾರಿ ಬ್ರಹ್ಮಾನಂದ ಶ್ರೀ, ಬಂಡಿಗಣಿ ನೀಲಮಾಣಿಕ ಮಠದ ದಾನೇಶ್ವರ ಬಸವಗೋಪಾಲ ಸಾನ್ನಿಧ್ಯವಹಿಸಿದ್ದರು.

ಜಿಲ್ಲಾ ಪಂಚಾಯಿತಿ ಸಿಇಒ ಶಶಿಧರ ಕುರೇರ, ನಗರಸಭೆ ಅಧ್ಯಕ್ಷೆ ಸುನಂದಾ ತೇಲಿ, ವಿಜಯಪುರ ಮತ್ತು ಬಾಗಲಕೋಟೆ ಜಿಲ್ಲೆಯ ಕೆಎಂಎಫ್ ನಿರ್ದೇಶಕ ಲಕ್ಷ್ಮಣ ಮಾಲಗಿ, ವಾಲ್ಮೀಕಿ ಮಹಾಸಭಾ ಜಿಲ್ಲಾ ಘಟಕದ ಅಧ್ಯಕ್ಷ ದ್ಯಾಮಣ್ಣ ಗಾಳಿ, ತಾಲ್ಲೂಕು ಅಧ್ಯಕ್ಷ ಭೀಮಶಿ ತಳವಾರ, ಗೋವಿಂದಪ್ಪ ಕೌಲಗಿ, ಮಾರುತಿ ಕರೆನ್ನವರ, ಚನ್ನಬಸು ಮತ್ತೂರ, ಸುಭಾಷ ಗಸ್ತಿ, ಸತೀಶ ಕೋವಳಿ, ಉದಪುಡಿ ಇದ್ದರು.



ಉದಯವಾಹಿನಿ ಚಿತ್ರ

**2028ಕ್ಕೆ ನಾವೇ ಅಧಿಕಾರಕ್ಕೆ ಬರುತ್ತೇವೆ**

> ಹಲಗಲಿ ಹುತಾತ್ಮ ಜಡಗಣ್ಣ ಬಾಲಣ್ಣರ ಕುರಿತು ರಾಜ್ಯದ ಜನತೆ ಅರಿತುಕೊಳ್ಳಲು ಹಲಗಲಿ ಹೆಸರಿನ ಚಲನಚಿತ್ರದ ಚಿತ್ರೀಕರಣ ನಡೆಯುತ್ತಿದೆ. ಇಷ್ಟರಲ್ಲೇ ತೆರೆ ಕಾಣಲಿದೆ
> -ರಾಜುಗೌಡ ನಾಯಕ, ಮಾಜಿ ಸಚಿವ

# ಜೈಲು ವ್ಯವಸ್ಥೆ ಬಗ್ಗೆ ಸುಳ್ಳು ಹೇಳಿದರಾ ದರ್ಶನ್




ನಟ ದರ್ಶನ್ ತೂಗುದೀಪ ಜೈಲಿನಲ್ಲಿ ತಮಗೆ ಅಗತ್ಯ ಸೌಲಭ್ಯಗಳನ್ನು ನೀಡಲಾಗುತ್ತಿಲ್ಲ. ಜೈಲಧಿಕಾರಿಗಳು ನ್ಯಾಯಾಲಯದ ಆದೇಶವನ್ನು ಪಾಲಿಸುತ್ತಿಲ್ಲ ಎಂದು ಹಲವಾರು ದೂರುಗಳನ್ನು ನ್ಯಾಯಾಲಯದ ಮುಂದೆ ಹೇಳಿದ್ದರು. ಇದೀಗ ಕಾನೂನು ಸೇವಾ ಪ್ರಾಧಿಕಾರವು ಜೈಲಿಗೆ ಹೋಗಿ ಪರಿಸ್ಥಿತಿಗಳನ್ನು ವೀಕ್ಷಿಸಿ ವರದಿ ಸಲ್ಲಿಸಿದ್ದಾರೆ. ದರ್ಶನ್ ಆರೋಪ ಮಾಡಿದ್ದಕ್ಕೂ ಜೈಲಿನಲ್ಲಿರುವ ಪರಿಸ್ಥಿತಿಗೂ ದೊಡ್ಡ ಅಂತರವಿದೆ ಎನ್ನುತ್ತಿದೆ ವರದಿ.

ರೇಣುಕಾ ಸ್ವಾಮಿ ಪ್ರಕರಣದಲ್ಲಿ ನಟ ದರ್ಶನ್ ಜೈಲು ಸೇರಿದ್ದು, ಪರಪ್ಪನ ಅಗ್ರಹಾರ ಜೈಲಿನಲ್ಲಿ ದಿನಗಳನ್ನು ದೂಡುತ್ತಿದ್ದಾರೆ. ನಟ ದರ್ಶನ್ ಜೈಲು ಸೇರಿದಾಗಿನಿಂದಲೂ ಜೈಲಧಿಕಾರಿಗಳ ಬಗ್ಗೆ, ಜೈಲಿನಲ್ಲಿರುವ ವ್ಯವಸ್ಥೆಗಳ ಬಗ್ಗೆ ಒಂದಲ್ಲ ಒಂದು ದೂರುಗಳನ್ನು ಹೇಳುತ್ತಲೇ ಬಂದಿದ್ದಾರೆ. ಜೈಲಿನಲ್ಲಿ ತಮಗೆ ಕೆಲ ಪ್ರಮುಖ ಸೌಲಭ್ಯಗಳನ್ನು ನೀಡಲಾಗಿತ್ತಿಲ್ಲ ಎಂದು ದರ್ಶನ್ ಆರೋಪಿಸಿದ್ದು, ಒಮ್ಮೆಯಂತೂ ನ್ಯಾಯಾಧೀಶರ ಬಳಿ ವಿಷಕ್ಕಾಗಿ ಬೇಡಿಕೆ ಸಹ ಇಟ್ಟಿದ್ದರು. ದರ್ಶನ್, ಜೈಲಿನಲ್ಲಿ ಸೌಲಭ್ಯಗಳ ನಿರಾಕರಣೆ ಕುರಿತಂತೆ ನ್ಯಾಯಾಲಯದ ಮೆಟ್ಟಿಲೇರಿ, ಸ್ವತಃ ನ್ಯಾಯಾಧೀಶರೆ ಜೈಲಿಗೆ ಭೇಟಿ ನೀಡಿ ಪರಿಶೀಲನೆ ಮಾಡಬೇಕೆಂದು ಕೋರಿದ್ದರು. ಇದೀಗ ಕಾನೂನು ಸೇವೆಗಳ ಪ್ರಾಧಿಕಾರವು ಜೈಲಿಗೆ ಭೇಟಿ ನೀಡಿ ದರ್ಶನ್ ಸ್ಥಿತಿಯನ್ನು ಪರಿಶೀಲನೆ ನಡೆಸಿದ್ದು, 57 ನೇ ಸಿಸಿಹೆಚ್ ಕೋರ್ಟ್‌ಗೆ ವರದಿ ಸಲ್ಲಿಸಿದೆ. ಕಾನೂನು ಸೇವೆಗಳ ಪ್ರಾಧಿಕಾರ ಸಲ್ಲಿಸಿರುವ ವರದಿ ಗಮನಿಸಿದರೆ ದರ್ಶನ್ ಇಷ್ಟು ದಿನ ಸುಳ್ಳು ಆರೋಪಗಳನ್ನು ಮಾಡುತ್ತಿದ್ದರೆ ಎಂಬ ಅನುಮಾನ ಮೂಡುತ್ತಿದೆ ಮಾತ್ರವಲ್ಲದೆ ದರ್ಶನ್, ಬೇರೆ ವಿಚಾರಣಾಧೀನ ಕೈದಿಗಳಿಗೆ ಇಲ್ಲದ ಸವಲತ್ತುಗಳಿಗೆ ಬೇಡಿಕೆ ಇಡುತ್ತಿದ್ದಾರಾ ಎಂಬ ಅನುಮಾನ ಮೂಡಿದೆ. ಜೈಲಿಗೆ ಭೇಟಿ ನೀಡಿದ್ದ ಕಾನೂನು ಸೇವೆ ಪ್ರಾಧಿಕಾರಿ, ನಟ ದರ್ಶನ್‌ರ ಆರೋಗ್ಯ, ಅವರ ಜೈಲು ಬ್ಯಾರಕ್, ಅವರ ನಿತ್ಯದ ಕೆಲಸಗಳು ಎಲ್ಲವನ್ನೂ ವೀಕ್ಷಿಸಿ, ಸ್ವತಃ ನಟ ದರ್ಶನ್ ಜೊತೆಗೆ ಚರ್ಚೆ ನಡೆಸಿ ನ್ಯಾಯಾಲಯಕ್ಕೆ ವರದಿ ಸಲ್ಲಿಸಿದೆ. ಪ್ರಾಧಿಕಾರ ಸಲ್ಲಿಸಿರುವ ವರದಿಯ ಪ್ರಕಾರ ನಟ ದರ್ಶನ್ ಅನ್ನು ಇರಿಸಲಾಗಿರುವ ಸೆಲ್‌ನಲ್ಲಿ ಒಂದು ಭಾರತೀಯ ಶೈಲಿಯ ಮತ್ತು ಇನ್ನೊಂದು ವಿದೇಶಿ ಶೈಲಿಯ ಟಾಯ್ಲೆಟ್ ವ್ಯವಸ್ಥೆ ಇದೆ. ದರ್ಶನ್‌ಗೆ ಹಾಸಿಗೆ ದಿಂಬು ನೀಡಲಾಗಿಲ್ಲ ಎಂಬ ವಿಚಾರವನ್ನೂ ವರದಿಯಲ್ಲಿ ಉಲ್ಲೇಖಿಸಲಾಗಿದ್ದು, ವಿಚಾರಣಾಧೀನ ಕೈದಿಗಳಿಗೆ ಹೆಚ್ಚುವರಿ ಹಾಸಿಗೆ, ದಿಂಬು ನೀಡುವ ನಿಯಮವಿಲ್ಲ ಎಂದು ತಿಳಿಸಲಾಗಿದೆ. ದರ್ಶನ್ ಅವರು ಬಿಸಿಲನ್ನೇ ನೋಡಿಲ್ಲ ಎಂಬ ಆರೋಪಕ್ಕೆ ಸಂಬಂಧಿಸಿದಂತೆ, ಪ್ರತಿದಿನ ಒಂದು ಗಂಟೆ ವಾಕಿಂಗ್ ಮತ್ತು ಆಟ ಆಡಲು ಅವಕಾಶ ನೀಡಲಾಗಿದೆ.



ರಶ್ಮಿಕಾಗೆ ಸೆಡ್ಡು ಹೊಡೀತಾರಾ

# ದೈವ ಯಾವುದೇ ಅಭಯದ ನುಡಿ ನೀಡಿಲ್ಲ



ಕರಾವಳಿಯಲ್ಲಿ 'ಕಾಂತಾರ' ಹಾಗೂ ದೈವರಾಧಕರು ಫೈಟ್ ಜೋರಾಗಿದೆ. 'ಕಾಂತಾರ: ಚಾಪ್ಟರ್ 1' ಚಿತ್ರ ನೋಡಿ ಅನೇಕರು ದೈವವನ್ನು ಅನುಕರಿಸುವ ಪ್ರಯತ್ನ ಮಾಡುತ್ತಿದ್ದಾರೆ. ಇದರಿಂದ ದೈವಕ್ಕೆ ಅಪಚಾರ ಆಗುತ್ತಿದೆ ಎನ್ನುವ ಆರೋಪಗಳು ಕೇಳಿ ಬಂದವು. ಇತ್ತೀಚೆಗೆ ದೈವ ಹೇಳಿದ ಮಾತು ಕೂಡ ಚರ್ಚೆಗೆ ಕಾರಣ ಆಗಿತ್ತು. 'ದೈವ ನುಡಿದಿದ್ದು ಕಾಂತಾರ ಚಿತ್ರದ ಬಗ್ಗೆಯೇ' ಎಂದು ಅನೇಕರು ಹೇಳಿದ್ದರು. ಈ ಎಲ್ಲಾ ವಿಚಾರಗಳಿಗೆ ಆಡಳಿತ ಮಂಡಳಿ ಸ್ಪಷ್ಟನೆ ನೀಡಿದೆ. 'ದೈವ ಕಾಂತಾರ ಸಿನಿಮಾ ಬಗ್ಗೆ ಏನನ್ನೂ ಹೇಳಿಲ್ಲ' ಎಂದು ಆಡಳಿತ ಮಂಡಳಿ ಸ್ಪಷ್ಟನೆ ನೀಡಿದೆ.

'ಕಾಂತಾರ ಚಾಪ್ಟರ್ 1' ಸಿನಿಮಾ ರಿಲೀಸ್ ಆದ ಬಳಿಕ ಅನೇಕರು ದೈವದ ಅನುಕರಣೆ ಮಾಡುತ್ತಿದ್ದಾರೆ. ಥಿಯೇಟರ್ ಮುಂದೆ ಬಂದು ದೈವ ಬಂದಂತೆಲ್ಲ ನಡೆದುಕೊಂಡಿದ್ದಾರೆ. ದೈವದ ಅನುಕರಣೆ ಅನೇಕರಿಗೆ ಅಪಹಾಸ್ಯ ಮಾಡುತ್ತಿರುವ ರೀತಿ ಕಾಣಿಸಿದ್ದು, ದೈವಾರಾಧಕರು ವಿರೋಧ ಹೊರಹಾಕಿದ್ದರು. ಹೀಗಾಗಿ, ಕೆಲವರು ದೈವದ ಬಳಿ ಈ ಬಗ್ಗೆ ಪ್ರಶ್ನೆ ಕೇಳಿದ್ದರು. ಪಿಲಿಚಂದಿ ಹೆಸರಿನ ದೈವ ಈ ಬಗ್ಗೆ ಭವಿಷ್ಯ ನುಡಿದಿತ್ತು. 'ನನ್ನ ಹೆಸರಿನಲ್ಲಿ ಹಣ ಮಾಡುತ್ತಿರುವವರನ್ನು ನೋಡಿಕೊಳ್ಳುತ್ತೇನೆ. ಹಣವೆಲ್ಲ ಆಸ್ಪತ್ರೆ ಸೇರುವಂತೆ ಮಾಡುತ್ತೇನೆ. ನನ್ನನ್ನು ಅಪಚಾರ ಮಾಡುವವರಿಗೆ ಬುದ್ಧಿ ಕಲಿಸುತ್ತೇನೆ. ನೀವು ಹೋರಾಟವನ್ನು ಮುಂದುವರಿಸಿ. ನಾನು ನಿಮ್ಮ ಬೆನ್ನ ಹಿಂದೆ ಇದ್ದೇನೆ' ಎಂದು ದೈವ ನುಡಿದಿತ್ತು. ಮಂಗಳೂರು ತಾಲ್ಲೂಕಿನ ಬಜಪೆ ಸಮೀಪದ ಪಡುಪೆರಾರ ಕ್ಷೇತ್ರದಲ್ಲಿರುವ ಬ್ರಹ್ಮ ದೇವರು ಬಲವಾಂಡಿ-ಪಿಲ್ಚಂಡಿ ದೈವಸ್ಥಾನದ ಆಡಳಿತ ಮಂಡಳಿ ದೈವದ ನುಡಿ ಕುರಿತು ಸ್ಪಷ್ಟನೆ ನೀಡಿದೆ.

'ದೈವವು ನೀಡಿದ ಅಭಯ ನಡೆ ನುಡಿಗಳ ವಿಚಾರದಲ್ಲಿ ಗೊಂದಲ ಭಿನ್ನಾಭಿಪ್ರಾಯ ನಿರ್ಮಾಣವಾಗಿದೆ.

# ರೊಮ್ಯಾಂಟಿಕ್ ಅಲ್ಲ, ಪಕ್ಕಾ ಮಾಸ್ ಬಾಯ್



ಟೈಟಲ್ ಟೀಸರ್, ಹಾಡುಗಳಿಂದಲೇ ಸಿಕ್ಕಾಪಟ್ಟೆ ಎಕ್ಸ್‌ಪೆಕ್ಟೇಷನ್ ಕ್ರಿಯೇಟ್ ಮಾಡಿರೋ ಬ್ರ್ಯಾಟ್ ಸಿನಿಮಾ ಈಗ ಸಖತ್ ಸೌಂಡ್ ಮಾಡುತ್ತಿದೆ. ಶಶಾಂಕ್ ನಿರ್ದೇಶನದ ಈ ಸಿನಿಮಾದಲ್ಲಿ ಡಾರ್ಲಿಂಗ್ ಕೃಷ್ಣ ಹಾಗೂ ಮನೀಷ ಪ್ರಮುಖ ಪಾತ್ರದಲ್ಲಿ ನಟಿಸಿದ್ದಾರೆ. ಬ್ರ್ಯಾಟ್ ಅಂದ್ರೆ ಹಾಳಾದವನು, ಕೆಟ್ಟವನು ಎಂಬ ಅರ್ಥ ಇದೆ. ಹಂಗಾದ್ರೆ ಈ ಚಿತ್ರದ ನಾಯಕ ಯಾವ ಹಾದಿ ಹಿಡಿದಿದ್ದಾನೆ. ಯಾಕೆ ಅವ್ನು ಹಾಳಾದ ಎಂಬುದನ್ನ ನೀವು ಸಿನಿಮಾದಲ್ಲೇ ನೋಡಬೇಕು. ಆದ್ರೆ ಈಗ ರಿಲೀಸ್ ಆಗಿರೋ ಟ್ರೈಲರ್ ಇಂಟ್ರೆಸ್ಟಿಂಗ್ ಆಗಿದೆ. ಬೆಟ್ಟಿಂಗ್ ನಿಂದ ಹೇಗೆ ಯುವ ಸಮೂಹ ಹಾದಿ ತಪ್ತಾ ಇದೆ. ಬೇಗ ದುಡ್ಡು ಮಾಡಬೇಕು ಎಂಬ ಆಸೆಲಿ ಅಡ್ಡದಾರಿ ತುಳಿಯುತ್ತಿದೆ. ಭವಿಷ್ಯವನ್ನ ಹಾಳು ಮಾಡ್ಕೊತಾ ಇದೆ ಎಂಬುದನ್ನ ಇಲ್ಲಿ ಪಕ್ಕಾ ಎಂಟರ್ ಟೈನಿಂಗ್ ವೇನಲ್ಲಿ ಹೇಳ ಹೊರಟಿದ್ದಾರೆ. ಡ್ರ್ಯಾಗನ್ ಮಂಜು, ರಮೇಶ್ ಇಂದಿರಾ ಈ ಸಿನಿಮಾ ವಿಲನ್ ಆಗಿ ಕಾಣಿಸ್ಕೊಂಡಿದ್ದು, ಸದ್ಯ ಸಿನಿಮಾ ಮೇಲಿನ ಆಸಕ್ತಿಯನ್ನ ಟ್ರೈಲರ್ ಹೆಚ್ಚಿಸಿದೆ.. ನಿರ್ದೇಶಕ ಶಶಾಂಕ್ ಕ್ರೆಡಿಬಲಿಟಿ ಉಳಿಸಿಕೊಂಡಿರೋ ನಿರ್ದೇಶಕ ಆಗಿರೋದ್ರಿಂದ ಪ್ರತಿ ಸಿನಿಮಾದಲ್ಲೂ ಅವ್ರು ಹೊಸತನ್ನ ಟ್ರೈ ಮಾಡ್ತಾರೆ. ಸದಭಿರುಚಿಯ ಅಂಶಗಳ ಜೊತೆ ಸಿನಿಮಾ ಮಾಡ್ತಾರೆ ಎಂಬ ನಂಬುಗೆ ಸಿನಿರಸಿಕರಲ್ಲಿ ಇರೋದ್ರಿಂದ ಬ್ರ್ಯಾಟ್ ಸಹ ಒಂದೊಳ್ಳೆಯ ಸಿನಿಮಾ ಆಗುವ ಸೂಚನೆಯನ್ನ ಕೊಡ್ತಾ ಇದೆ. ಕನ್ನಡ ಚಿತ್ರರಂಗಕ್ಕೆ ಮತ್ತೊಂದು ಹಿಟ್ ಸಿನಿಮಾ ಸಿಗಲಿದ್ಯಾ ಅಂತ ಕಾದು ನೋಡಬೇಕು.

ಬ್ರ್ಯಾಟ್ ಅನ್ನೋ ಟೈಟಲ್ ನಲ್ಲೇ ಅರ್ಕ ಒತ್ತು ತೆಗೆದರೆ ಬ್ಯಾಟ್ ಅಂತ ಆಗುತ್ತದೆ. ಆಗಲೇ ಈ ಸಿನಿಮಾದಲ್ಲಿ ಕ್ರಿಕೆಟ್ ಬಗ್ಗೆ ಏನೋ ಸ್ಟೋರಿ ಇರುತ್ತೆ ಅನ್ನೋ ಊಹೆ ಸಿನಿರಸಿಕನಿಗೆ ಸಿಕ್ಕಿತ್ತು. ಇನ್ನು ಈ ಸಿನಿಮಾ ಟೀಸರ್ ರಿಲೀಸ್ ಆದ್ಮೇಲಂತೂ ಅದು 100% ಕಂಫರ್ಮ್ ಆಗಿತ್ತು.

ಸಿನಿಮಾ ಮೇಲಿನ ಆಸಕ್ತಿ

# ಏಜೆಂಟ್ ಮಿರ್ಚಿಯಾದ ಶ್ರೀಲೀಲಾ!

ಶ್ರೀಲೀಲಾ ಕನ್ನಡ ಸಿನಿಮಾದಿಂದ ಬಾಲಿವುಡ್‌ಗೆ ಎಂಟ್ರಿ ಕೊಟ್ಟು ಕಾರ್ತಿಕ್ ಆರ್ಯನ್, ಬಾಬಿ ಡಿಯೋಲ್ ಜೊತೆ ನಟಿಸುತ್ತಿದ್ದಾರೆ. ಧಮಾಕ ಹಿಟ್ ನಂತರ ಟಾಲಿವುಡ್, ಕಾಲಿವುಡ್, ಬಾಲಿವುಡ್‌ನಲ್ಲಿ ಬ್ಯುಸಿ. ಶ್ರೀಲೀಲಾ ಮುದ್ದು ಮುಖದ ಚೆಲುವೆ, ಕಿಸ್ಸಿಂಗ್ ಬ್ಯೂಟಿಯಾಗಿ ಕನ್ನಡ ಸಿನಿಮಾದಲ್ಲಿ ನಟಿಸಿದ್ದ ಈ ಆಕ್ಟರ್ ಕಂ ಡಾಕ್ಟರ್ ಈಗಂತು ಬಾಲಿವುಡ್ನಲ್ಲಿ ಏಜೆಂಟ್ ಮಿರ್ಚಿ ಅವತಾರದಲ್ಲಿ ಮಿಂಚೋಕೆ ರೆಡಿಯಾಗಿದ್ದಾರೆ. ಸಿಂಡ್ರೆಲಾ ಲುಕ್ ನೋಡಿದವರು ಲೇಡಿ ಜೇಮ್ಸ್ ಬಾಂಡ್ ಅಂತಿದ್ದಾರೆ. ಬಾಲಿವುಡ್‌ನಲ್ಲಿ ಶ್ರೀಲೀಲಾ ದೊಡ್ಡ ಮಟ್ಟದಲ್ಲಿ ಮಿಂಚೋ ಭರವಸೆ ಹುಟ್ಟಿಸಿದ್ದಾರೆ. ಕನ್ನಡತಿ ರಶ್ಮಿಕಾಗೂ ಸೈಡು ಹೊಡೆಯೋ ಸೂಚನೆ ಕೊಡ್ತಿದ್ದಾರೆ. ಲೇಡಿ ಜೇಮ್ಸ್ ಬಾಂಡ್ ಅವತಾರದಲ್ಲಿ ಮಿಂಚು ಹರಿಸೋಕೆ ಸಜ್ಜಾಗಿದ್ದಾರೆ. ನಿಮಗೆಲ್ಲಾ ಗೊತ್ತೇ ಇದೆ. ಕ್ಯೂಟ್ ಬ್ಯೂಟ್ ಶ್ರೀಲೀಲಾ ಕಾರ್ತಿಕ್ ಆರ್ಯನ್ ಜೊತೆ ರೊಮ್ಯಾಂಟಿಕ್ ಮೂವಿ ಮಾಡ್ತಿದ್ದಾರೆ. ಆ ಸಿನಿಮಾದ ಟೀಸರ್ ಈಗಾಗಲೇ ರಿಲೀಸ್ ಆಗಿದೆ. ಶ್ರೀಲೀಲಾ ಹಾಗೂ ಕಾರ್ತಿಕ್ ಅವ್ರ ಕೆಮಿಸ್ಟ್ರಿ ಕಂಡು ಬಾಲಿವುಡ್ ಮಂದಿಯೇ ಹುಬ್ಬೇರಿದ್ದಾರೆ. ಈಗಿರುವಾಗಲೇ ಏಕಾಏಕಿ ಹೊಸ ಗೆಟಪ್‌ನಲ್ಲಿ ಶ್ರೀಲೀಲಾ ಸರ್ ಪ್ರೈಸ್ ಕೊಟ್ಟಿದ್ದಾರೆ. ನೋಡಲು ಮುದ್ದು ಮುದ್ದಾಗಿರೋ ಈಕೆ ರಫ್ ಅಂಡ್ ಟಫ್ ಏಜೆಂಟ್ ಆಗಿಯೂ ಕಾಣಿಸ್ಬೋದಾ ಎಂಬ ಆಶ್ಚರ್ಯ ಹುಟ್ಟುವಂತೆ ಅವ್ರ ಲುಕ್ ರಿವೀಲ್ ಆಗಿದೆ. ಬಾಬಿ ಡಿಯೋಲ್ ನಟನೆಯ ನೆಕ್ಸ್ಟ್ ಸಿನಿಮಾದಲ್ಲಿ ಶ್ರೀಲೀಲಾ ಏಜೆಂಟ್ ಮಿರ್ಚಿಯಾಗಿ ಕಾಣಿಸಲಿದ್ದು ಹಿಂದಿ ಚಿತ್ರರಂಗದಲ್ಲಿ ಮತ್ತೊಂದು ದೊಡ್ಡ ಅವಕಾಶವನ್ನೇ ಬುಟ್ಟಿಗಾಕೊಂಡಿದ್ದಾರೆ.

# ನಿಖಾ ಕಬೂಲ್ ಹೇ



ದಂಗಲ್ ಖ್ಯಾತಿಯ ನಟಿ ಝೈರಾ ವಾಸಿಮ್ 24ನೇ ವಯಸ್ಸಿಗೆ ವಿವಾಹವಾಗಿದ್ದಾರೆ. ಧಾರ್ಮಿಕ ಕಾರಣಗಳಿಂದ ಚಿತ್ರರಂಗದಿಂದ ದೂರ ಸರಿದಿದ್ದ ಅವರು, ತಮ್ಮ ನಿಖಾ ಸಮಾರಂಭದ ಫೋಟೋಗಳನ್ನು ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಂಡಿದ್ದಾರೆ. ಅಭಿಮಾನಿಗಳಿಂದ ಶುಭಾಶಯಗಳ ಮಹಾಪೂರ ಹರಿದುಬಂದಿದೆ. ಪತಿಯ ಹೆಸರನ್ನು ಇನ್ನೂ ಬಹಿರಂಗಪಡಿಸಿಲ್ಲ.

'ದಂಗಲ್', 'ಸೀಕ್ರೆಟ್ ಸೂಪರ್ ' ಅಂತಹ ಸಿನಿಮಾಗಳಲ್ಲಿ ನಟಿಸಿ ಗಮನ ಸೆಳೆದ ಝೈರಾ ವಾಸಿಮ್ ಚಿತ್ರರಂಗದಿಂದ ದೂರ ಇದ್ದಾರೆ. ಅವರು ಈಗ ಸದ್ದಿಲ್ಲದೆ ವಿವಾಹ ಆಗಿದ್ದಾರೆ. ಅವರು ತಮ್ಮ ನಿಖಾ ಸಮಾರಂಭದ ಫೋಟೋಗಳನ್ನು ಸೋಶಿಯಲ್ ಮೀಡಿಯಾದಲ್ಲಿ ಹಂಚಿಕೊಂಡಿದ್ದಾರೆ. ಅವರಿಗೆ ಸೋಶಿಯಲ್ ಮೀಡಿಯಾದಲ್ಲಿ ಶುಭಾಶಯಗಳ ಸುರಿಮಳೆ ಬಂದಿದೆ. ಇನ್ನೂ ಕೆಲವರು ಇಷ್ಟು ಬೇಗ ಅವರು ಮದುವೆ ಆಗಬಾರದಿತ್ತು ಎಂಬ ಅಭಿಪ್ರಾಯ ಹೊರಹಾಕಿದ್ದಾರೆ. ಝೈರಾ ವಾಸಿಮ್ ಅವರು ಜನಿಸಿದ್ದು 2000ನೇ ಇಸ್ವಿಯಲ್ಲಿ. 15ನೇ ವಯಸ್ಸಿಗೆ ಅವರು ಚಿತ್ರರಂಗಕ್ಕೆ ಕಾಲಿಟ್ಟರು. ಕೇವಲ ನಾಲ್ಕು ವರ್ಷ ಮಾತ್ರ ಸಿನಿಮ ರಂಗದಲ್ಲಿ ಇದ್ದರು. 'ದಂಗಲ್' ಚಿತ್ರದ ಮೂಲಕ ಗಮನ ಸೆಳೆದರು.

24ನೇ ವಯಸ್ಸಿಗೆ ಮದುವೆ

# ಈ ಶಾಟ್ ಹೊಡೆದ್ರೆ ಇನ್ಮುಂದೆ ರನ್ ಇಲ್ಲ..!



ಅಂತರರಾಷ್ಟ್ರೀಯ ಕ್ರಿಕೆಟ್ ಮಂಡಳಿ ಕ್ರಿಕೆಟ್ ರೋಚಕತೆಯನ್ನು ಉಳಿಸಲು ಹೊಸ ನಿಯಮಗಳನ್ನು ಜಾರಿಗೆ ತರುತ್ತಿದೆ. ಕೆಲ ತಿಂಗಳ ಹಿಂದೆಯಷ್ಟೇ ಹಲವು ನಿಯಮಗಳನ್ನು ಪರಿಚಯಿಸಿದ್ದ ಐಸಿಸಿ ಇದೀಗ ಬ್ಯಾಟ್ಸ್‌ಮನ್‌ಗಳ ತಂತ್ರಕ್ಕೆ ಕಡಿವಾಣ ಹಾಕಲು ಮುಂದಾಗಿದೆ. ಈ ನಿಯಮದಿಂದ ಬೌಲರ್‌ಗಳಿಗೆ ಅನುಕೂಲವಾಗಲಿದೆ. ಕ್ರಿಕೆಟ್ ಅನ್ನು ರೋಮಾಂಚನಗೊಳಿಸಲು ಐಸಿಸಿ ಹೊಸ ನಿಯಮಗಳನ್ನು ಅಭಿವೃದ್ಧಿಪಡಿಸುವುದನ್ನು ಮುಂದುವರೆಸಿದೆ. ಇದೀಗ ಆಟವನ್ನು ಇನ್ನಷ್ಟು ಆಸಕ್ತಿದಾಯಕವಾಗಿಸಲು ಮತ್ತೊಂದು ಹೊಸ ನಿಯಮವನ್ನು ಪರಿಚಯಿಸಲಾಗಿದೆ. ಈ ನಿಯಮದಿಂದಾಗಿ ಬ್ಯಾಟ್ಸ್‌ಮನ್ ಇನ್ಮುಂದೆ ವಿಕೆಟ್ ಹಿಂದೆ ಹೋಗಿ ಶಾಟ್ ಬಾರಿಸುವಂತಿಲ್ಲ. ಒಂದು ವೇಳೆ ಶಾಟ್ ಬಾರಿಸಿದರೂ ಅದಕ್ಕೆ ರನ್ ನೀಡಲಾಗುವುದಿಲ್ಲ.

ಐಸಿಸಿ ಹೊಸ ನಿಯಮ

ಈ ಹೊಸ ಐಸಿಸಿ ನಿಯಮದ ಪ್ರಕಾರ, ಬ್ಯಾಟ್ಸ್‌ಮನ್ ಚೆಂಡನ್ನು ಆಡುವಾಗ ಸಂಪೂರ್ಣವಾಗಿ ಸ್ಟಂಪ್‌ಗಳ ಹಿಂದೆ ಹೋದರೆ ಅದನ್ನು ಕಾನೂನುಬಾಹಿರ ಎಂದು ಪರಿಗಣಿಸಲಾಗುತ್ತದೆ. ಒಂದು ವೇಳೆ ಸ್ಟಂಪ್ ಹಿಂದೆ ಹೋಗಿ ಶಾಟ್ ಬಾರಿಸುವಾಗ ಬ್ಯಾಟರ್‌ನ ಕೈ ಅಥವಾ ದೇಹದ ಭಾಗವು ಪಿಚ್‌ನಲ್ಲಿದ್ದರೆ ರನ್ ನೀಡಲಾಗುತ್ತದೆ. ಇಲ್ಲದಿದ್ದರೆ ಡೆಡ್ ರನ್ ಎಂದು ಘೋಷಿಸಲಾಗುತ್ತದೆ.

ಇತ್ತೀಚಿನ ದಿನಗಳಲ್ಲಿ ಬೌಲರ್‌ನನ್ನು ವಂಚಿಸಲು ಬ್ಯಾಟ್ಸ್‌ಮನ್‌ಗಳು ಸ್ಟಂಪ್‌ಗಳ ಹಿಂದೆ ಹೋಗಿ ಬ್ಯಾಟ್ ಬೀಸುವುದನ್ನು ನೀವು ನೋಡಿರುತ್ತೀರಿ. ಅದರಲ್ಲೂ ವೆಸ್ಟ್ ಇಂಡೀಸ್ ದಂತಕಥೆ ಕೀರನ್ ಪೊಲಾರ್ಡ್ ಇಂತಹ ಶಾಟ್‌ಗಳ ಮೂಲಕ ಹಲವು ಬಾರಿ ರನ್‌ಗಳಿಸಿದ್ದಾರೆ. ಬೌಲರ್‌ಗಳನ್ನು ತೊಂದರೆಗೊಳಿಸಲು ಮತ್ತು ಫೀಲ್ಡಿಂಗ್‌ಗೆ ಅಡ್ಡಿಪಡಿಸಲು ಬ್ಯಾಟ್ಸ್‌ಮನ್‌ಗಳು ಈ ತಂತ್ರಗಳತ್ತ ಮುಖ ಮಾಡಿದ್ದಾರೆ. ಆದರೆ ಈ ತಂತ್ರಕ್ಕೆ ಕಡಿವಾಣ ಹಾಕಲು ಐಸಿಸಿ ನಿರ್ಧರಿಸಿದೆ. ಅದರಂತೆ ಇದೀಗ ಹೊಸ ನಿಯಮವನ್ನು ಜಾರಿಗೊಳಿಸಲಾಗುತ್ತಿದೆ. ಅಂದರೆ ಬ್ಯಾಟರ್ ವಿಕೆಟ್ ಹಿಂದೆ ಹೋಗಿ ರನ್‌ಗಳಿಸಿದರೆ, ಆತನ ಕೈ ಅಥವಾ ಕಾಲು ಅಥವಾ ಯಾವುದೇ ಭಾಗವು ಪಿಚ್ ಮೇಲಿನ ಲೈನ್ ಮೇಲಿರಬೇಕು. ದೇಹದ ಯಾವುದೇ ಭಾಗ ಪಿಚ್‌ನ ಮೇಲಿನ ಲೈನ್‌ಯಲ್ಲಿರದೇ ರನ್‌ಗಳಿಸಿದರೆ ಅದನ್ನು ಕಾನೂನುಬದ್ಧ ಎಂದು ಪರಿಗಣಿಸಲಾಗುವುದಿಲ್ಲ ಎಂದು ತಿಳಿಸಲಾಗಿದೆ. ಐಸಿಸಿಯ ಈ ನಿಯಮವು ಬೌಲರ್‌ಗಳಿಗೆ ಸ್ವಲ್ಪ ಅನುಕೂಲವನ್ನು ನೀಡಲಿದೆ. ಏಕೆಂದರೆ ಇನ್ಮುಂದೆ ಬ್ಯಾಟ್ಸ್‌ಮನ್‌ಗಳು ತಮ್ಮ ಸ್ಥಾನದ ಬಗ್ಗೆ ಹೆಚ್ಚು ಜಾಗರೂಕರಾಗಿರಬೇಕು. ಈ ನಿಯಮವು ಟಿ20, ಏಕದಿನ ಮತ್ತು ಟೆಸ್ಟ್ ಸೇರಿದಂತೆ ಎಲ್ಲಾ ಸ್ವರೂಪಗಳಿಗೂ ಅನ್ವಯಿಸಲಿದೆ.

# ಟೆಸ್ಟ್‌ನಲ್ಲೂ ರಿಂಕು ಸಿಂಗ್ ಕಮಾಲ್

ಭಾರತ ಟಿ20 ತಂಡ ಫಿನಿಶರ್ ರಿಂಕು ಸಿಂಗ್ ಪ್ರಸ್ತುತ ನಡೆಯುತ್ತಿರುವ ರಣಜಿ ಟೂರ್ನಿಯಲ್ಲಿ ಉತ್ತರ ಪ್ರದೇಶ್ ಪರ ಕಣಕ್ಕಿಳಿಯುತ್ತಿದ್ದಾರೆ. ಕಾನ್ಪುರದಲ್ಲಿ ನಡೆಯುತ್ತಿರುವ ಆಂಧ್ರ ಪ್ರದೇಶ್ ವಿರುದ್ಧದ ಪಂದ್ಯದಲ್ಲಿ 5ನೇ ಕ್ರಮಾಂಕದಲ್ಲಿ ಕಣಕ್ಕಿಳಿದಿರುವ ರಿಂಕು ಸಿಂಗ್ ಭರ್ಜರಿ ಶತಕ ಸಿಡಿಸುವ ಮೂಲಕ ಮಿಂಚಿದ್ದಾರೆ. ರಣಜಿ ಟೂರ್ನಿಯ ಎಲೈಟ್ ಎ ಗ್ರೂಪ್ ಪಂದ್ಯದಲ್ಲಿ ರಿಂಕು ಸಿಂಗ್ ಭರ್ಜರಿ ಶತಕ ಸಿಡಿಸಿ ಮಿಂಚಿದ್ದಾರೆ. ಕಾನ್ಪುರದ ಗ್ರೀನ್ ಪಾರ್ಕ್ ಮೈದಾನದಲ್ಲಿ ನಡೆಯುತ್ತಿರುವ ಈ ಪಂದ್ಯದಲ್ಲಿ ಉತ್ತರ ಪ್ರದೇಶ್ ಹಾಗೂ ಆಂಧ್ರ ಪ್ರದೇಶ್ ತಂಡಗಳು ಮುಖಾಮುಖಿಯಾಗಿವೆ. ಈ ಮ್ಯಾಚ್‌ನಲ್ಲಿ ಆಂಧ್ರ ಪ್ರದೇಶ್ ತಂಡದ ನಾಯಕ ರಿಕಿ ಭುಯಿ ಬ್ಯಾಟಿಂಗ್ ಆಯ್ದುಕೊಂಡಿದ್ದರು.

ಅದರಂತೆ ಮೊದಲ ಇನಿಂಗ್ಸ್ ಆಡಿದ ಆಂಧ್ರ ಪರ ಶ್ರೀಕರ್ ಭರತ್ (142) ಹಾಗೂ ಶೇಖ್ ರಶೀದ್ (136) ಭರ್ಜರಿ ಶತಕ ಸಿಡಿಸಿದ್ದರು. ಈ ಶತಕಗಳ ನೆರವಿನೊಂದಿಗೆ ಆಂಧ್ರ ಪ್ರದೇಶ್ ತಂಡವು ಮೊದಲ ಇನಿಂಗ್ಸ್‌ನಲ್ಲಿ 470 ರನ್‌ಗಳಿಸಿ ಆಲೌಟ್ ಆಯಿತು. ಇದಕ್ಕುತ್ತರವಾಗಿ ಮೊದಲ ಇನಿಂಗ್ಸ್ ಆರಂಭಿಸಿದ ಉತ್ತರ ಪ್ರದೇಶ್ ಪರ ಆರಂಭಿಕ ದಾಂಡಿಗ ಮಾಧವ್ ಕೌಶಿಕ್ 54 ರನ್ ಬಾರಿಸಿದರೆ, ಮೂರನೇ ಕ್ರಮಾಂಕದಲ್ಲಿ ಕಣಕ್ಕಿಳಿದ ಆರ್ಯನ್ ಜುಯಲ್ 66 ರನ್ ಸಿಡಿಸಿದರು. ಇನ್ನು 5ನೇ ಕ್ರಮಾಂಕದಲ್ಲಿ ಕಣಕ್ಕಿಳಿದ ರಿಂಕು ಸಿಂಗ್ ಭರ್ಜರಿ ಬ್ಯಾಟಿಂಗ್ ಪ್ರದರ್ಶಿಸಿದರು.

ತಾಳ್ಮೆಯುತ ಬ್ಯಾಟಿಂಗ್‌ಗೆ ಒತ್ತು ನೀಡಿದ ರಿಂಕು ಸಿಂಗ್ ಆಕರ್ಷಕ ಹೊಡೆತಗಳೊಂದಿಗೆ ಗಮನ ಸೆಳೆದರು. ಅಲ್ಲದೆ 180 ಎಸೆತಗಳಲ್ಲಿ 2 ಭರ್ಜರಿ ಸಿಕ್ಸ್ ಹಾಗೂ 9 ಫೋರ್‌ಗಳೊಂದಿಗೆ ಶತಕ ಪೂರೈಸಿದರು. ಈ ಅಜೇಯ ಶತಕದೊಂದಿಗೆ ಉತ್ತರ ಪ್ರದೇಶ್ ತಂಡದ ಸ್ಕೋರ್ 125 ಓವರ್‌ಗಳ ಮುಕ್ತಾಯದ ವೇಳೆಗೆ 332 ರನ್ ಕಲೆಹಾಕಿದೆ. ಸದ್ಯ ರಣಜಿ ಟೂರ್ನಿಯಲ್ಲಿ ಕಣಕ್ಕಿಳಿಯುತ್ತಿರುವ ರಿಂಕು ಸಿಂಗ್ ಆಸ್ಟ್ರೇಲಿಯಾ ವಿರುದ್ಧದ ಟಿ20 ಸರಣಿಗೆ ಆಯ್ಕೆಯಾಗಿದ್ದಾರೆ. ಈ ಸರಣಿಯು ಅಕ್ಟೋಬರ್ 29 ರಿಂದ ಶುರುವಾಗಲಿದೆ.



# 7 ವಿಕೆಟ್ ಕಬಳಿಸಿ ಮಿಂಚಿದ ಮೊಹಮ್ಮದ್ ಶಮಿ



ರಣಜಿ ಟ್ರೋಫಿಯಲ್ಲಿ ಮೊಹಮ್ಮದ್ ಶಮಿ ಅದ್ಭುತ ಕಮ್‌ಬ್ಯಾಕ್ ಮಾಡಿದ್ದಾರೆ. ಗಾಯದಿಂದ ಚೇತರಿಸಿಕೊಂಡು ಬಂಗಾಳ ಪರ ಆಡಿ, 7 ವಿಕೆಟ್‌ಗಳನ್ನು ಕಬಳಿಸಿ ತಮ್ಮ ಫಿಟ್‌ನೆಸ್ ಸಾಬೀತುಪಡಿಸಿದರು. 40 ಓವರ್‌ಗಳ ಬೌಲಿಂಗ್ ಮೂಲಕ ತಾವು ಸಂಪೂರ್ಣ ಫಿಟ್ ಎಂದು ಸಾರಿದರು. ಆದರೆ, ಆಯ್ಕೆದಾರ ಅಜಿತ್ ಅಗರ್ಕರ್ ಇನ್ನೂ ಅವರ

ಟೀಂ ಇಂಡಿಯಾದ ಅನುಭವಿ ವೇಗಿ ಮೊಹಮ್ಮದ್ ಶಮಿ ಕಳೆದ ಏಳು ತಿಂಗಳಿನಿಂದ ರಾಷ್ಟ್ರೀಯ ತಂಡದ ಪರ ಆಡಿಲ್ಲ. ಚಾಂಪಿಯನ್ಸ್ ಟ್ರೋಫಿ ಬಳಿಕ ಇಂಜುರಿ ಸಮಸ್ಯೆಯಿಂದಾಗಿ ತಂಡದಿಂದ ದೂರ ಉಳಿದಿರುವ ಶಮಿ, ಇದೀಗ ದೇಶಿ ಟೂರ್ನಿ ರಣಜಿಯಲ್ಲಿ ಆಡುತ್ತಿದ್ದಾರೆ. 2025-26 ರ ರಣಜಿ ಟ್ರೋಫಿಯ ಮೊದಲ ಸುತ್ತಿನಲ್ಲಿ ಬಂಗಾಳ ಪರ ಕಣಕ್ಕಿಳಿದಿದ್ದ ಶಮಿ ತಮ್ಮ ಮಾರಕ ಬೌಲಿಂಗ್ ಮೂಲಕ ಎಲ್ಲರ ಗಮನ ಸೆಳೆದಿದ್ದಾರೆ. 2025-26 ರ ರಣಜಿ ಟ್ರೋಫಿಯ ಮೊದಲ ಸುತ್ತಿನಲ್ಲಿ, ಮೊಹಮ್ಮದ್ ಶಮಿ ಉತ್ತರಾಖಂಡ್ ವಿರುದ್ಧ ಆಡಿದರು. ಎರಡೂ ಇನ್ನಿಂಗ್ಸ್‌ಗಳಲ್ಲಿ ಅದ್ಭುತ ಬೌಲಿಂಗ್ ಮಾಡಿದ ಶಮಿ, ಮೊದಲ ಇನ್ನಿಂಗ್ಸ್‌ನಲ್ಲಿ 14.5 ಓವರ್‌ಗಳನ್ನು ಬೌಲ್ ಮಾಡಿ 37 ರನ್‌ಗಳಿಗೆ 3 ವಿಕೆಟ್‌ಗಳನ್ನು ಪಡೆದರು. ಗಮನಾರ್ಹ ಸಂಗತಿಯೇಂದರೆ ಕೇವಲ ನಾಲ್ಕು ಎಸೆತಗಳಲ್ಲಿ ಈ ಮೂರು ವಿಕೆಟ್‌ಗಳನ್ನು ಪಡೆದರು. ನಂತರ ಎರಡನೇ ಇನ್ನಿಂಗ್ಸ್‌ನಲ್ಲಿಯೂ ವಿನಾಶಕಾರಿ ಪ್ರದರ್ಶನ ನೀಡಿದ ಮೊಹಮ್ಮದ್ ಶಮಿ, 24.4 ಓವರ್‌ಗಳನ್ನು ಬೌಲಿಂಗ್ ಮಾಡಿ, ನಾಲ್ವರು ಬ್ಯಾಟ್ಸ್‌ಮನ್‌ಗಳನ್ನು ಔಟ್ ಮಾಡಿದರು. ಏಳು ವಿಕೆಟ್‌ಗಳನ್ನು ಕಬಳಿಸಿದರು.

# ಐಪಿಎಲ್ ಆದಾಯದಲ್ಲಿ ಭಾರೀ ಕುಸಿತ..!



ವಿಶ್ವದ ಶ್ರೀಮಂತ ಕ್ರಿಕೆಟ್ ಲೀಗ್ ಇಂಡಿಯನ್ ಪ್ರೀಮಿಯರ್ ಲೀಗ್‌ನ ಆದಾಯದಲ್ಲಿ ಭಾರೀ ಕುಸಿತ ಕಂಡು ಬಂದಿದೆ. ಕಳೆದ ಕೆಲ ವರ್ಷಗಳಿಂದ ಏರಿಕೆಯಲ್ಲಿ ಐಪಿಎಲ್ ಇಕೊಸಿಸ್ಟಂ ಆದಾಯವು ಕಳೆದ ಎರಡು ವರ್ಷಗಳಿಂದ ಇಳಿಮುಖದತ್ತ ಸಾಗುತ್ತಿದ್ದು, ಇದು ಭಾರತೀಯ ಕ್ರಿಕೆಟ್ ಮಂಡಳಿಯ ಚಿಂತೆಯನ್ನು ಹೆಚ್ಚಿಸಿದೆ. ಇಂಡಿಯನ್ ಪ್ರೀಮಿಯರ್ ಲೀಗ್ ವಿಶ್ವದ ಅತ್ಯಂತ ಶ್ರೀಮಂತ ಕ್ರಿಕೆಟ್ ಲೀಗ್ ಎಂಬುದರಲ್ಲಿ ಎರಡು ಮಾತಿಲ್ಲ. ಅದರಲ್ಲೂ ವಿಶ್ವದಲ್ಲೇ ಅತ್ಯಂತ ವೇಗವಾಗಿ ಬೆಳೆಯುತ್ತಿರುವ ಕ್ರೀಡಾ ಲೀಗ್ ಆಗಿಯೂ ಐಪಿಎಲ್ ಗುರುತಿಸಿಕೊಂಡಿದೆ. ಆದರೆ ಮೊದಲ ಬಾರಿಗೆ, ಐಪಿಎಲ್ ಬೆಳವಣಿಗೆಯಲ್ಲಿ ಭಾರೀ ಕುಸಿತ ಕಂಡಿದೆ. 2008 ರಲ್ಲಿ ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ಲೀಗ್ ಅನ್ನು ಪ್ರಾರಂಭಿಸಿದಾಗ, ಅದರ ಮೌಲ್ಯ 19,500 ಕೋಟಿ ರೂ.ಗಳಷ್ಟಿತ್ತು. ಆ ಸಂಖ್ಯೆ ಇದೀಗ 76,100 ಕೋಟಿ ರೂ.ಗಳನ್ನು ತಲುಪಿದೆ. ಆದರೆ ಇದು ಕುಸಿತದೊಂದಿಗೆ ಎಂಬುದು ಇಲ್ಲಿ ಉಲ್ಲೇಖಾರ್ಹ. ಅಕ್ಟೋಬರ್ 15 ರಂದು ಬಿಡುಗಡೆಯಾದ ಸಲಹಾ ಸಂಸ್ಥೆಯ ವರದಿಯ ಪ್ರಕಾರ, ಐಪಿಎಲ್‌ನ ಇಕೊಸಿಸ್ಟಂ ಮೌಲ್ಯವು ಸುಮಾರು 8% ರಷ್ಟು ಕಡಿಮೆಯಾಗಿದೆ. ಅಂದರೆ 2024 ರಲ್ಲಿ ಐಪಿಎಲ್ ಇಕೊಸಿಸ್ಟಂ ಮೌಲ್ಯ 82,700 ಕೋಟಿ ರೂ. ಇತ್ತು. ಈ ಬಾರಿ ಅದು 76,100 ಕೋಟಿ ರೂ.ಗೆ ಇಳಿದಿದೆ. ಅಂದರೆ ಒಂದೇ ವರ್ಷದಲ್ಲಿ ಐಪಿಎಲ್ ಮೌಲ್ಯಮಾಪನದಲ್ಲಿ 6,600 ಕೋಟಿ ರೂ. ವ್ಯತ್ಯಾಸ ಕಂಡು ಬಂದಿದೆ.

ಎರಡು ವರ್ಷಗಳಿಂದ ಇಳಿಮುಖ

# ಆಸ್ಟ್ರೇಲಿಯಾ ನೆಲದಲ್ಲಿ ಭಾರತದ ಏಕದಿನ ದಾಖಲೆ

ಭಾರತ ಮತ್ತು ಆಸ್ಟ್ರೇಲಿಯಾ ನಡುವಿನ 152 ಏಕದಿನ ಪಂದ್ಯಗಳಲ್ಲಿ ಆಸ್ಟ್ರೇಲಿಯಾ 84 ಗೆದ್ದು ಮೇಲುಗೈ ಸಾಧಿಸಿದೆ. ಆಸ್ಟ್ರೇಲಿಯಾದಲ್ಲಿ ಭಾರತದ ದಾಖಲೆ ಕಳಪೆಯಾಗಿದೆ (14 ಗೆಲುವು, 38 ಸೋಲು). ಇತ್ತೀಚೆಗೆ ಭಾರತ ಚಾಂಪಿಯನ್ಸ್ ಟ್ರೋಫಿ ಸೆಮಿಫೈನಲ್ ಗೆದ್ದರೂ, 2023ರ ವಿಶ್ವಕಪ್ ಫೈನಲ್ ಸೋತಿತು. ಮುಂಬರುವ ಸರಣಿಯಲ್ಲಿ ದ್ವಿಪಕ್ಷೀಯ ಸರಣಿ ದಾಖಲೆ ಸಮಬಲಗೊಳಿಸಲು ಭಾರತ ಪ್ರಯತ್ನಿಸುತ್ತಿದೆ. ಭಾರತ ತಂಡ ಪ್ರಸ್ತುತ ಆಸ್ಟ್ರೇಲಿಯಾ ಪ್ರವಾಸದಲ್ಲಿದ್ದು,



ಉಭಯ ತಂಡಗಳ ನಡುವಿನ ಮೂರು ಪಂದ್ಯಗಳ ಏಕದಿನ ಸರಣಿ ಇದೇ ಭಾನುವಾರದಿಂದ ಅಂದರೆ ಅಕ್ಟೋಬರ್ 19 ರಿಂದ ಆರಂಭವಾಗಲಿದೆ. ಮೊದಲ ಪಂದ್ಯ ಪರ್ತ್ ಮೈದಾನದಲ್ಲಿ ನಡೆಯಲಿದ್ದು, ಯುವ ಆರಂಭಿಕ ಶುಭ್ ಮನ್ ಗಿಲ್ ಭಾರತದ ನಾಯಕತ್ವ ವಹಿಸುತ್ತಿರುವುದರಿಂದ ಈ ಪಂದ್ಯದ ಮೇಲೆ ಎಲ್ಲರ ದೃಷ್ಟಿ ನೆಟ್ಟಿದೆ. ಅಲ್ಲದೆ ರೋಹಿತ್ ಶರ್ಮಾ, ವಿರಾಟ್ ಕೊಹ್ಲಿ 7 ತಿಂಗಳುಗಳ ನಂತರ ಕ್ರಿಕೆಟ್ ಮೈದಾನದಲ್ಲಿ ಕಾಣಿಸಿಕೊಳ್ಳುತ್ತಿರುವುದು ಕೂಡ ಅಭಿಮಾನಿಗಳಿಗೆ ಹಬ್ಬದ ವಾತಾವರಣ ಸೃಷ್ಟಿ ಮಾಡಿದೆ. ಆದಾಗ್ಯೂ ಆಸ್ಟ್ರೇಲಿಯಾ ತಂಡವನ್ನು ಅವರ ನೆಲದಲ್ಲಿ ಮಣಿಸುವುದು ಎಂದಿಗೂ ಸುಲಭವಲ್ಲ. ಇದಕ್ಕೆ ಪೂರಕವಾಗಿ ಅಂಕಿಅಂಶಗಳು ಕೂಡ ಟೀಂ ಇಂಡಿಯಾದ ವಿರುದ್ಧವಿರುವ ಕಾರಣ ಗಿಲ್ ಪಡೆ ಸರಣಿ ಗೆಲುವಿಗೆ ಸಾಕಷ್ಟು ಬೆವರು ಹರಿಸಬೇಕಾಗಿದೆ.

ಹಬ್ಬದ ವಾತಾವರಣ ಸೃಷ್ಟಿ

**ಏಕದಿನದಲ್ಲಿ ಆಸ್ಟ್ರೇಲಿಯಾದ ಮೇಲುಗೈ:** ಭಾರತ ಮತ್ತು ಆಸ್ಟ್ರೇಲಿಯಾ ಇಲ್ಲಿಯವರೆಗೆ 152 ಏಕದಿನ ಪಂದ್ಯಗಳನ್ನು ಆಡಿವೆ. ಇದರಲ್ಲಿ ಆಸ್ಟ್ರೇಲಿಯಾ ಮೇಲುಗೈ ಸಾಧಿಸಿದ್ದು, 84 ಪಂದ್ಯಗಳನ್ನು ಗೆದ್ದಿದ್ದರೆ, ಭಾರತ 52 ಪಂದ್ಯಗಳನ್ನು ಗೆದ್ದಿದೆ.

Printed by : A. BALACHANDRA, Printed at : RAJHANS ENTERPRISES No. 134, 4th Main Road, Industrial Town, Rajajinagar, Bengaluru - 560044, Karnataka. Owned By, Published By, Editor :T. HOMBE GOWDA, No. 1230, Jayamahal, Ground Floor, 13th Cross, 2nd Phase, Girinagar, Bengaluru - 560 085, Karnataka. Email Id: udayavahininews@yahoo.com , epaper.udayavahini.in www.udayavahini.in Udaya vahini news Udaya vahini news
ಉದಯವಾಹಿನಿ ಪತ್ರಿಕೆ ಹೆಸರಿನಲ್ಲಿ ಯಾರಾದರೂ ಬ್ಲ್ಯಾಕ್‌ಮೇಲ್ ಮಾಡಿದರೆ ಅಥವಾ ಹೆಸರು ದುರ್ಬಳಕೆ ಮಾಡಿಕೊಳ್ಳುತ್ತಿದ್ದರೆ ಕೂಡಲೇ ಈ ನಂಬರ್‌ಗೆ ಕರೆ ಮಾಡಿ: 9448225966